ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಪಾಕಿಸ್ತಾನಕ್ಕೆ ಟಿಕೆಟ್ ಮಾಡಿಸಿದವ ಮಂಗಳೂರು ಸಬ್‌ಜೈಲಿನಲ್ಲಿ

ಸಂಪುಟ 10 | ಸಂಚಿಕೆ 29 | ಪುಟ 16 | ಜುಲೈ 17, 2016 | ರೂ. 10/-

web: www.janashakthi.co.in e-mail : js_weekly@yahoo.com



ಭೂಮಿಗಾಗಿ ಜೈಲ್ ಭರೋ ರೈತರ ರಣ ಕಹಳೆ





ವಸೂಲಾಗದ ಕಾರ್ಪೊರೇಟ್ ಸಾಲಗಳ ಹೊರಲಾಗದ ಹೊರೆ



ಬ್ರೆಕ್ಸಿಟ್: ಇಯು ಗುಲಾಮಗಿರಿಯಿಂದ ಬಿಡುಗಡೆ ಜಾಗತೀಕರಣದ ವಿರುದ್ಧ ಬಂಡಾಯ



ಸೆಪ್ಟೆಂಬರ್ 2 ಸಾರ್ವತ್ರಿಕ ಮುಷ್ಕರದತ್ತ...

ಗುಲಾಮಗಿರಿ ಹೇರುವ ತಿದ್ದುಪಡಿಗಳು ಬೇಡವೇ ಬೇಡ

ಈಗ ಬಿಜೆಪಿಯೊಳಗಿನ ಬೀದಿ ರಂಪಾಟ



ಬೆಂಗಳೂರಿನಲ್ಲಿ ಅಖಿಲ ಭಾರತ ಕಿಸಾನ್ ಮಂಡಳಿ ಸಭೆ

ಮೋದಿ ಸರ್ಕಾರದ ವಂಚನೆಯ ವಿರುದ್ಧ ರೈತಾಪಿ ಜನರ ದೇಶವ್ಯಾಪಿ ಹೋರಾಟದ ರಣಕಹಳೆ

ಜುಲೈ 1ರಿಂದ 3 ರವರೆಗೆ ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಅಖಿಲ ಭಾರತ ಕಿಸಾನ್ ಮಂಡಳಿಯ ಸಭೆ ಬಿಜೆಪಿ ಸರ್ಕಾರ ಮತ್ತು ಅದರ ರೈತ–ವಿರೋಧಿ ನೀತಿಗಳ ವಿರುದ್ಧ ವಿಷಯಾಧಾರಿತ ಐಕ್ಯತೆಯೊಂದಿಗೆ ಬೃಹತ್ ಹೋರಾಟಗಳನ್ನು ನಡೆಸಲು ತೀರ್ಮಾನಿಸಿದೆ. ಆಗಸ್ಟ್ 16ರಿಂದ 31 ರವರೆಗೆ ಎರಡು ವಾರಗಳ ಕಾಲ ಆಂದೋಲವನ್ನು ನಡೆಸಲಾಗುವುದು ಮತ್ತು ಸೆಪ್ಟೆಂಬರ್ 1 ರಂದು ಬೇಡಿಕೆ ದಿನವನ್ನು ಆಚರಿಸಲಾಗುವುದು ಎಂದು ಸಭೆ ಪೂರ್ಣಗೊಂಡ ನಂತರ ಬೆಂಗಳೂರಿನಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತ ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮುಲ್ಲ ತಿಳಿಸಿದ್ದಾರೆ.

ಅಲ್ಲದೇ ನವ್ಹೆಂಬರ್ 5ಕ್ಕೆ ದೇಶದ ನಾಲ್ಕು ಕಡೆಗಳಿಂದ –ಕನ್ಯಾಕುಮಾರಿ, ಮಧುರೈ, ಕಲ್ಕತ್ತಾ ಹಾಗೂ ಜಮ್ಮುವಿನಿಂದ –ರೈತರ ಬೃಹತ್ ಜಾಥಾಗಳನ್ನು ಆಯೋಜಿಸಲಿದ್ದು, ಕನ್ಯಾಕುಮಾರಿ ಹಾಗೂ ಮಧುರೈನಿಂದ ಆರಂಭಗೊಳ್ಳುವ ಜಾಥಾಗಳು ಕರ್ನಾಟಕದಲ್ಲಿ ಸಂಚರಿಸುವವು.

ದೇಶವ್ಯಾಪಿ ಸಂಚರಿಸಿದ ಜಾಥಾಗಳು ನವ್ಹೆಂಬರ್ 24ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಸಮಾವೇಶಗೊಳ್ಳಲಿದ್ದು ಅಂದು ಲಕ್ಷಾಂತರ ರೈತರು ಪಾಲ್ಗೊಳ್ಳುವ ಬೃಹತ್ ರ್ಯಾಲಿ ನಡೆಯುತ್ತದೆ ಎಂದು ಹನ್ನನ್ ಮುಲ್ಲ ತಿಳಿಸಿದ್ದಾರೆ.

ಬಿಜೆಪಿ ಸರ್ಕಾರವು ರೈತರಿಗೆ **'ಒಳ್ಳೆಯ ದಿನಗಳನ್ನು'** ತರಲಿದ್ದು, ರೈತರ ಆತ್ಮಹತ್ಯೆಗಳನ್ನು ನಿಲ್ಲಿಸಲಾಗುವುದೆಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಭರವಸೆ ನೀಡಿದ್ದರು. ಕೃಷಿ ಮತ್ತು ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಸಾರ್ವಜನಿಕ ಬಂಡವಾಳ ಹೂಡಿಕೆ, ಕೃಷಿ ಉತ್ಪಾದನಾ ವೆಚ್ಚದ ಮೇಲೆ ಕನಿಷ್ಟ ಶೇ. 50ರಷ್ಟು ಲಾಭವನ್ನು ಖಾತರಿ ಪಡಿಸುವುದು, ಕಡಿಮೆ ಬೆಲೆಯ ಕೃಷಿ ಲಾಗುವಾಡುಗಳು ಮತ್ತು ಕಡಿಮೆ ಬಡ್ಡಿಯ ಸಾಲ, ಕೃಷಿಯಲ್ಲಿ ಹೊಸ ತಂತ್ರಜ್ಞಾನಗಳನ್ನು ಮತ್ತು ಅಧಿಕ ಇಳುವರಿ ಬೀಜಗಳನ್ನು ಪರಿಚಯಿಸುವುದು, ಕೃಷಿಗೆ ರೇಗಾ ಯೋಜನೆಯನ್ನು ಲಿಂಕ್ ಮಾಡುವುದು, ನೈಸರ್ಗಿಕ ವಿಕೋಪಗಳಲ್ಲಿ ಬೆಳೆ ನಾಶಕ್ಕೆ ಪರಿಹಾರವಾಗಿ ಕೃಷಿ ವಿಮೆ, ಗ್ರಾಮೀಣ ಸಾಲ ಸೌಲಭ್ಯವನ್ನು ವಿಸ್ತರಿಸಿ ಬಲಪಡಿಸುವುದು, ನೀರಾವರಿ ಸೌಲಭ್ಯವನ್ನು ವಿಸ್ತರಿಸುವುದು, ಬೆಲೆ ಏರಿಳಿತದಿಂದ ರಕ್ಷಿಸಲು ಬೆಲೆ ಸ್ಥಿರ ನಿಧಿ, 60 ವರ್ಷಕ್ಕೂ ಹೆಚ್ಚಿನ ವಯಸ್ಸಿನ ಕೃಷಿಕರಿಗೆ ಕಲ್ಯಾಣ ಕ್ರಮಗಳು, ಇತ್ಯಾದಿಗಳು ಬಿಜೆಪಿ ಸರ್ಕಾರ ನೀಡಿದ್ದ ಭರವಸೆಗಳು ವಂಚನೆಯಾಗಿದ್ದು ಇವುಗಳ ವಿರುದ್ಧ ಎಐಕೆಎಸ್ ಆಂದೋಲನಕ್ಕೆ ಕರೆ ನೀಡಿದೆ ಎಂದು ಹನ್ನನ್ ಮುಲ್ಲ ಹೇಳಿದರು.

ಕೃಷಿ ಬೆಳೆಗೆ ಉತ್ತಮ ಬೆಲೆ ನೀಡಲು ಕೃಷಿ ಉತ್ಪಾದನಾ ವೆಚ್ಚದ ಮೇಲೆ ಕನಿಷ್ಟ ಶೇ. 50ರಷ್ಟು ಲಾಭವನ್ನು ನೀಡಬೇಕೆಂಬ ಡಾ: ಸ್ವಾಮಿನಾಥನ್ ಆಯೋಗದ ಶಿಫಾರಸ್ಸನ್ನು "ಮಾರುಕಟ್ಟೆಯನ್ನು ತಿರುಚಿದಂತಾಗುತ್ತದೆಂಬ" ನೆಪವೊಡ್ಡಿ ಅದನ್ನು ಜಾರಿ ಮಾಡಲಾಗದು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅಫಿಡವಿಟ್ ಸಲ್ಲಿಸಿದೆ. ಅಲ್ಲದೇ, ಕೇಂದ್ರ ಸರ್ಕಾರವು ನಿಗದಿಪಡಿಸಿದ ಕನಿಷ್ಟ ಬೆಂಬಲ ಬೆಲೆಗಿಂತ ಹೆಚ್ಚಿನ ಬೆಲೆ ನೀಡುತ್ತಿರುವ ರಾಜ್ಯಗಳಿಂದ ಧಾನ್ಯಗಳನ್ನು ಖರೀದಿ ಮಾಡಿಕೊಳ್ಳದೇ ನಿಷೇಧ ಮಾಡುವುದಾಗಿ ಬೆದರಿಕೆ ಒಡ್ಡಿದೆ ಎಂದು ಕಿಡಿಕಾರಿದರು. ಧಾನ್ಯಗಳನ್ನು ಸಂಗ್ರಹಿಸಿಡುವ ಪ್ರಮಾಣವನ್ನು ಬಿಜೆಪಿ ಸರ್ಕಾರವು ಸಡಿಲಿಸಿರುವ ಕಾರಣ, ಮಧ್ಯಮವರ್ತಿಗಳು ಮತ್ತು ದೊಡ್ಡ ಕಾರ್ಪೊರೇಟ್‌ಗಳು ಬೇಳೆ ಕಾಳುಗಳನ್ನು ಮಾರುಕಟ್ಟೆಯಲ್ಲಿ ಕೆಜಿಯೊಂದಕ್ಕೆ 150ರಿಂದ 220ಕ್ಕೆ ಮಾರುತ್ತಾ ಅಪಾರ ಲಾಭಗಳನ್ನು ಮಾಡುತ್ತಿದ್ದರೆ, ರೈತರಿಗೆ ಕೇವಲ ರೂ. 30ರಿಂದ 40 ಮಾತ್ರವೇ ಸಿಗುತ್ತಿದೆ.

17 ರಾಜ್ಯಗಳಲ್ಲಿ, ರೈತ ಕುಟುಂಬಗಳ ಆದಾಯದಲ್ಲಿ ಹೆಚ್ಚಳವಾಗದೇ ಇರುವುದರಿಂದ ಪ್ರತಿ ತಿಂಗಳು ಕುಟುಂಬವೊಂದು ಸರಾಸರಿ ರೂ. 1,666 ಮಾತ್ರವೇ ಗಳಿಸುತ್ತಿದೆ. ಈ ಕನಿಷ್ಟ ಆದಾಯವನ್ನು ದುಪ್ಪಟುಗೊಳಿಸಬೇಕಾದರೂ ಕೂಡ, ಕೃಷಿ ಬೆಳವಣಿಗೆ ದರವನ್ನು ವಾರ್ಷಿಕವಾಗಿ ಶೇ. 15ರಷ್ಟಕ್ಕೆ ಹೆಚ್ಚಿಸಬೇಕಿದೆ. ಆದರೆ ಬೆಳವಣಿಗೆ ದರವು ಬಿಜೆಪಿ ಸರ್ಕಾರದ ಮೊದಲ ಎರಡು ವರ್ಷಗಳಲ್ಲಿ ಶೇ. (–) 0.2 ಮತ್ತು 2015–16ರಲ್ಲಿ ಶೇ. (+) 1.1 ಮಾತ್ರವೇ ಇದೆ.

ಸರ್ಕಾರದ 70ನೇ ಸುತ್ತಿನ ಎನ್.ಎಸ್.ಎಸ್.ಒ ಸಮೀಕ್ಷೆ ಪ್ರಕಾರ ಭಾರತದ ಶೇ. 52ರಷ್ಟು ಗ್ರಾಮೀಣ ಕುಟುಂಬಗಳು ಸಾಲಬಾಧೆಯಲ್ಲಿದ್ದು, ಆಂಧ್ರಪ್ರದೇಶದಲ್ಲಿ ಇದು. ಶೇ. 92.9ರಷ್ಟಿದೆ. ಕಾರ್ಪೊರೇಟ್ ಉದ್ಯಮಿಗಳ ಸಾಲ ಮನ್ನಾ ಮಾಡಲು ಸರ್ಕಾರವು ಉತ್ಸುಕವಾಗಿದ್ದು, ಬಡ ರೈತರ ಕುಟುಂಬಗಳ ಕಡೆಗೆ ಗಮನಹರಿಸುತ್ತಿಲ್ಲ. ಮತ್ತೊಂದೆಡೆ, ವಾಣಿಜ್ಯ ಬೆಳೆಗಳ ಬೆಲೆ ಪಾತಾಳಕ್ಕಿಳಿದು ರೈತರನ್ನು ಹತಾಶೇಗೀಡು ಮಾಡುತ್ತಿದ್ದರೆ, ಕಾರ್ಪೊರೇಟ್ ಕಂಪನಿಗಳ ಲಾಭಾಂಶ ಮಾತ್ರ ಹಲವು ಪಟ್ಟು ಹೆಚ್ಚಳವಾಗುತ್ತಿದೆ ಎಂದು ಹರಿಹಾಯ್ದ ಅವರು, ಬಿಜೆಪಿ ಸರ್ಕಾರವು ಕರಾಳ ಭೂಸ್ವಾಧೀನ ಸುಗ್ರೀವಾಜ್ಞೆಯನ್ನು ಜಾರಿಗೆ ತಂದು

ಪುಟ 15 ಕ್ಕೆ

ಅಖಿಲ ಭಾರತ ಕಿಸಾನ್ ಮಂಡಳಿ ಸಭೆ ಬಿಜೆಪಿ ಸರಕಾರ ರೈತರಿಗೆ ಬಗೆದಿರುವ ವಿಶ್ವಾಸಘಾತದ ವಿರುದ್ಧ ಅಂಗೀಕರಿಸಿದ ನಿರ್ಣಯದಲ್ಲಿ ಹೋರಾಟದ ಕಾರ್ಯಕ್ರಮಗಳ ವಿವರ ನೀಡುತ್ತ ಇದಕ್ಕಾಗಿ ಸಾಧ್ಯವಾದಷ್ಟು ವಿಶಾಲವಾದ ಐಕ್ಯತೆಯನ್ನು ಕಟ್ಟಲಾಗುವುದು, ಸಪ್ಟಂಬರ್2ರ ಕಾರ್ಮಿಕ ವರ್ಗದ ದೇಶವ್ಯಾಪಿ ಮುಷ್ಕರ ಕಾರ್ಯಾಚರಣೆಗೆ ಗ್ರಾಮಾಂತರದಲ್ಲಿ ಸಕ್ರಿಯ ಬೆಂಬಲವನ್ನು ನೀಡಲಾಗುವುದು ಎಂದು ಹೇಳಿದೆ.

ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ಆಳ್ವಿಕೆಯಲ್ಲಿ ಅಭೂತಪೂರ್ವ ಹಿಂಸಾಚಾರ ಎದುರಿಸುತ್ತಿರುವ ರೈತರೊಡನೆ ಸೌಹಾರ್ದ ಕಾರ್ಯಾಚರಣೆ ನಡೆಸಲು ಸಭೆ ನಿರ್ಧರಿಸಿತು. 'ಬಂಗಾಲ ಸೌಹಾರ್ದ ನಿಧಿ ಸಂಗ್ರಹ ಮಾಡಲಾಗುವುದು ಎಂದು ಅದು ಹೇಳಿದೆ.

ಎಐಕೆಎಸ್ ಉಪಾಧ್ಯಕ್ಷ ಮದನ್ ಘೋಷ್ ಮತ್ತು ಇತರ ಎಐಕೆಎಸ್ ಮುಖಂಡರ ಮನೆಗಳ ಮೇಲೆ ಟಿಎಂಸಿ ಗೂಂಡಾಗಳ ದಾಳಿಗಳನ್ನು ಅದು ಖಂಡಿಸಿದೆ.

ಎಐಕೆಎಸ್ ಅಧ್ಯಕ್ಷ ಅಮ್ರ ರಾಮ್ ಅವರಿಗೆ ರಾಜಸ್ತಾನದ ಗಣಿ ಮಾಫಿಯಾ ಹಾಕಿರುವ ಪ್ರಾಣ ಬೆದರಿಕೆಯನ್ನು ಕಿಸಾನ್ ಮಂಡಳಿ ಖಂಡಿಸುತ್ತ ಇಂತಹ ವ್ಯಕ್ತಿಗಳ ವಿರುದ್ಧ ದೃಢ ಹೋರಾಟ ನಡೆಸುವುದಾಗಿ ಹೇಳಿದೆ.

ಬಾಂಗ್ಲಾದೇಶವನ್ನು ಆವರಿಸಿರುವ ಹಿಂಸಾಚಾರ– ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಂಭೀರ ಆತಂಕ

ಬಾಂಗ್ಲಾದೇಶದ ರಾಜಧಾನಿ ಢಾಕಾದಲ್ಲಿ ಜುಲೈ 2, ಶುಕ್ರವಾರದಂದು ಭಯೋತ್ಪಾದಕರ ದಾಳಿಗೆ 18 ಮಂದಿ ಬಲಿಯಾಗಿದ್ದಾರೆ. ಇದಕ್ಕೆ ಮೊದಲೂ ಅಲ್ಲಿ ಭಯೋತ್ಪಾದಕ ಕೃತ್ಯಗಳು ಹಲವು ಜೀವಗಳನ್ನು ಬಲಿ ತೆಗೆದುಕೊಂಡಿವೆ. ಈ ಸಂಚಿಕೆ ಮುದ್ರಣಕ್ಕೆ ಸಿದ್ಧವಾಗುವ ವೇಳೆಗೆ ಕಿಶೋರ್‌ಗಂಜ್‌ನಲ್ಲಿ ಈದ್ ನಮಾಝ್ ವೇಳೆಗೆ ಬಾಂಬೆಸೆತದಲ್ಲಿ ಮೂವರು ಸತ್ತಿದ್ದಾರೆ ಎಂದು ವರದಿಯಾಗಿದೆ.

ಬಾಂಗ್ಲಾದೇಶವನ್ನು ಆವರಿಸಿರುವ ಈ ಹಿಂಸಾಚಾರದ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಂಭೀರ ಆತಂಕ ವ್ಯಕ್ತಪಡಿಸಿದೆ.

ಜಾತ್ಯತೀತ ವಿಚಾರವಾದಿಗಳು, ಅಲ್ಪಸಂಖ್ಯಾತರು ಮತ್ತು ವಿದೇಶೀಯರ ವಿರುದ್ಧ ಇತ್ತೀಚಿಗೆ ದಾಳಿಗಳು ನಡೆಯುತ್ತಿರುವುದು ಮೂಲಭೂತವಾದಿಗಳ ಚಟುವಟಿಕೆಗಳು ಹೆಚ್ಚುತ್ತಿರುವುದನ್ನು ಸೂಚಿಸುತ್ತದೆ. ಬಾಂಗ್ಲಾದೇಶ್ ಸರಕಾರ ಈ ಹೀನ ಕೃತ್ಯಗಳನ್ನು ಎಸಗಿದವರುನ್ನು ಹಿಡಿದುಶಿಕ್ಷಿಸುತ್ತದೆ, ಆದಷ್ಟು ಬೇಗನೇ ಪರಿಸ್ತಿತಿಯನ್ನು ಸಾಮಾನ್ಯಗೊಳಿಸುತ್ತದೆ ಎಂದು ಪೊಲಿಟ್‌ಬ್ಯುರೊ ಆಶಿಸಿದೆ.

ಬಾಂಗ್ಲಾದೇಶದ ಜನತೆ ಮತ–ಧರ್ಮಗಳ ಬೇಲಿಗಳನ್ನು ದಾಟಿ ದೇಶದ ವಿಮೋಚನೆಗಾಗಿ ವೀರಾವೇಶದಿಂದ ಹೋರಾಡಿದ ಪರಂಪರೆಯನ್ನು ಹೊಂದಿದ್ದಾರೆ. ಈ ಪರಂಪರೆಯನ್ನು ಮುಂದುವರೆಸಿ ದೇಶದಲ್ಲಿ ಹಿಂಸಾಚಾರ ಮತ್ತು ಅರಾಜಕತೆ ಹರಡುವ ಪ್ರಯತ್ನ ಗಳನ್ನು ಅವರು ವಿಫಲಗೊಳಿಸುತ್ತಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಶಿಸಿದೆ.



ತ್ರಿಪುರಾದಲ್ಲಿ ಶೋಕ–ಖಂಡನೆ

ಢಾಕಾದ ಭೀಕರ ಭಯೋತ್ಪಾದಕ ದಾಳಿಯ ವಿರುದ್ಧ ತ್ರಿಪುರಾದಲ್ಲಿ ಸಿಪಿಐ(ಎಂ) ಜುಲೈ 5ರಂದು ಒಂದು ಪ್ರತಿಭಟನಾ ಮೆರವಣಿಗೆ ಮತ್ತು ಸಭೆಯನ್ನು ನಡೆಸಿತು. ಸಭೆಯಲ್ಲಿ ಸಿಪಿಐ(ಎಂ) ಮುಖಂಡರು ಈ ದಾಳಿಯನ್ನು ಬಲವಾಗಿ ಖಂಡಿಸುತ್ತ ಇದಕ್ಕೆ ಬಲಿಯಾದ ಅಮಾಯಕರ ಸಾವಿಗೆ ಸಂತಾಪವನ್ನು ವ್ಯಕ್ತಪಡಿಸಿದರು.

ªÀiÁvÉAzÀgÉEzÀÄ

ವಿದೇಶಗಳಿಗೆ ಹಣಕಾಸು ಮತ್ತು ತಾಂತ್ರಿಕ ನೆರವು ಬೇಡಿಕೊಂಡು ಹೋಗುವಾಗ ನಮ್ಮಂತಹ ದೇಶಗಳು ಏಕೆ ಅಭಿವೃದ್ಧಿ ಹೊಂದಿಲ್ಲ ಎಂದೇನೂ ನಾವು ಯೋಚಿಸುವುದಿಲ್ಲ........ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಹೆಚ್ಚಿನವು ಅಭಿವೃದ್ಧಿ ಹೊಂದಿರುವುದೇ ನಮ್ಮಿಂದ ಅಗ್ಗದ ದುಡಿಮೆ ಪಡೆದು ದುಬಾರಿಯಾಗಿ ಸರಕುಗಳನ್ನು ಕೊಟ್ಟು ಎರಡೂ ಕಡೆಗಳಲ್ಲಿ ಲಾಭ ಮಾಡಿಕೊಂಡದ್ದರಿಂದ...... ಜಗತ್ತಿನ ಮಹಾನ್ ಕೈಗಾರೀಕೃತ ದೇಶಗಳ ಅಭಿವೃದ್ಧಿಗೆ ನೆರವಾದದ್ದು ನಮ್ಮ ಸಂಪನ್ಮೂಲಗಳು. ಆದರೂ ನಾವು ಅವೇ ದೇಶಗಳ ಬಳಿ ದೀನರಾಗಿ ಹೋಗಬೇಕು, ನಮ್ಮ ಸ್ವಂತದ್ದನ್ನು ನಮಗೆ ಹಿಂದಿರುಗಿಸಿ ಎಂಬ ಹಕ್ಕೊತ್ತಾಯದೊಂದಿಗೆ ಅಲ್ಲ......

–ಪ್ರೊ. ಡಿ.ಡಿ. ಕೊಸಾಂಬಿ

ಜುಲೈ 11 ರಿಂದ 17 : ಬೆಲೆ ಏರಿಕೆ, ನಿರುದ್ಯೋಗದ ವಿರುದ್ಧ ಪ್ರಚಾರಾಂದೋಲನ

ಸಿಪಿಐ(ಎಂ) ರಾಜ್ಯ ಸಮಿತಿ ಕರೆ

ಕೇಂದ್ರದಲ್ಲಿರುವ ನರೇಂದ್ರ ಮೋದಿಯವರ ನೇತೃತ್ವದ ಎನ್.ಡಿ.ಎ. ಸರಕಾರ ಇತ್ತೀಚೆಗೆ ಎರಡು ವರುಷಗಳನ್ನು ಪೂರೈಸಿದ್ದನ್ನು ಸಂಭ್ರಮದಿಂದ ಆಚರಿಸಿತು. ದೇಶದಇತಿಹಾಸದಲ್ಲೇ ಕಂಡಿರದ ಆರ್ಥಿಕ, ಸಾಮಾಜಿಕ ರಂಗಗಳಲ್ಲಿ ಅತ್ಯದ್ಭುತ ಸಾಧನೆಗಳನ್ನು ಮಾಡಿರುವುದಾಗಿ ಡಂಗುರ ಹೊಡೆಯಿತು. ಆದರೆ ಜನತೆಯ ಸ್ಥಿತಿ–ಗತಿಗಳನ್ನು ಅವಲೋಕಿಸಿದರೆ ಸನ್ನಿವೇಶದ ಗಂಭಿರತೆ ಅರ್ಥವಾಗದಿರದು. ವಿಶೇಷವಾಗಿ ಕೈಗಾರಿಕೆ, ಕೃಷಿ ರಂಗಗಳು ಬಿಕ್ಕಟ್ಟಿನಲ್ಲಿ ನಲುಗುತ್ತಿದ್ದು ದೇಶದ 'ಒಟ್ಟು ಆರ್ಥಿಕ ಬೆಳವಣಿಗೆ ಕುಂಠಿತವಾಗಿದೆ. ಬೆಲೆ ಏರಿಕೆ, ನಿರುದ್ಯೋಗದಂತಹ ತೀವ್ರ ಸಂಕಷ್ಟಗಳನ್ನು ಜನತೆ ಎದುರಿಸುತ್ತಿದೆ.

ತಮ್ಮನ್ನು ಅಧಿಕಾರಕ್ಕೆ ತಂದಲ್ಲಿ ಪ್ರತಿ ವರುಷ'ದೇಶದಲ್ಲಿ 2 ಕೋಟಿ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಮೋದಿಯವರು ವಚನ ನೀಡಿದ್ದರು. ಅಧಿಕಾರಕ್ಕೆ ಬಂದ ಮೇಲೆ ದೇಶ ಇನ್ನು 'ಒಳ್ಳೆಯ ದಿನ'ಗಳನ್ನು ಕಾಣುವುದಾಗಿ ನುಡಿದಿಚ್ಚಿ ಯುವಜನರಲ್ಲಿ ಅಪಾರ ನಿರೀಕ್ಷೆಗಳನ್ನು ಹುಟ್ಟಿಸಿತ್ತು. ಆದರೆ ಈ ಎರಡು ವರುಷಗಳಲ್ಲಿ ಆದದ್ದೇ ಬೇರೆ. ಇದ್ದ 20 ಕೋಟಿ ನಿರುದ್ಯೋಗಿಗಳ ಸಂಖ್ಯೆ ಕಡಿಮೆಯಾಗುವ ಬದಲು ಪ್ರತಿ ವರುಷ 1.2 ಕೋಟಿ ಜನ ಸೇರ್ಪಡೆಯಾದರು. ಇವರೆಲ್ಲಾ ಬಹುತೇಕ ವಿದ್ಯಾವಂತ ಯುವಜನರೇ ಆಗಿದ್ದಾರೆ. ಹೆಚ್ಚುತ್ತಿರುವ ಆರ್ಥಿಕ ಹೊರೆ, ಮೇಲಾಗಿ ಉದ್ಯೋಗರಹಿತತೆ ಮತ್ತು ಉದ್ಯೋಗಹೀನ ಅಭಿವೃದ್ಧಿ ಸನ್ನಿವೇಶವನ್ನು ಗಂಭೀರವಾಗಿಸಿವೆ. ಹೀಗಾಗಿ ನಗರ ಮತ್ತು ಗ್ರಾಮೀಣ ನಿರುದ್ಯೋಗ ಹೆಚ್ಚಿ ಜನತೆಯನ್ನು ಕಂಗಾಲಾಗಿಸಿದೆ.

ಜನರ ಜೀವನಾವಶ್ಯಕ'ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಲೇ ಇವೆ. ಬೆಲೆಗಳ ಹೆಚ್ಚಳಕ್ಕೆ ಯು.ಪಿ.ಎ ಸರಕಾರದ ನೀತಿಗಳೇ ಕಾರಣವಾಗಿದ್ದು ಅದನ್ನು ಸರಿಪಡಿಸಿ ಜನರಿಗೆ ಪರಿಹಾರ ಒದಗಿಸುವುದಾಗಿ ಮೋದಿ ಹೇಳಿದ್ದರು. ಆದರೆ ಮೋದಿಯವರ ದೊಡ್ಡ ವ್ಯಾಪಾರಸ್ಥರ ಪರವಾದ ಮತ್ತು ಮುಕ್ತ ಮಾರುಕಟ್ಟೆಯ ನೀತಿಗಳಿಂದ ಬೆಲೆಗಳು ಇಳಿಯುವುದಿರಲಿ, ಏರುತ್ತಲೇ ಹೋಗಿವೆ. ಅಗತ್ಯ ವಸ್ತುಗಳನ್ನು ಕಡಿಮೆ ಬೆಲೆಗೆ ನೀಡುವುದನ್ನೂ ಸರಕಾರ ನಿರಾಕರಿಸಿದೆ. ಬೇಳೆಕಾಳುಗಳು, ದವಸ ಧಾನ್ಯಗಳ ಬೆಲೆ ಸುಮಾರು 140ರಷ್ಟು ಹೆಚ್ಚಿವೆ. ತರಕಾರಿಗಳ ಬೆಲೆ ಕಳೆದ ಮೂರು ತಿಂಗಳಿನಲ್ಲಿ 120 ರಷ್ಟು ಹೆಚ್ಚಳವಾಗಿದೆ. ಗೋಧಿ, ಅಕ್ಕಿ, ಎಣ್ಣೆ, ಸಕ್ಕರೆ, ಈರುಳ್ಳಿ ಬೆಲೆಗಳು ನಿಯಂತ್ರಣದಲ್ಲೇ ಇಲ್ಲ. ಪಡಿತರ ವ್ಯವಸ್ಥೆಯನ್ನು ನಾಶ ಪಡಿಸುವ ಕ್ರಮಗಳನ್ನೇ ಮೋದಿ ಸರಕಾರ ಕೈಗೊಂಡಿದೆ. ಮೇಲಾಗಿ ಡಿಸೆಲ್, ಪೆಟ್ರೋಲ್, ಗ್ಯಾಸ್‌ಗಳ ಬೆಲೆಗಳನ್ನು 6 ವಾರದಲ್ಲಿ 4 ಬಾರಿ ಹೆಚ್ಚಿಸಿರುವುದು ಬೆಲೆ ಏರಿಕೆ ಬಾಧೆಯನ್ನುಇನ್ನಷ್ಟೂ ಹೆಚ್ಚಿಸಿದೆ. ಅದೇ ಹೊತ್ತಿನಲ್ಲಿ ಹೆಚ್ಚದ ಆದಾಯ, ಕೃಷಿ–ಕೈಗಾರಿಕಾ ಕುಸಿತ ಜನರನ್ನು ಬವಣೆಗಳತ್ತ ತಳ್ಳಿದೆ.

ಇಂತಹ ಸನ್ನಿವೇಶದಲ್ಲಿ ಜನತೆಯನ್ನು ಜಾಗೃತಗೊಳಿಸಿ, ಬದುಕನ್ನು ಸುಧಾರಿಸಲು ಸರಕಾರ ಕ್ರಮ ವಹಿಸಬೇಕೆಂದೂ, ಮೋದಿ ಸರಕಾರದ ಸಾಧನೆಗಳ ಬೊಗಳೆಗಳನ್ನು ಬಯಲಿಗೆಳೆಯಲು ಮತ್ತು ಪರ್ಯಾಯ ಆರ್ಥಿಕ ನೀತಿಗಳಿಗಾಗಿ ಆಗ್ರಹಿಸಿ 2016 ರ ಜುಲೈ 11 ರಿಂದ 17 ರವರೆಗೆ ದೇಶಾದ್ಯಂತ ಆಂದೋಲನವನ್ನು ನಡೆಸಲು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಕೇಂದ್ರ ಸಮಿತಿಯು ನಿರ್ಧರಿಸಿದೆ. ಈ ಕರೆಯನ್ನು ಕರ್ನಾಟಕದಲ್ಲಿ ವ್ಯಾಪಕವಾಗಿ ಜನತೆಯ ನಡುವೆ ಕೊಂಡೊಯ್ಯಲು ಜುಲೈ 7 ರಂದು ಸೇರಿದ್ದ ಸಿ.ಪಿ.ಐ.(ಎಂ) ರಾಜ್ಯ ಸಮಿತಿಯು ನಿರ್ಧರಿಸಿದೆ. ಅದರಂತೆ ಬೆಲೆ ಏರಿಕೆ, ನಿರುದ್ಯೋಗ ಮತ್ತು ಸ್ಥಳೀಯ ಸಮಸ್ಯೆಗಳನ್ನು ಒಳಗೊಂಡು ಜಿಲ್ಲೆಗಳಲ್ಲಿ ತಾಲೂಕು ಮತ್ತು ಮುಖ್ಯವಾಗಿ ಹೋಬಳಿ, ಗ್ರಾಮ ಪಂಚಾಯತ್ ಮಟ್ಟದಲ್ಲಿ ಪ್ರಚಾರಾಂದೋಲನ ನಡೆಸಲಾಗುವುದು, ಬಹಿರಂಗ ಸಭೆಗಳನ್ನು ನಡೆಸಲಾಗುವುದು. ಮನೆ, ಮನೆಗೆ ಕಾರ್ಯಕರ್ತರು ತೆರಳಿ ಜನಜಾಗೃತಿ ಮಾಡುವರು. ಅಲ್ಲದೇ ಸ್ಥಳೀಯವಾಗಿ ಮತ್ತು ತಾಲೂಕು ಕೇಂದ್ರಗಳಲ್ಲಿ ಜನತೆಯ ಪ್ರತಿಭಟನಾ ಮೆರವಣಿಗೆಗಳು, ಧರಣಿ–ಸಭೆಗಳ ಮೂಲಕ ಬೇಡಿಕೆಗಳ ಮನವಿ ಪತ್ರವನ್ನು ಸಲ್ಲಿಸಲು ರಾಜ್ಯ ಸಮಿತಿಯು ನಿರ್ಧರಿಸಿದೆ. ಈ ಆಂದೋಲನವನ್ನು ಯಶಸ್ವಿಗೊಳಿಸಲು ಜನತೆಯಲ್ಲಿ ಸಿಪಿಐ(ಎಂ) ಮನವಿ ಮಾಡಿದೆ.

ಬಿಜೆಪಿಯೊಳಗಿನ ಭಿನ್ನಮತ: ಅಸ್ತಿತ್ವಕ್ಕಾಗಿ ಲಾಬಿಗಳ ಬಡಿದಾಟ

ಎಸ್.ವೈ. ಗುರುಶಾಂತ್

ಬಿಜೆಪಿಯಲ್ಲಿನ ಭಿನ್ನಮತವೀಗ ಬೀದಿಯ ರಂಪಾಟವಾಗಿದೆ. ಪಕ್ಷದೊಳಗೆ ಮೇಲುಗೈ ಸಾಧಿಸಲು ನಾಯಕರು ಬಡಿದಾಟಕ್ಕೆ ಇಳಿದಿದ್ದಾರೆ. ಕೇಶವಕೃಪಾಕ್ಕೆ ಉಭಯ ನಾಯಕರನ್ನು ಕರೆಸಿಕೊಂಡ ಆರೆಸ್ಸೆಸ್ ಖಾಜಿ ನ್ಯಾಯ ಮಾಡುವ ಮೂಲಕ ತನ್ನ ಮೇಲಿನ ಅವಲಂಬನೆ ಅನಿವಾರ್ಯವೆಂದು ತೋರಿಸುತ್ತಿದೆ. ಮಗುವನ್ನು ಚಿವುಟಿ ಅಳಿಸಿ ತೊಟ್ಟಿಲನ್ನೂ ತೂಗುವ ನಟನೆಯಲ್ಲಿ ಅದಕ್ಕಿರುವ ನಿಷ್ಣಾತ ತಂತ್ರಗಾರಿಕೆ ಇನ್ನಾರಿಗಿರಲು ಸಾಧ್ಯ? ತನ್ನ ಅನಿವಾರ್ಯತೆ ಮತ್ತು ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಅವಕಾಶವನ್ನು ಅದೇಕೆ ಬಿಟ್ಟೀತು?

ಒಳಗೊಂದು– ಹೊರಗಿನ್ನೊಂದು

ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗಿ ಪುನಃ ನೇಮಕವಾದ ನಂತರ ಇದು ಮೊದಲ ಬಹಿರಂಗ ಬಂಡಾಯ. ಹೊರಗೆ ಬಾಯಿ ಬಿಟ್ಟಿರುವುದು ಕೆ.ಎಸ್.ಈಶ್ವರಪ್ಪನವರಾದರೂ ಅವರ ಹಿಂದೆ ಕೇಂದ್ರ ಸಚಿವ ಅನಂತಕುಮಾರ್, ಜಗದೀಶ ಶೆಟ್ಟರ್, ಅಶೋಕ್‌ರಂತಹ ಹಿರಿಯ ನಾಯಕರ ಗುಂಪೇ ಇದೆ. ಇವರೆಲ್ಲಾ ಮುಖ್ಯಮಂತ್ರಿ ಪಟ್ಟದ ಆಕಾಂಕ್ಷಿಗಳು. ಕಾಂಗ್ರೆಸ್ ಪಕ್ಷದಲ್ಲಿ ಗುಂಪುಗಾರಿಕೆ, ಕಿತ್ತಾಟ, ಆಡಳಿತ ವೈಫಲ್ಯದಿಂದ ಜನರ ಅತೃಪ್ತಿ ಹೆಚ್ಚಾಗುತ್ತಿರುವಂತೆ ರಾಜ್ಯದಲ್ಲಿ ಅಧಿಕಾರ ಗದ್ದುಗೆ ಏರಲು ಇನ್ನೇನು ಮೂರುಗೇಣು ಎಂದು ಭ್ರಮಿಸಿದ ಬಿಜೆಪಿ ನಾಯಕರು ಕುರ್ಚಿ ಖಾತ್ರಿ ಮಾಡಿಕೊಳ್ಳುವ ಕಸರತ್ತಿಗೆ ಇಳಿದಿದ್ದಾರೆ. ಮುಂದೆ ತಾನೇ ಸಿ.ಎಂ. ಎನ್ನುವ ಯಡ್ಯೂರಪ್ಪನವರಿಗೆ ಕಾಲು ಕಟ್ಟಲು ಈ ಒಂದು ಬಣ ಮುಂದಾಗಿದೆ.

ಹಾಗೆ ನೋಡಿದರೆ ಯಡ್ಯೂರಪ್ಪನವರನ್ನು ಒಳಗೊಳ್ಳದೇ, ಅಧ್ಯಕ್ಷರನ್ನಾಗಿ ಮಾಡದೇ ಇದ್ದಲ್ಲಿ ಅವರ ಜೊತೆಗಿನ ಜಾತಿ ಸಮೀಕರಣ, ವರ್ಚಸ್ಸು, ಬಲ ಸಿಗದೇ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ಅನುಮಾನ ಎಂಬುದು ಸಂಘದ ಲೆಕ್ಕಾಚಾರ. ತನ್ನ ಆಡಳಿತಾವಧಿಯಲ್ಲಿ ಹಗರಣಗಳು, ದುರಾಡಳಿತದ ಫಲವೆ ಹಿಂದಿನ ಚುನಾವಣೆಯ ಸೋಲಿಗೆ ಕಾರಣ ಎಂಬ ಸತ್ಯವನ್ನು ಒಪ್ಪದ ಬಿಜೆಪಿ ಅದಕ್ಕೆ ತಮ್ಮೊಳಗಾದ ಒಡಕೇ ಪ್ರಮುಖ ಅಂಶವಾಗಿತ್ತು ಎಂಬುದು ಸಾರ್ವಜನಿಕರಿಗೆ ಅದು ಕೊಡುವ ಸಮಜಾಯಿಷಿ. ಆದ್ದರಿಂದ ಈಗ ಮುಖ್ಯವಾಗಿ ಯಡ್ಯೂರಪ್ಪನವರ ಮೂಲಕ ಲಿಂಗಾಯತ ಮತಗಳನ್ನು ಸೆಳೆದು, ಜೋಡಿಸುವುದು ಅನಿವಾರ್ಯ ಎಂದು ಭಾವಿಸಿದೆ. ಈಗಲೂ ತನ್ನ ನೆಲೆಯಲ್ಲಿ ಅಂತಹ ಪ್ರಮುಖ ಬದಲಾವಣೆ ಆಗಿಲ್ಲವೆಂದು ಬಗೆದಿರುವ ಅದು ಲಿಂಗಾಯತರನ್ನು ಸೆಳೆದರೆ ಕಾಂಗ್ರೆಸ್‌ನ 'ಅಹಿಂದ' ಸೂತ್ರಕ್ಕೆ ಎದುರೇಟು ನೀಡುವ ತಕ್ಕ ಸಂಯೋಜನೆಯೆಂದು ಅಂದಾಜಿಸಿದೆ. ಆದ್ದರಿಂದಲೇ ಅಧ್ಯಕ್ಷರಿಗೆ ಅಧಿಕಾರ ಹಸ್ತಾಂತರಿಸುವ ಬಹಿರಂಗ ಕಾರ್ಯಕ್ರಮದಲ್ಲಿ ಅನಂತ್‌ಕುಮಾರ್‌ರವರೇ ಯಡ್ಯೂರಪ್ಪ ಮುಂದಿನ ಮುಖ್ಯಮಂತ್ರಿಯೆಂದು ಸಾರಿ ನಮ್ಮಲ್ಲಿ ಜಗಳವಿಲ್ಲ ಎಂದು ಲಿಂಗಾಯತರ ಮೂಗಿಗೆ ತುಪ್ಪ ಸವರಿ ನಂಬಿಸಲು ಯತ್ನಿಸಿದ್ದರು. ಆದರೆ ಇಂತಹ ಮಾತುಗಳ ಮರ್ಮ ಏನೆಂಬುದು ಅನಂತ ಅವತಾರ ಬಲ್ಲವರಿಗೆ ತಿಳಿಯದ್ದೇನಲ್ಲ. 'ಕಾಲ ಬಂದಾಗ ತನ್ನ ಕರಾಮತ್ತು ತೋರುವುದು' ಅವರ ಗುಪ್ತ ಅಜೆಂಡಾ. ಅಂದು ಯಡ್ಯೂರಪ್ಪನವರೇ ಮುಖ್ಯಮಂತ್ರಿಯೆಂದವರು ಇಂದು ಅವರ ವಿರುದ್ಧದ ಬಂಡಾಯಕ್ಕೆ ಬೆಂಬಲವಾಗಿ ನಿಂತಿರುವುದರ ಅರ್ಥವೇನು?



ಅಸ್ತಿತ್ವದ ಆತಂಕ!

ಈಗ ಬಿಜೆಪಿಯಲ್ಲಿನ ಭಿನ್ನಮತಕ್ಕೆ ಮುಖ್ಯ ಕಾರಣ ಜಿಲ್ಲೆಗಳ ಪದಾಧಿಕಾರಿಗಳ ನೇಮಕದ ವಿಚಾರ ಎನ್ನಲಾಗುತ್ತಿದೆ. ಯಾರೊಂದಿಗೂ ಚರ್ಚಿಸದೇ ತಮ್ಮ ಬೆಂಬಲಿಗರನ್ನೇ ಬಿಎಸ್‌ವೈಯವರೇ ಏಕಪಕ್ಷೀಯವಾಗಿ ತೀರ್ಮಾನಿಸಿದ್ದಾರೆ. ಅವರಲ್ಲಿ ಹಲವರು ಹಿಂದೆ ಕೆಜೆಪಿ ಪಕ್ಷದಲ್ಲಿದ್ದವರೇ ಎಂಬ ಆಕ್ಷೇಪ. ಅಂದರೆ ಶಿವಮೊಗ್ಗದ ಅಧ್ಯಕ್ಷ ಈಶ್ವರಪ್ಪನವರಿಗೆ, ಚಿಕ್ಕಮಗಳೂರು ಸಿ.ಟಿ.ರವಿಯವರಿಗೆ ಹೀಗೆ ತಮಗಾಗದವರನ್ನೇ ಜಿಲ್ಲಾಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ, ಸಮನ್ವಯ ಸಮಿತಿಗೆ ಸೂಚಿಸಲಾಗಿದೆ ಎಂಬುದು ಅವರ ಆಕ್ಷೇಪ. ಈ ಮೂಲಕ ಪಕ್ಷದ ವಿವಿಧ ಹಂತಗಳಲ್ಲಿ ಯಡ್ಯೂರಪ್ಪನವರು ತಮ್ಮ ಬೆಂಬಲಿಗರನ್ನೇ ನೇಮಿಸಿ ಹಿಡಿತ ಸಾಧಿಸಲು ಹೊರಟಿದ್ದಾರೆ, ಇದು ಮುಂದುವರಿದರೆ ನಾಳೆ ಜಿಲ್ಲೆಗಳಲ್ಲಿ ತಮ್ಮ ಹಿಡಿತ ತಪ್ಪಿ ಮುಂದೆ ವಿಧಾನಸಭಾ ಚುನಾವಣೆಯಲ್ಲಿ ತಾವು ಗೆದ್ದರೂ ಮೂಲೆಗುಂಪಾಗಬೇಕಾಗಿ ಬರಬಹುದು ಎಂಬ ಆತಂಕ.

ಮೇಲಾಗಿ, ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿರುವ ಸಂಸದೆ ಶೋಭಾ ಕರಂದ್ಲಾಜೆಯವರ ಮಾತನ್ನಷ್ಟೇ ರಾಜ್ಯ ಅಧ್ಯಕ್ಷರು ಕೇಳುತ್ತಿದ್ದಾರೆ ಎಂಬ ಆರೋಪ. ಹೀಗಾಗಿ ಕರಂದ್ಲಾಜೆಯವರನ್ನು ದೂರ ಇಡಬೇಕು, ಈಗ ಘೋಷಿಸಲಾದ ಪದಾಧಿಕಾರಿಗಳನ್ನು ಬದಲಿಸಬೇಕು ಎಂದು ಆಗ್ರಹಿಸುತ್ತಿದ್ದಾರೆ. ಇಲ್ಲವಾದಲ್ಲಿ ಕೇಂದ್ರ ನಾಯಕತ್ವಕ್ಕೆ ಯಡ್ಯೂರಪ್ಪನವರನ್ನು ಬದಲಾಯಿಸಿ ಎಂದು ಒತ್ತಾಯಿಸುವುದಾಗಿ ಈಶ್ವರಪ್ಪ ಘೋಷಿಸಿದ್ದರು. ಇದಕ್ಕೆ ತಾನು ಸೊಪ್ಪು ಹಾಕುವುದಿಲ್ಲವೆಂದೂ ಪಕ್ಷದ ಶಿಸ್ತನ್ನು ಉಲ್ಲಂಘಿಸುವವರು ಅದೆಷ್ಟೇ ದೊಡ್ಡವರಾಗಿರಲಿ ಕ್ರಮ ಜರುಗಿಸಬೇಕಾಗುತ್ತದೆಂದು ಎಚ್ಚರಿಸಿ ಶಿಸ್ತು ಸಮಿತಿಯ ಪ್ರಸ್ತಾಪ ಮಾಡಿರುವುದು ಜಗಳದ ಸ್ವರೂಪವನ್ನು ತೋರಿಸುತ್ತದೆ. ಇದಾದ ಮೇಲೆ ಆರೆಸ್ಸೆಸ್‌ನ ಮಧ್ಯಸ್ಥಿಕೆ ನಡೆದು ಉಪದೇಶ ನೀಡಿರುವುದು. ಈ ಬೆಳವಣಿಗೆಗಳ ಬಳಿಕ ಕೇಂದ್ರ ನಾಯಕರು ಉನ್ನತಾಧಿಕಾರದ ಕೋರ್ ಸಮಿತಿಯೊಂದನ್ನು ರಚಿಸಿದ್ದಾರೆ. ಅದರಲ್ಲಿ ಯಡ್ಯೂರಪ್ಪನವರಿಗೆ ಆಪ್ತರಾಗಿರುವ ಬಹುತೇಕರು ಪಟ್ಟಿಯಿಂದ ಕಾಣೆಯಾಗಿದ್ದಾರೆ. ಅದರಲ್ಲಿ ಬಿಎಸ್‌ವೈ ನ ಬೆಂಬಲಿಗರಾದ ಶೋಭಾ ಕರಂದ್ಲಾಜೆಯವರನ್ನು ಹೊರಗಿಟ್ಟಿರುವುದು ಪ್ರಮುಖ.

ಪುಟ 4 ಕ್ಕೆ

ಜುಲೈ 25: ಸಾರಿಗೆ ಕಾರ್ಮಿಕರ ಮತ್ತೊಂದು ಮಹಾ ಮುಷ್ಕರ

ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ ಶೇ.8 ವೇತನ ಹೆಚ್ಚಳ ನೀಡಲಾಗುತ್ತದೆ ಎಂಬುದು ರಾಜ್ಯ ಸರಕಾರದ ಏಕಪಕ್ಷೀಯ ನಿರ್ಧಾರ, ಈ ಮೂಲಕ 1.25 ಲಕ್ಷ ಕಾರ್ಮಿಕರ ಒಕ್ಕೊರಲಿನ ಬೇಡಿಕೆಗೆ ರಾಜ್ಯ ಸರ್ಕಾರ ಮತ್ತು ಆಡಳಿತ ವರ್ಗ ಮತ್ತೆ ಅನ್ಯಾಯ ಮಾಡಿವೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ದುಡಿದು ತಿನ್ನುವ ಮತ್ತು ಸಾರ್ವಜನಿಕ ಸೇವೆ ಮಾಡುವ ಕಾರ್ಮಿಕರ ಬದುಕನ್ನು ಉತ್ತಮಗೊಳಿಸಬೇಕೆಂಬ ವಿಚಾರ ಬಂದಾಗಲೆಲ್ಲಾ ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ಕಾರ್ಮಿಕ ವಿರೋಧಿ ನೀತಿಗಳನ್ನೇ ಅನುಸರಿಸುತ್ತಿವೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್ ಹೇಳಿದೆ.

ಶೇ.8 ಹೆಚ್ಚಳ ಮಾಡಿ ಸಂಸ್ಥೆಗೆ ಆದಾಯವಿಲ್ಲ, ನಷ್ಟದಲ್ಲಿದ್ದೇವೆ ಎಂಬ ಹಳಸಲು ವಾದವನ್ನೇ ಮತ್ತೆ ಮಾಡಲಾಗುತ್ತಿದೆ. ಇಷ್ಟಕ್ಕೂ ಸಾರ್ವಜನಿಕ ಸಾರಿಗೆಯನ್ನು ಲಾಭ–ನಷ್ಟದ ಲೆಕ್ಕಾಚಾರದಲ್ಲಿ ನೋಡುವುದೇ ಒಂದು ಅನ್ಯಾಯದ ಕ್ರಮವಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಹಲವು ಸರ್ಕಾರಗಳು ಹಲವಾರು ಸ್ಕೀಂಗಳನ್ನು ಜಾರಿಗೆ ತಂದಿವೆ. ವಿವಿಧ ವಿಭಾಗಗಳಿಗೆ ಕೋಟ್ಯಾಂತರ ರೂಪಾಯಿಗಳ ರಿಯಾಯಿತಿ ದರದ ಪಾಸುಗಳನ್ನು ನೀಡಲಾಗಿದೆ. ಸಾವಿರಾರು ಕೋಟಿ ರೂ.ಗಳನ್ನು ಸರ್ಕಾರ ಮರುಪಾವತಿಸಿಲ್ಲ. ರಾಜ್ಯದ ಅತ್ಯಂತ ಕುಗ್ರಾಮಗಳಿಗೂ, ಅತ್ಯಂತ ಕಡಿಮೆ ಪ್ರಯಾಣಿಕರಿದ್ದರೂ ಸಹ ಬಸ್ ಸೇವೆಯನ್ನು ನೀಡುತ್ತಿರುವುದು ಸರ್ಕಾರದ ನೀತಿಗಳಿಂದಲೇ. ಯಾವುದೇ ಖಾಸಗಿ ಸಂಸ್ಥೆಗೆ ಈ ಜವಾಬ್ದಾರಿ ಇಲ್ಲ. ಪ್ರತಿವರ್ಷ ಸಾರಿಗೆ ನಿಗಮಗಳು ಅಪಾರ ಪ್ರಮಾಣದಲ್ಲಿ ಡಿಪೋಗಳು ಮತ್ತಿತರ ಆಸ್ತಿಗಳನ್ನು ಸೃಷ್ಟಿಸುತ್ತಿರುವುದು ಸಾರಿಗೆ ನಿಗಮಗಳ ಆಂತರಿಕ ಉತ್ಪನ್ನದಿಂದಲೇ. ಸಾರಿಗೆ ಸಿಬ್ಬಂದಿಯ ಶ್ರಮದಿಂದ ಪ್ರಯಾಣಿಕರಿಂದ ಬರುವ ಆದಾಯವೂ ಹೆಚ್ಚಾಗಿಯೇ ಇದೆ. ಜೊತೆಗೆ ದಕ್ಷಿಣದ ರಾಜ್ಯಗಳ ಪೈಕಿ ಪ್ರಯಾಣಿಕರ ಟಿಕೆಟ್ ದರಗಳು ನಮ್ಮ ರಾಜ್ಯದಲ್ಲೇ ಅತಿ ಹೆಚ್ಚು.

ಸಂಸ್ಥೆಗೆ ಆದಾಯ ಹೆಚ್ಚದಿರಲು ಹಲವು ಕಾರಣಗಳಿವೆ. ಈ ಬಗ್ಗೆ ಫೆಡರೇಶನ್ ಹಲವು ಬಾರಿ ಆಡಳಿತದೊಡನೆ ಚರ್ಚಿಸಿದರೂ ಕ್ರಮಗಳನ್ನು ಕೈಗೊಳ್ಳದೆ ಅದನ್ನು ಶ್ರಮಪಟ್ಟು ದುಡಿಯುತ್ತಿರುವ ಸಾರಿಗೆ ನೌಕರರ ಸಂಬಳದೊಂದಿಗೆ ಜೋಡಿಸುವುದು ಸರಿಯಲ್ಲ ಎಂದು ಫೆಡರೇಶನ್ ಹೇಳಿದೆ.

ಮುಖ್ಯವಾಗಿ ಏಕಪಕ್ಷೀಯವಾಗಿ ವೇತನ ಹೆಚ್ಚಳ ಮಾಡಬಾರದೆಂದು ಹೇಳುತ್ತಿದ್ದರೂ ಅದನ್ನೇ ಮುಂದುವರೆಸುತ್ತಿರುವ ಬಗ್ಗೆ ಸಿಐಟಿಯು ಸೇರಿದಂತೆ ಎಲ್ಲಾ ಕಾರ್ಮಿಕ ಸಂಘಟನೆಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ. ಬೇಡಿಕೆಗಳ ಬಗ್ಗೆ ಮಾತುಕತೆಯೆಂದರೆ ಕೇವಲ ವೇತನ ಹೆಚ್ಚಳದ ವಿಚಾರ ಮಾತ್ರವಲ್ಲ. ವರ್ಗಾವಣೆ ಸಮಸ್ಯೆಗಳು, ವಿಪರೀತ ಕೆಲಸದ ಅವಧಿ, ಅಂಕೆಯಿಲ್ಲದ ಕಿರುಕುಳಗಳು, ಕಾರ್ಮಿಕ ವಿರೋಧಿ ವೈದ್ಯಕೀಯ ಸೌಲಭ್ಯ, ಮಕ್ಕಳ ಅನುಕೂಲಕ್ಕಾಗದ ಶಿಕ್ಷಣ ಸೌಲಭ್ಯ, ಪಿಂಚಣಿ ಸೌಲಭ್ಯ, ಶುದ್ಧ ಕುಡಿಯುವ ನೀರಿನ ಅಭಾವ, ವಿಶ್ರಾಂತಿಗೆ ಜಾಗವಿಲ್ಲದಿರುವುದು, ಬಹುತೇಕ ಕಡೆ ಕ್ಯಾಂಟೀನ್ ಸೌಲಭ್ಯವಿಲ್ಲದಿರುವುದು, ಮಹಿಳಾ ಕಾರ್ಮಿಕರಿಗೆ ಪ್ರತ್ಯೇಕ ಅನುಕೂಲಗಳ ಅಭಾವ, ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯಗಳು ಮುಂತಾದ ಹಲವಾರು ಪ್ರಶ್ನೆಗಳೂ ಇವೆ ಎಂಬ ಸಂಗತಿಯತ್ತ ನೌಕರರು ಆಡಳಿತದ ಮತ್ತು ಸರಕಾರದ ಗಮನ ಸೆಳೆದಿದ್ದಾರೆ.

ಕಾರ್ಮಿಕರ ಹಿತಾಸಕ್ತಿಗಳನ್ನು ಇಷ್ಟೊಂದು ನಿರ್ದಾಕ್ಷಿಣ್ಯವಾಗಿ ಕಡೆಗಣಿಸುವ ಧೋರಣೆಯ ವಿರುದ್ಧ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್ ಜೂನ್ 30ರಂದೇ ತುರ್ತು ಸಭೆ ಸೇರಿ ಜುಲೈ 18ರಿಂದ ಮುಷ್ಕರ ಮಾಡಬೇಕೆಂದು ತೀರ್ಮಾನಿಸಿತ್ತು. ಜೊತೆಗೆ ಜುಲೈ 05ರಂದು ವಿವಿಧ ನಿಗಮಗಳ ಮುಂದೆ ಸಾರಿಗೆ ನೌಕರರು ಪ್ರತಿಭಟನೆ ನಡೆಸಿದ್ದಾರೆ. ಈಗ ಇತರ ನೌಕರರ ಸಂಘಟನೆಗಳೊಡನೆ ಐಕ್ಯ ಕಾರ್ಯಾಚರಣೆ ನಡೆಸಲು ಜುಲೈ 25, 2016 ರಿಂದ ಮುಷ್ಕರ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್ ಹೇಳಿದೆ.

ಕಳೆದ 16 ವರ್ಷಗಳಲ್ಲಿ ಒಟ್ಟಾರೆ ಸಾರಿಗೆ ನೌಕರರಿಗೆ ಶೇ.25 ಮಾತ್ರ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಶೇ. 45 ವೇತನ ಹೆಚ್ಚಳ ಮತ್ತಿತರೆ ಭತ್ಯೆಗಳ ಹೆಚ್ಚಳ, ವರ್ಗಾವಣೆ ನೀತಿ ಜಾರಿ, 8 ಗಂಟೆಗಳ ಕೆಲಸ, ಟ್ರೈನಿ ನೌಕರರಿಗೆ ಕನಿಷ್ಠ 18,000ರೂ. ವೇತನ, ಕನಿಷ್ಟ 10,000 ರೂ. ಪಿಂಚಣಿ ಸಿಗುವಂತೆ ಯೋಜನೆ ಮತ್ತಿತರ ಬೇಡಿಕೆಗಳ ಬಗ್ಗೆ ಮಾತುಕತೆ ನಡೆಸುವಂತೆ ನೌಕರರು ಆಗ್ರಹಿಸುತ್ತಿದ್ದಾರೆ.

ಸಮಕಾಲೀನ ವಿಚಾರ ವೇದಿಕೆ ಸಂವಾದದಲ್ಲಿ ಕೆ. ಮರುಳಸಿದ್ದಪ್ಪನವರ ಎಚ್ಚರಿಕೆ

"ಮಾಧ್ಯಮಗಳು ಸ್ವವಿಮರ್ಶೆ ಮಾಡಿಕೊಳ್ಳಬೇಕಾಗಿದೆ"



ಮಾಧ್ಯಮಗಳು ತಾವು ಎಂತಹ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿದ್ದೇವೆ ಎಂದು ಆತ್ಮಾವಲೋಕನ ಮಾಡಿಕೊಳ್ಳಲು ಇದು ಸಕಾಲವಾಗಿದೆ. ತಪ್ಪಿದಲ್ಲಿ ಅದು ಇಡೀ ವಾಕ್ ಸ್ವಾತಂತ್ರ್ಯದ ಅಣಕವಾಗಲಿದೆ ಎಂದು ಚಿಂತಕ ಕೆ.ಮರುಳಸಿದ್ದಪ್ಪ ಕಳವಳ ವ್ಯಕ್ತಪಡಿಸಿದ್ದಾರೆ. ಅವರು ಸಮಕಾಲೀನ ವಿಚಾರ ವೇದಿಕೆ 'ಸುದ್ದಿ–ಮನರಂಜನೆ–ರಿಯಾಲಿಟಿ ಶೋ' ವಿಷಯದಡಿ ಬೆಂಗಳೂರಿನ ಸಚಿವಾಲಯ ಕ್ಲಬ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ "ಇಂದಿನ ಮಾಧ್ಯಮ ಮತ್ತು ಸಮಾಜ" ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಇಂದು ಮಠಾಧೀಶರು, ಪ್ರಗತಿಪರ ಮಠಾಧೀಶರು ಎಂಬ ವೇದಿಕೆ ನಿರ್ಮಿಸಿಕೊಂಡು ಸಮಾಜದಲ್ಲಿ ತಮ್ಮ ಬಗ್ಗೆ ಇರುವ ಅಡ್ಡಪಲ್ಲಕ್ಕಿ, ಪಾದೋದಕ ಸೇವನೆ, ಕೋಮುವಾದಕ್ಕೆ ಪ್ರೋತ್ಸಾಹ, ಕಪ್ಪು ಹಣ ರಕ್ಷಣೆ, ಲಿಂಗ ತಾರತಮ್ಯ ಇತ್ಯಾದಿ ಆರೋಪಗಳ ಬಗ್ಗೆ ಗಂಭೀರವಾಗಿ ಚರ್ಚಿಸುತ್ತಿವೆ. ಆ ಮೂಲಕ ಸಮಾಜ ಹಾಗೂ ಭಕ್ತರಿಗೆ ತಮ್ಮ ತಮ್ಮನ್ನು ತೆರೆದಿಟ್ಟುಕೊಳ್ಳುವ ಪ್ರಯತ್ನ ಮಾಡುತ್ತಿವೆ. ಆದರೆ ವಾಸ್ತವ ಸುದ್ದಿಗಳನ್ನು ಹೇಳಬೇಕಾದ ನ್ಯೂಸ್ ಚಾನಲ್‌ಗಳು ವಾಸ್ತು, ಜ್ಯೋತಿಷ್ಯ, ಸೆಕ್ಸ್, ಕ್ರೈಮ್ ಇತ್ಯಾದಿ ಸುದ್ದಿಗಳನ್ನೇ ಭಿತ್ತರಿಸುತ್ತಾ ಐಪಿಎಲ್ ಭಾರತದ (ಶ್ರೀಮಂತರು ಹಾಗೂ ಬಂಡವಾಳಶಾಹಿ)ಪರ ಸುದ್ದಿಗಳನ್ನು ಪ್ರದರ್ಶಿಸುತ್ತಾ ಬಿಪಿಎಲ್ ಭಾರತವನ್ನು ನಿರ್ಲಕ್ಷಿಸುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.ಟಿಆರ್‌ಪಿ ಎಂಬ ಬಿಸಿಲು ಕುದುರೆ ಬೆನ್ನೇರಿದ ಮಾಧ್ಯಮಗಳು ನೈತಿಕ ಹಾಗೂ ತಾತ್ವಿಕ ಬದ್ದತೆಗಳಿಂದ ದೂರ ಸರಿಯುತ್ತಿವೆ. ಮುಂದೆ ಇದು ವಾಕ್ ಸ್ವಾತಂತ್ರ್ಯವನ್ನೇ ಪ್ರಶ್ನೆ ಮಾಡುವ ಅಪಾಯವನ್ನು ತಂದೊಡ್ಡಬಹುದು ಎಂದು ಅವರು ಆತಂಕವನ್ನು ವ್ಯಕ್ತಪಡಿಸಿದರು.

ಚಂದನ ವಾಹಿನಿ ಕಾರ್ಯಕ್ರಮ ನಿರ್ಮಾಪರಾದ ಡಾ.ಎಚ್.ಎನ್.ಆರತಿ ಮಾತನಾಡಿ "ಇಂದು ಮಾಧ್ಯಮಗಳನ್ನು ಮೌಢ್ಯ ಇತ್ಯಾದಿ ಕಮರ್ಶಿಯಲ್ ಸುದ್ದಿಗಳೇ ಆವರಿಸಿದ್ದು, ವಾಸ್ತವ ಸುದ್ದಿಗಳ ಮೂಲಕ ಸಮಾಜವನ್ನು ಸೂಕ್ಷ್ಮಗೊಳಿಸುವ ಉದ್ದೇಶದಿಂದ ದೂರ ಸರಿಯುತ್ತಿವೆ. ದೂರದರ್ಶನದ ಚಂದನವಾಹಿನಿಯಲ್ಲಿ ಇಂಥಹ ರಂಜನಕ ಸುದ್ದಿಗಳನ್ನು ಬಿತ್ತರಿಸಿ ಪ್ರೇಕ್ಷಕರ ಅಭಿರುಚಿ ಕೆಡಿಸುವ ಕೆಲಸ ಮಾಡುತ್ತಿಲ್ಲ ಎಂಬ ಸಂತೋಷವಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಪ್ರಜಾವಾಣಿಯ ಹಿರಿಯ ಪತ್ರಕರ್ತರಾದ ಆರ್.ಪೂರ್ಣಿಮಾ ಮಾತನಾಡಿ "ಮಾಧ್ಯಮ ಒಂದು ಕಾಲದಲ್ಲಿ ವಸಾಹತುಶಾಹಿ ವಿರೋಧಿ ಹೋರಾಟ ಪ್ರತೀಕವಾಗಿ ಹುಟ್ಟಿದವು. ಆದ್ರೆ ಇಂದು ಅದೇ ವಸಾಹತುಶಾಹಿ ಮಾರುಕಟ್ಟೆ ಶಕ್ತಿಗಳ ಪರವಾಗಿ ಕಾರ್ಯನಿರ್ವಹಿಸುತ್ತಿವೆ. ಮಾಧ್ಯಮಗಳು ಆತ್ಮಾವಲೋಕನ ಮಾಡಿಕೊಳ್ಳಲು ಇದು ಸಕಾಲವಾಗಿದ್ದು, ಪ್ರೇಕ್ಷಕರು ಹಾಗೂ ವೀಕ್ಷಕರೂ ಮಾಧ್ಯಮಗಳ ಸುದ್ದಿಗಳ ಕುರಿತು ಪ್ರತಿಕ್ರಿಯಿಸಬೇಕಿದೆ ಎಂದು ಅಭಿಪ್ರಾಯಪಟ್ಟರು.

ಈಟಿವಿ ಮುಖ್ಯ ಸಂಪಾದಕ ಜಿ.ಎನ್. ಮೋಹನ್ ಮಾತನಾಡಿ "ಮಾಧ್ಯಮಗಳು ಇಂದು ಉದ್ಯಮವಾಗಿರುವುದು ಸತ್ಯ. ಮಾಧ್ಯಮಗಳ ಸುದ್ದಿ ಬಿತ್ತರದ ಶೈಲಿಯೂ ರಂಜನೆಯ ರೂಪ ಪಡೆದು–ಕೊಂಡಿದ್ದು, ಪ್ರೇಕ್ಷಕರು ಎಚ್ಚೆತ್ತರೆ ಮಾತ್ರ ಇಂಥಹ ಪ್ರಚೋದನಕಾರಿ ಸುದ್ದಿಗಳಿಗೆ ಬ್ರೇಕ್ ಹಾಕಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮಾಜಿ ಸಚಿವ ಬಿ.ಟಿ.ಲಲಿತಾನಾಯಕ್, ಎಸ್.ವೈ.ಗುರುಶಾಂತ್, ಹುಲಿಕುಂಟೆಮೂರ್ತಿ, ಪುರುಶೋತ್ತಮದಾಸ್, ಸಂಘರ್ಷ, ಜನಾರ್ಧನ ಕೆಸರಗದ್ದೆ, ದೀಪ ಗಿರೀಶ್, ಎಸ್‌ಎಫ್‌ಐ, ರಾಜ್ಯಾಧ್ಯಕ್ಷ ಅಂಬರೀಶ್, ಬಿ.ರಾಜಶೇಖರ್‌ಮೂರ್ತಿ, ಜಿ.ಎನ್.ನಾಗರಾಜ್, ಕೆ.ಎಸ್.ಲಕ್ಷ್ಮಿ ಮುಂತಾದವರು ಸಂವಾದದಲ್ಲಿ ಪಾಲ್ಗೊಂಡರು.

ಬಿಜೆಪಿಯೊಳಗಿನ ಭಿನ್ನಮತ.......

ಪುಟ 3 ರಿಂದ



ಮಾತ್ರವಲ್ಲ, ಬಿಎಸ್‌ವೈಯವರ ಬೆಂಬಲಿಗರಾದ ಸಿದ್ದೇಶ್ವರ್‌ರವರನ್ನು ಕೇಂದ್ರ ಮಂತ್ರಿ ಮಂಡಲದಿಂದ ಕೈ ಬಿಡಲು ಮೋದಿ ನಿರ್ಧರಿಸಿ ರಾಜೀನಾಮೆ ಸಲ್ಲಿಸಲು ಸೂಚಿಸಿದ್ದಾರೆ. ಇವೆಲ್ಲಾ ವಿದ್ಯಾಮಾನಗಳು ಯಡ್ಯೂರಪ್ಪನವರ ಬಣವನ್ನು ನಿರ್ಭಂಧಿಸುವ, ನಿಯಂತ್ರಿಸುವ ಕ್ರಮಗಳು ಎಂಬುದು ಸ್ಪಷ್ಟ.

ಭಿನ್ನಮತ– ಮತ್ತಷ್ಟೂ ಆಳ

ಬಿಜೆಪಿಯೊಳಗಿನ ಭಿನ್ನಮತವನ್ನು ತಣಿಸುವ, ಮಣಿಸುವ ಕೇಂದ್ರ ನಾಯಕರ ಕ್ರಮಗಳು, ಶಮನಕಾರಿ ಸೂತ್ರವಾಗದೇ ಅದನ್ನು ಮತ್ತಷ್ಟೂ ಹೆಚ್ಚಿಸಿ ನಿತ್ಯ ಕದನದ ಕಣವನ್ನಾಗಿಸುವ ಸಾಧ್ಯತೆಗಳೇ ಹೆಚ್ಚು. ಯಾಕೆಂದರೆ ಬಿಜೆಪಿಯೊಳಗೆ ಯಡ್ಯೂರಪ್ಪನವರ ಮರು ಸೇರ್ಪಡೆಯಾದರೂ ಮಾನಸಿಕವಾಗಿ ಬೆಸೆದಿಲ್ಲ. ಎಲ್ಲರಲ್ಲೂ ಇನ್ನೂ ವಿಭಜನೆ ಭಾವ ಹೋಗಿಲ್ಲ. ಈಗಿನ ಒಡಕಿನ ವಿದ್ಯಾಮಾನಗಳು ಕೇವಲ ತಾಂತ್ರಿಕವಲ್ಲ, ಬದಲಾಗಿ ಮಾನಸಿಕ ಒಡಕು ಕೂಡ. ಇದು ಮತ್ತಷ್ಟೂ ಆಳಗೊಂಡು ಅಂತರವನ್ನೇ ಬೆಳಸುತ್ತದೆ. ಅದು ಸ್ಫೋಟಗೊಳ್ಳುತ್ತಲೇ ಇರುತ್ತದೆ.

ಸ್ಥಾಪಿತ ಹಿತಸಕ್ತಿಗಳು

ಮುಖ್ಯವಾಗಿ, ಈ ಬಡಿದಾಟಗಳು ಕೇವಲ ವ್ಯಕ್ತಿಗಳ ನಡುವಿನ ಭಿನ್ನಾಭಿಪ್ರಾಯ ಮಾತ್ರವಾಗಿರದೇ ಇವರ ಹಿಂದೆ ರಾಜ್ಯ–ರಾಷ್ಟ್ರದ, ಅಂತರ್ ರಾಷ್ಟ್ರದ ಲೂಟಿಖೋರ ಸ್ಥಾಪಿತ ಹಿತಾಸಕ್ತಿಗಳಿವೆ. ಬಿಜೆಪಿಯೆಂದರೆ 'ಬಿಸಿನೆಸ್ ಪಾರ್ಟಿ' ಯಾಗಿದೆ ಎಂದು ಅದರ ಕೆಲ ನಾಯಕರೇ ಬಹಿರಂಗವಾಗಿ ಆಡುತ್ತಿದ್ದಾರೆ. ಅದು ವ್ಯಂಗ್ಯದ ಸಂಗತಿಯಷ್ಟೇ ಅಲ್ಲ. ಇದು ಕೇಂದ್ರಕ್ಕೂ ಅನ್ವಯಿಸುವ ಮಾತೂ ಕೂಡ. ಹಿಂದೆ ಬಿಜೆಪಿ ಆಡಳಿತಾವಧಿಯಲ್ಲಿ ರಾರಾಜಿಸಿದ ಭೂಮಿ ಮತ್ತು ಗಣಿ ಮಾಫಿಯಾದಂತಹ ಲೂಟಿ–ಖೋರರು, ಕಪ್ಪು ಹಣದ ಖದೀಮರು ಈಗಲೂ ಅದರೊಂದಿಗೇ ಇದ್ದಾರೆ. ಈ ಕರಾಳ ಶಕ್ತಿಗಳು ವಿವಿಧ ನಾಯಕರ ಹಿಂದಿದ್ದು ಮುಂದೆ ಅಧಿಕಾರಕ್ಕೆ ಬಂದರೆ ಮೇಲುಗೈ ಸಾಧಿಸಿ ದೇಶವನ್ನು, ರಾಜ್ಯವನ್ನು ಲೂಟಿ ಹೊಡೆಯಬಹುದೆಂದು ಕಾದಿದ್ದಾರೆ. ನಾಯಕರ ವ್ಯಕ್ತಿಗತ ದುರಾಸೆಗಳ ಜೊತೆಗೆ ಈ ಲಾಬಿಗಳ ಸ್ಪರ್ದೆಯೂ ಪ್ರಮುಖವಾಗಿದೆ. ಇಂತಹ ಶಕ್ತಿಗಳನ್ನು ಒಡಲಲ್ಲಿ ಇಟ್ಟುಕೊಂಡು ಪೋಷಿಸುತ್ತಿರುವ ಬಿಜೆಪಿ–ಸಂಘ ಪರಿವಾರದ 'ಸ್ವಯಂ–ಸೇವಕರು' ಮತ್ತೇ ಅಧಿಕಾರಕ್ಕೆ ಬಂದಲ್ಲಿ ರಾಜ್ಯದ ಸ್ಥಿತಿ ಅಧೋಗತಿ!

ಇಂತಹ ಲಾಬಿ–ಗುಂಪುಗಾರಿಕೆಗಳು, ಭಿನ್ನಮತದ ಬಡಿದಾಟ ಬಹುತೇಕ ಎಲ್ಲಾ ಅಧಿಕಾರಸ್ಥ ಪಕ್ಷಗಳಲ್ಲಿ ಕಾಣುವ ಅಂಶ. ಅದು ಕಾಂಗ್ರೆಸ್‌ನಲ್ಲಿ ಮಂತ್ರಿಮಂಡಲದ ವಿಸ್ತರಣೆಯ ಸಂದರ್ಭದಲ್ಲಿ, ರಾಜ್ಯಸಭಾ ಸದಸ್ಯರ ಚುನಾವಣಾ ಆಯ್ಕೆ ಸಂದರ್ಭದಲ್ಲಿ ಜೆಡಿಎಸ್‌ನಲ್ಲಿ, ಈಗ ಬಿಜೆಪಿಯಲ್ಲಿ ಇಂತಹ ಕಿತ್ತಾಟ ಈಗಿನವು. ಇದರಲ್ಲಿ ರಾಜ್ಯದ ಜನತೆಯ ಹಿತಕಾಯುವ ಯಾವುದೇ ಪ್ರಶ್ನೆಗಳಾಗಲೀ, ತಾತ್ವಿಕ ಬಿನ್ನಾಭಿಪ್ರಾಯಗಳಾಗಲೀ ಇರಲಿಲ್ಲ. ಕೇವಲ ಲಾಭಖೋರತನದ ಅನೈತಿಕ ಬಿಸಿನೆಸ್!

ವಿಚಿತ್ರವೆಂದರೆ, ಇಂತಹ ಪಕ್ಷಗಳು ಒಬ್ಬರಿಗೊಬ್ಬರು ತಾವೇ ನಿಜವಾದ ಪರ್ಯಾಯವೆಂದು ಫೋಜು ನೀಡಿ ಬೊಬ್ಬೆ ಹಾಕುತ್ತಿವೆ! ಈ ಅಬ್ಬರದ ಬೊಬ್ಬೆಗಳಿಗೆ ಜನ ಮರುಳಾಗಬೇಕೇ?

ಕಟ್ಟಡ ಕಾರ್ಮಿಕರ ಬೇಡಿಕೆಗಳನ್ನು ಒಪ್ಪಿಸಿದ ಉಪವಾಸ ಸತ್ಯಾಗ್ರಹ



ದ.ಕ.ಜಿಲ್ಲೆಯ ಕಟ್ಟಡ ಕಾರ್ಮಿಕರ ಧರಣಿ ಸತ್ಯಾಗ್ರಹಕ್ಕೆ ಕಾರ್ಮಿಕ ಇಲಾಖೆ ಅಧಿಕಾರಿಗಳು ಸ್ಪಂದಿಸದೇ ಇದ್ದಾಗ, ಜೂನ್ 30 ರಂದು ಅಂದರೆ ನಾಲ್ಕನೇ ದಿನ ಧರಣಿ ಸತ್ಯಾಗ್ರಹವು ಉಪವಾಸ ಸತ್ಯಾಗ್ರಹವಾಗಿ ಪರಿವರ್ತಿಸಲಾಯಿತು. ಜಿಲ್ಲಾ ಕಟ್ಟಡ ಕಾರ್ಮಿಕರ ಮುಖಂಡರಾದ ಬಿ.ಎಂ.ಭಟ್ (ಅಧ್ಯಕ್ಷರು), ಜಯಂತ ನಾಯ್ಕ್, ರಾಮಣ್ಣ ವಿಟ್ಲ, ಮಂಗಳೂರು ನಗರ ಸಮಿತಿ ಮುಖಂಡರಾದ ಸಂತೋಷ್ ಶಕ್ತಿನಗರ, ಪ್ರೇಮನಾಥ ಜಲ್ಲಿಗುಡ್ಡೆ, ಉಮಾಶಂಕರ್ ಬೋಳೂರು ಅಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸಿದರು. ವಿಷಯ ಉಗ್ರವಾಗಿದೆ ಎಂದು ಪರಿಭಾವಿಸಿದ ದ.ಕ. ಜಿಲ್ಲಾಧಿಕಾರಿಗಳು ಅದೇ ದಿನ ಕಟ್ಟಡ ಕಾರ್ಮಿಕ ಸಂಘಟನೆಯ ಮುಖಂಡರನ್ನು ಹಾಗೂ ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ತಮ್ಮ ಕಚೇರಿಗೆ ಕರೆಸಿ ಮಾತುಕತೆ ನಡೆಸಿದರು. ಇಲಾಖೆ ಮಟ್ಟದಲ್ಲಿ ಇರುವ ಸಮಸ್ಯೆಗಳನ್ನು 15 ದಿನಗಳೊಳಗಾಗಿ ವಿಲೇವಾರಿ ಮಾಡುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡುವುದರೊಂದಿಗೆ ಉಪವಾಸ ಸತ್ಯಾಗ್ರಹ ಕೊನೆಗೊಂಡಿತು.

ಮಾತುಕತೆಯಲ್ಲಿ ಸಿಐಟಿಯು ದ.ಕ.ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ, ಕಟ್ಟಡ ಕಾರ್ಮಿಕ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಖಜಾಂಚಿ ಯೋಗೀಶ್ ಜಪ್ಪಿನಮೊಗರು, ಜಿಲ್ಲಾ ಸಮಿತಿ ಮುಖಂಡರಾದ ಸದಾಶಿವ ದಾಸ್, ರವಿಚಂದ್ರ ಕೊಂಚಾಡಿ ಸಂಘಟನೆ ವತಿಯಿಂದ ಭಾಗವಹಿಸಿದರು. ಸಹಾಯಕ ಕಾರ್ಮಿಕ ಆಯುಕ್ತ ಖುದ್ದಾಗಿ 6 ಮಂದಿ ಸತ್ಯಾಗ್ರಹಿಗಳಿಗೆ ಪಾನೀಯ ನೀಡುವುದರ ಮೂಲಕ ಉಪವಾಸ ಸತ್ಯಾಗ್ರಹವನ್ನು ಮುಕ್ತಾಯಗೊಳಿಸಲಾಯಿತು. ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ ಸತ್ಯಾಗ್ರಹದಲ್ಲಿ ಉಪಸ್ಥಿತರಿದ್ದ ಕಾರ್ಮಿಕರನ್ನು ಅಭಿನಂದಿಸಿ ಮಾತನಾಡಿದರು.

ಕರಾವಳಿ ಕಥೆ

ವರದಿ: ವಾ.ಉಚ್ಚಿಲ

ವೇಣೂರಿನಲ್ಲಿ ಬೀಡಿ ಕಾರ್ಮಿಕರ ಸಮಾವೇಶ

ಬಾಕಿ ತುಟ್ಟಿಭತ್ತೆ ಕೂಡಲೇ ನೀಡಬೇಕೆಂದು ಒತ್ತಾಯಿಸಿ ಪರ್ಯಾಯ ಉದ್ಯೋಗ ನೀಡದೆ ಕೋಟ್ಪಾ ಕಾಯಿದೆ ಜಾರಿ ಮಾಡಬಾರದೆಂದು ಆಗ್ರಹಿಸಿ ವೇಣೂರು ವಲಯ ಬೀಡಿ ಕೆಲಸಗಾರರ ಸಂಘದ ಆಶ್ರಯದಲ್ಲಿ ಜುಲೈ 05 ರಂದು ಬೀಡಿ ಕಾರ್ಮಿಕರು ಸಮಾವೇಶ ನಡೆಸಿದರು.

ಸಮಾವೇಶವನ್ನುದ್ದೇಶಿಸಿ ದ.ಕ.ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ನಿನ ಅಧ್ಯಕ್ಷ ಬಿ.ಎಂ.ಭಟ್ ಮಾತನಾಡಿದರು.

ಅಪೂರ್ಣ ಕೆಳಸೇತುವೆ ವಿರೋಧಿಸಿ ಡಿವೈಎಫ್ಐ ನಿಂದ ಅಣಕು ಮೀನುಗಾರಿಕೆ:

ಮಂಗಳೂರು ನಗರಕ್ಕೆ ಬಜಾಲ್‌ನಿಂದ ಸಂಪರ್ಕಿಸುವ ಸಿಟಿ ಬಸ್ ರಸ್ತೆ ಪಡೀಲಿನಲ್ಲಿ ರೈಲ್ವೇ ಹಳಿ ದಾಟಬೇಕಿದ್ದು, ಡಿವೈಎಫ್ಐ ಹಾಗೂ ನಾಗರಿಕರ ಸತತ ಹೋರಾಟಗಳ ಫಲವಾಗಿ ಪಡೀಲಿನಲ್ಲಿ ರೈಲ್ವೇ ಕೆಳಸೇತುವೆ ಮಂಜೂರಾಗಿ, ರೈಲ್ವೇ ಇಲಾಖೆಯು ಸೇತುವೆ ಕಾರ್ಯ ಪೂರ್ಣಗೊಳಿಸಿದೆ. ಆದರೆ ಸಂಪರ್ಕ ರಸ್ತೆಯನ್ನು ಪೂರ್ಣಗೊಳಿಸುವ ಜವಾಬ್ದಾರಿ ಮಂಗಳೂರು ಮಹಾನಗರಪಾಲಿಕೆಯದಾಗಿದ್ದು ಆ ಕಾಮಗಾರಿಯನ್ನು ಪೂರ್ಣಗೊಳಿಸದೆ ಇರುವುದರಿಂದ ಮಳೆಗಾಲ ಪ್ರಾರಂಭವಾದ ಮೇಲೆ ರೈಲ್ವೇ ಕೆಳಸೇತುವೆಯೊಳಗಡೆ ಕೆರೆಯಂತೆ ನೀರು ಸಂಗಹವಾಗಿದ್ದು, ವಾಹನ ಸಂಚಾರ ಸ್ಥಗಿತಗೊಂಡಿದೆ.

ಕಾಮಗಾರಿ ಪೂರ್ಣಗೊಳಿಸದಿರುವ ಪಾಲಿಕೆಯ ವಿಳಂಬವನ್ನು ಖಂಡಿಸಿ ಜೂನ್ 24 ರಂದು ಡಿಐಎಫ್ಐ ಮಂಗಳೂರು ನಗರ ಸಮಿತಿ ಕಾರ್ಯಕರ್ತರು ಕೆಳಸೇತುವೆಯಡಿಯಲ್ಲಿ ನಿಂತಿರುವ ನೀರಿನಲ್ಲಿ ಬಲೆ, ಗಾಳ ಹಿಡಿದು ಅಣಕು ಮೀನುಗಾರಿಕೆ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಡಿವೈಎಫ್ ಐ ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಸಂತೋಷ್ ಬಜಾಲ್ ಮಾತನಾಡಿದರು. ಡಿವೈಎಫ್ಐ ಮುಖಂಡರಾದ ಸಾದಿಕ್ ಕಣ್ಣೂರು, ಧೀರಜ್, ನಿತೇಶ್ ಪಕಲಡ್ಕ, ಪ್ರೇಮನಾಥ ಜಲ್ಲಿಗುಡ್ಡೆ, ಅಶೋಕ್ ಸಾಲ್ಯಾನ್ ಬಶೀರ್ ಮತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅತಿಥಿ ಉಪನ್ಯಾಸಕರನ್ನು ಮುಂದುವರೆಸಲು ತೀರ್ಮಾನ

ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಉನ್ನತ ಶಿಕ್ಷಣ ಸಚಿವರಾದ ಟಿ.ಬಿ. ಜಯಚಂದ್ರರವರ ನಿವಾಸದ ಎದುರು ಅತಿಥಿ ಉಪನ್ಯಾಸಕರು ಧರಣಿಯನ್ನು ನಡೆಸಿದರು. ಈ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಗೌರವ ಅಧ್ಯಕ್ಷರಾದ ಬಿ.ರಾಜಶೇಖರಮೂರ್ತಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಡಾ. ಮಲ್ಲಿಕಾರ್ಜುನ ಬಿ ಮಾನ್ಪಡೆ, ರಾಜ್ಯಾಧ್ಯಕ್ಷರಾದ ಶ್ರೀನಿವಾಸ ಚಾರ್, ಉಡುಪಿಯ ಜಿಲ್ಲಾಧ್ಯಕ್ಷರಾದ ರಂಜಿತ್, ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧ್ಯಕ್ಷರಾದ ಎಸ್. ಟಿ. ನಾಯಕ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖಂಡರಾದ ಸವಿತಾ ಹಾಗೂ ತುಮಕೂರು ಜಿಲ್ಲೆಯ ಡಾ. ಮಂಜುಳ ಸೇರಿ 7 ಜನರ ನಿಯೋಗದ ಜೊತೆ ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಕಾಸಸೌಧದಲ್ಲಿ ಮಾತುಕತೆಗೆ ಆಹ್ವಾನಿಸಿ ಸಭೆಯನ್ನು ನಡೆಸಿದರು.

ಸಚಿವರ ಜೊತೆ ವಾಗ್ವಾದ: ಉನ್ನತ ಶಿಕ್ಷಣ ಸಚಿವರ ಜೊತೆ ನಿಯೋಗ ಚರ್ಚೆ ಮಾಡುವ ಸಂದರ್ಭದಲ್ಲಿ ವಾಗ್ವಾದ ನಡೆದು, ತಾವು ಇಚ್ಛಾಶಕ್ತಿಯನ್ನು ವ್ಯಕ್ತಪಡಿಸುತ್ತಿದ್ದೀರಿ, ಆದರೆ ಜಾರಿಯಾಗುತ್ತಿಲ್ಲ. ನಮ್ಮನ್ನು ಮುಂದುವರೆಸುತ್ತೀವೆ ಅಥವಾ ಮುಂದುವರೆಸುವುದಿಲ್ಲ ಎಂಬ ತೀರ್ಮಾನಕ್ಕೆ ಬನ್ನಿ ಎಂದು ನಿಯೋಗ ಒತ್ತಾಯಿಸಿತು.

ಈ ಸಂದರ್ಭದಲ್ಲಿ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ಬರಮಾಡಿಕೊಂಡು ಸಭೆಯನ್ನು ಮುಂದುವರೆಸಿದ ಸಚಿವರು, ನಮ್ಮ ಬೇಡಿಕೆಗೆ ಸ್ಪಂದಿಸಿ, ಮುಂದಿನ ಶೈಕ್ಷಣಿಕ ವರ್ಷಕ್ಕೆ ಅಗತ್ಯವಿರುವಷ್ಟು ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳುವಾಗ, ಪ್ರಸಕ್ತ ವರ್ಷ ಸೇವೆಯಲ್ಲಿರುವವರನ್ನು ವಯೋಮಿತಿ ಮತ್ತು ಸೇವಾ ಹಿರಿತನದ ಆಧಾರದಲ್ಲಿ ಮುಂದುವರೆಸಲಾಗುವುದು. ಇದರ ಜೊತೆಗೆ ಕಳೆದ ಜನವರಿ ತಿಂಗಳಲ್ಲಿ ಪ್ರತಿಭಟನೆ ನಿರತ ಉಪನ್ಯಾಸಕರ ವೇತನ ತಡೆಹಿಡಿದಿದ್ದನ್ನು, ನಂತರದ ದಿನಗಳಲ್ಲಿ ಪಾಠ ಪ್ರವಚನಗಳನ್ನು ಮಾಡಿ ಮುಗಿಸಿರುವ ಉಪನ್ಯಾಸಕರಿಗೆ ವೇತನ ಕೊಡಲಾಗುವುದೆಂದು ತೀರ್ಮಾನಕ್ಕೆ ಬಂದರು.

ವೇತನ ಹೆಚ್ಚಳ ಮತ್ತು ನೂತನವಾಗಿ ಅಧಿಸೂಚನೆ ಹೊರಡಿಸಿ ಖಾಯಂ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಸಂದರ್ಭದಲ್ಲಿ ಹಾಲಿ ಸೇವೆಯಲ್ಲಿರುವ ಅತಿಥಿ ಉಪನ್ಯಾಸಕರಿಗೆ ಅರ್ಜಿ ಹಾಕಲು ವಯೋಮಿತಿ ಸಡಿಲಿಕೆ ಮತ್ತು ಕೃಪಾಂಕ ನೀಡುವ ತೀರ್ಮಾನಕ್ಕಾಗಿ ಸಚಿವ ಸಂಪುಟದಲ್ಲಿ ಮಂಡಿಸಲಾಗುವುದು ಎಂದು ತಿಳಿಸಿದರು. ಈ ತೀರ್ಮಾನಗಳನ್ನು ಲಿಖಿತ ರೂಪದಲ್ಲಿ ಕೊಡುವಂತೆ ಸಭೆಯಲ್ಲಿ ನಿಯೋಗ ಒತ್ತಾಯಿಸಿತು. ವಾರದೊಳಗೆ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಮುಖಾಂತರ ಲಿಖಿತವಾಗಿ ಕಳುಹಿಸಿಕೊಡಲಾಗುವುದು ಎಂದು ಭರವಸೆ ನೀಡಿದರು.

ಬಾಕಿ ತುಟ್ಟಿಭತ್ತೆ ನೀಡದಿದ್ದರೆ ಅನಿರ್ದಿಷ್ಟ ಧರಣಿ



ಬೀಡಿ ಕಾರ್ಮಿಕರಿಗೆ 2015–16ನೇ ಸಾಲಿನ ತುಟ್ಟಿಭತ್ತೆ ನೀಡಲು ಒಂದು ವರ್ಷ ಮಾಲಕರಿಗೆ ವಿನಾಯತಿ ನೀಡಿದ ಸರಕಾರ, ಈ ವರ್ಷ ಕೂಡಾ ಮಾಲಕರು ತುಟ್ಟಿಭತ್ತೆ ಪಾವತಿ ಮಾಡದಿರುವುದನ್ನು ಪ್ರಶ್ನಿಸದೆ, ಕಾರ್ಮಿಕ ದ್ರೋಹಿಯಾಗಿ ವರ್ತಿಸುತ್ತಿರುವುದನ್ನು ಖಂಡಿಸಿ, ಬೆಳ್ತಂಗಡಿ ತಾಲೂಕು ಬೀಡಿ ಕಾರ್ಮಿಕ ಸಂಘದ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ತಾಲೂಕು ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿದರು.

2015–16 ಮತ್ತು 2016–17ನೇ ಸಾಲಿನ ಬಾಕಿ ತುಟ್ಟಿಭತ್ತೆ ಪ್ರತಿ 1000 ಬೀಡಿಗೆ ರೂ.22.71 ಏರಿಕೆ ವೇತನ ಸಿಗಬೇಕಿದ್ದು, ಮಾಲಕರು ಅದನ್ನು ಕಾರ್ಮಿಕರಿಗೆ ಪಾವತಿಸದೆ ಉಳಿಸಿಕೊಂಡಿರುವಲ್ಲಿ ಮಾಲಿಕರೊಂದಿಗೆ ರಾಜ್ಯ ಸರಕಾರ ಶಾಮೀಲಾಗಿದೆ ಎಂಬುದಾಗಿ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ತಾಲೂಕು ಸಂಘದ ಪ್ರಧಾನ ಕಾರ್ಯದರ್ಶಿ ಈಶ್ವರಿ ಪದ್ಮುಂಜ ಆರೋಪಿಸಿದರು. ನರೇಂದ್ರ ಮೋದಿಯ ಕೇಂದ್ರ ಸರಕಾರವೂ ಕಾರ್ಮಿಕರಿಗೆ ಪರ್ಯಾಯ ಉದ್ಯೋಗಕ್ಕೆ ವ್ಯವಸ್ಥೆ ಕಲ್ಪಿಸದೆ, ಆರೋಗ್ಯ ರಕ್ಷಣೆಯ ಹೆಸರಿನಲ್ಲಿ ಕೋಟ್ಪಾ ಕಾಯಿದೆ ಜಾರಿ ಮಾಡಿ ಬೀಡಿ ಉದ್ಯಮದೊಂದಿಗೆ ಬೀಡಿ ಕಾರ್ಮಿಕರನ್ನೂ ಬೀದಿಪಾಲು ಮಾಡುತ್ತಿದೆ ಎಂದು ಟೀಕಿಸಿದರು.

ಆಗಸ್ಟ್ 10ರೊಳಗಾಗಿ ಬೀಡಿ ಮಾಲಕರು ಬಾಕಿ ತುಟ್ಟಿಭತ್ತೆಯನ್ನು ಪಾವತಿಸದಿದ್ದಲ್ಲಿ ಹಾಗೂ ಕೋಟ್ಪಾ ಕಾಯಿದೆ ಅನುಷ್ಠಾನವನ್ನು ತಡೆಹಿಡಿಯದಿದ್ದಲ್ಲಿ ತಾಲೂಕಿನ ಬೀಡಿ ಕಾರ್ಮಿಕರು ಆಗಸ್ಟ್ 10ರಿಂದ ಬೆಳ್ತಂಗಡಿ ತಾಲೂಕು ಕಚೇರಿ ಎದುರು ಅನಿರ್ದಿಷ್ಟ ಧರಣಿ ನಡೆಸಲಿದ್ದಾರೆ ಎಂದು ಈಶ್ವರಿ ಎಚ್ಚರಿಕೆ ನೀಡಿದರು.



ಅಕ್ಷರ ದಾಸೋಹ ನೌಕರರ ವೇತನ ಏರಿಕೆಗೆ ಸಮ್ಮೇಳನದ ಆಗ್ರಹ

ಮಾಸಿಕ ರೂ.2,000/– ಮಾತ್ರ ವೇತನ ನಿಗದಿಪಡಿಸಿ ರಾಜ್ಯ ಸರಕಾರವು ಬಿಸಿಯೂಟ ನೌಕರರನ್ನು ದುಡಿಸುತ್ತಿದೆ. ಇವರ ವೇತನವನ್ನು ಹೆಚ್ಚಿಸುವ ಭರವಸೆಯನ್ನು ಕೇಂದ್ರದ ಹಿಂದಿನ ಕಾಂಗ್ರೆಸ್ ಸರಕಾರ ಹಾಗೂ ಈಗಿನ ಬಿಜೆಪಿ ಸರಕಾರ ಭರವಸೆ ನೀಡಿದ್ದರೂ ಇನ್ನೂ ಯಾರೂ ಬಿಸಿಯೂಟ ನೌಕರರ ವೇತನ ಹೆಚ್ಚಿಸಲು ಕ್ರಮ ಕೈಗೊಂಡಿಲ್ಲ. ಕೂಡಲೇ ವೇತನ ಏರಿಕೆಯಾಗಬೇಕು ಎಂಬುದಾಗಿ ಜುಲೈ 03ರಂದು ಮಂಗಳೂರಿನಲ್ಲಿ ಜರುಗಿದ ದ.ಕ. ಜಿಲ್ಲಾ ಅಕ್ಷರ ದಾಸೋಹ ನೌಕರರ ಸಂಘದ 6ನೇ ಜಿಲ್ಲಾ ಸಮ್ಮೇಳನದಲ್ಲಿ ಆಗ್ರಹಿಸಲಾಯಿತು.

ಸಿಐಟಿಯು ದ.ಕ. ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಅಕ್ಷರ ದಾಸೋಹ ಇಲಾಖಾ ಸಹಾಯಕ ನಿರ್ದೇಶಕರಾದ ಯಶೋಧ ಉದ್ಘಾಟನಾ ಸಮಾರಂಭದಲ್ಲಿ ಅತಿಥಿಯಾಗಿ ಭಾಗವಹಿಸಿದ್ದರು. ಸಿಐಟಿಯು ಉಪಾಧ್ಯಕ್ಷರಾದ ವಸಂತ ಆಚಾರಿ ಸಮಾರೋಪ ಭಾಷಣ ಮಾಡಿದರು.

ಸಮ್ಮೇಳನವು 17 ಮಂದಿಯ ನೂತನ ಜಿಲ್ಲಾ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿರುತ್ತದೆ. ಪದ್ಮಾವತಿ ಶೆಟ್ಟಿ ಅಧ್ಯಕ್ಷರಾಗಿ, ಗಿರಿಜಾ ಮೂಡಬಿದ್ರೆ ಪ್ರಧಾನ ಕಾರ್ಯದರ್ಶಿಯಾಗಿ, ಭವ್ಯಾ ಮುಚ್ಚೂರು ಖಜಾಂಚಿಯಾಗಿ ಆಯ್ಕೆಯಾಗಿರುತ್ತಾರೆ. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಅಕ್ಷರದಾಸೋಹ ನೌಕರರ ಮುಖಂಡರಾದ ರಾಬರ್ಟ್ ಡಿಸೋಜ, ರಾಮಣ್ಣ ವಿಟ್ಲ, ವಿಲಾಸಿನಿ ತೊಕ್ಕೊಟ್ಟು, ಪ್ರಮೀಳಾ ಗುರುಪುರ, ವಿಜಯಲಕ್ಷ್ಮಿ, ಲತಾ, ಬಬಿತಾ, ಯಶೋಧ ಮತ್ತಿತರರು ಸಮ್ಮೇಳನದಲ್ಲಿ ಉಪಸ್ಥಿತರಿದ್ದರು.

ಹಗರಿ ಬೊಮ್ಮನಹಳ್ಳಿಯಲ್ಲಿ ಸಿಐಟಿಯುನ 8ನೇ ಬಳ್ಳಾರಿ ಜಿಲ್ಲಾ ಸಮ್ಮೇಳನ

ಕಾರ್ಮಿಕ ಖಾತೆಯನ್ನು ಬಂಡವಾಳಶಾಹಿಗೆ ಒಪ್ಪಿಸಿ ಕಾರ್ಮಿಕರನ್ನು ಜೀತದಾಳಾಗಿ ಮಾಡಿದ್ದಾರೆ – ಎಸ್.ವರಲಕ್ಷ್ಮಿ

ಜೂನ್ 26–27ರಂದು ಹಗರಿಬೊಮ್ಮನಹಳ್ಳಿಯಲ್ಲಿ ಸಿ.ಐ.ಟಿ.ಯು,ನ 8ನೇ ಬಳ್ಳಾರಿ ಜಿಲ್ಲಾ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಜೂನ್ 26ರಂದು ಬಹಿರಂಗ ಸಭೆಯೊಂದಿಗೆ ಇದು ಆರಂಭಗೊಂಡಿತು.ಬಳ್ಳಾರಿ ಜಿಲ್ಲಾದ್ಯಾಂತ ಇರುವ ಸಿ.ಐ.ಟಿ.ಯು ಕಾರ್ಯಕರ್ತರು ಹಗರಿಬೊಮ್ಮನಹಳ್ಳಿ ಬಸವೇಶ್ವರ ವೃತ್ತದಲ್ಲಿ ಸೇರಿ ಮುಖ್ಯ ಬೀದಿಗಳಲಿ ಸಾಗಿದ ಮೆರವಣಿಗೆಯ ನಂತರ ಬಹಿರಂಗ ಸಭೆಯಲ್ಲಿ ಸಮ್ಮೇಳನವನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯರ್ಶಿ ಎಸ್.ವರಲಕ್ಷ್ಮಿ ಉದ್ಘಾಟಿಸಿ ಮಾತನಾಡಿದರು.



ರಾಜ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೇವಲ ಖಾತೆಗಳ ಹಂಚಿಕೆಯಲ್ಲೇ ಅಧಿಕಾರ ನಡೆಸುತ್ತಿದ್ದಾರೆ. ಗಣಿ ಮಾಲಿಕರಾದ ಸಂತೋಷ್‌ಲಾಡ್‌ರವರಿಗೆ ಸರ್ಕಾರ ಕಾರ್ಮಿಕ ಸಚಿವರನ್ನಾಗಿ ಮಾಡಿರುವುದು ದುರಂತದ ಸಂಗತಿಯೆಂದು ರಾಜ್ಯ ಸರ್ಕಾರವನ್ನು ಅವರು ತರಾಟೆ ತೆಗೆದುಕೊಂಡರು. ಎರಡು ದಶಕಗಳಿಂದ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಾ ಬರುತ್ತಿರುವ ರಾಜ್ಯ ಮತ್ತು ಕೇಂದ್ರ ಸರ್ಕಾರ ನೀತಿಗಳು ಮತ್ತಷ್ಟು ತೀವ್ರಗೊಂಡಿದೆ. ಕಾರ್ಮಿಕ ಖಾತೆಯನ್ನು ಬಂಡವಾಳಶಾಹಿಗೆ ಒಪ್ಪಿಸಿ ಕಾರ್ಮಿಕರನ್ನು ಜೀತದಾಳಾಗಿ ಮಾಡಿದ್ದಾರೆ. ಜನ ಸಾಮಾನ್ಯರ ಅಭಿವೃದ್ಧಿ ಬಗ್ಗೆ ಚಿಂತೆ ಇಲ್ಲದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರಾಷ್ಟ್ರೀಯ ಸಂಪತ್ತನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಒಪ್ಪಿಸಲು ಮುಂದಾಗಿವೆ. ಕಾರ್ಮಿಕ ಪರವಾದ ಕಾನೂನುಗಳನ್ನು ತಿದ್ದುಪಡಿ ಮಾಡಲು ಹೊರಟಿದ್ದು ಇದು ಕಾರ್ಪೊರೇಟ್ ವಲಯದ ಹಿತ ಕಾಯುವುದಾಗಿದೆ ಎಂದು ಅವರು ಗುಡುಗಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ್‌ರವರು ಮಾತನಾಡಿ ಬಗರ್ ಹುಕುಂ ಸಾಗುವಳಿದಾರರನ್ನು ರಾಜ್ಯ ಸರ್ಕಾರ ಒಕ್ಕಲೆಬ್ಬಿಸಲು ಹೊರಟಿದೆ, ಅದಕ್ಕಾಗಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಿದೆ, ಮುಂಗಾರಿನಲ್ಲಿ ರೈತರಿಗೆ ಸರಿಯಾದ ಸಮಯಕ್ಕೆ ಸಮರ್ಪಕವಾದ ಬೀಜ, ಗೊಬ್ಬರ ವಿತರಣೆ ಮಾಡಿಲ್ಲ, ಇದು ರೈತ ಮತ್ತು ಕಾರ್ಮಿಕ ವಿರೋಧಿ ಸರ್ಕಾರವೆಂದು ಅವರು ವಿಮರ್ಷಿಸಿದರು.

ವರದಿ: ಜೆ. ಸತ್ಯಬಾಬು

ಸಿ.ಐ.ಟಿ.ಯು. ಜಿಲ್ಲಾ ಕಾರ್ಯದರ್ಶಿಗಳಾದ ಜೆ.ಸತ್ಯಬಾಬುರವರು "ಬಳ್ಳಾರಿ ಜಿಲ್ಲೆಯ ಕಾರ್ಮಿಕರ ಸಮಸ್ಯೆಗಳಿಗೆ ಕಾರ್ಮಿಕ ಮಂತ್ರಿ ಗಮನ ನೀಡಬೇಕಾಗಿದೆ. ಸಂಡೂರಿನಲ್ಲಿರುವ ಅವರ ಕಂಪನಿಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸರಿಯಾದಂತಹ ನ್ಯಾಯವನ್ನು ಒದಗಿಸಿಲ್ಲ. ಜಿಲ್ಲೆಯ ಮತ್ತು ರಾಜ್ಯದ ಕಾರ್ಮಿಕರ ಹಿತಕಾಯುವಲ್ಲಿ ವಿಫಲರಾದರೆ ಮುಂದಿನ ದಿನಗಳಲ್ಲಿ ಕಾರ್ಮಿಕರ ಸರಿಯಾದಂತಹ ಗುಣಪಾಠವನ್ನು ಕೊಡುತ್ತಾರೆ" ಎಂದು ಎಚ್ಚರಿಕೆ ನೀಡಿದರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಸಿ.ಐ.ಟಿ.ಯು ಜಿಲ್ಲಾಧ್ಯಕ್ಷರಾದ ಆರ್.ಎಸ್.ಬಸವರಾಜ ವಹಿಸಿದ್ದರು, ಜಿಲ್ಲಾ ಸಮಿತಿಯ ಇನ್ನಿತರ ಪದಾಧಿಕಾರಿಗಳು ಮಾತನಾಡಿದರು.

ಸ್ವಾಗತ ಸಮಿತಿ ಗೌರವ ಅಧ್ಯಕ್ಷರಾದ ಹುರುಕಡ್ಲೆ ಶಿವಕುಮಾರ ಮತ್ತು ಅಧ್ಯಕ್ಷರಾದ ಬಿ. ಮಾಳಮ್ಮ (ರಾಜ್ಯ ಅಧ್ಯಕ್ಷರು ದೇವದಾಸಿ ಮಹಿಳಾ ಸಂಘಟನೆ), ಕೆ.ಪಿ.ಆರ್.ಎಸ್. ಜಿಲ್ಲಾಧ್ಯಕ್ಷರಾದ ವಿ.ಎಸ್.ಶಿವಶಂಕರ್, ಜೆ.ಎಂ.ಎಸ್. ಅಧ್ಯಕ್ಷರಾದ ಮಂಜುಳ ಹವಾಲ್ದಾರ್, ಮುಖಂಡರಾದ ಸರೋಜ, ಸರ್ಕಾರಿ ನೌಕರರ ಒಕ್ಕೂಟದ ಮುಖಂಡರಾದ ಎಂ. ಜಂಬಯ್ಯನಾಯ್ಕ, ಕೊಡಗಿ ಮಲ್ಲಿಕಾರ್ಜುನ ಮುಂತಾದವರು ಭಾಗವಹಿಸಿದ್ದರು. ಬಹಿರಂಗ ಸಭೆಯ ಸ್ವಾಗತವನ್ನು ಸ್ವಾಗತ ಸಮಿತಿ ಕಾರ್ಯದರ್ಶಿ ಕಾಂ॥ಎಸ್. ಜಗನ್ನಾಥ ನೆರವೇರಿಸಿದರು.

ಬಹಿರಂಗ ಸಭೆಯ ನಂತರ ಪ್ರತಿನಿಧಿಗಳ ಅಧಿವೇಶನದಲ್ಲಿ. ಸುಮಾರು 150 ಜನ ಪ್ರತಿನಿಧಿ ಸಂಗಾತಿಗಳು ಭಾಗವಹಿಸಿದ್ದರು, ಕರಡು ವರದಿಯ ಮೇಲೆ 17 ಜನ ಸಂಗಾತಿಗಳು ಚರ್ಚೆ ನಡೆಸಿದರು. ಜಿಲ್ಲೆಯ ಕಾರ್ಮಿಕರ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಕಾರ್ಮಿಕ ಚಳುವಳಿಗಳನ್ನು ವಿಸ್ತಾರ ಮಾಡುವುದು ಮತ್ತು ಸಂಘಟನೆಯನ್ನು ಬಲಿಷ್ಠಗೊಳಿಸುವ ಕುರಿತು ಚರ್ಚೆಗಳು ನಡೆದಿದೆ.

ಸಿಐಟಿಯು ಸಮ್ಮೇಳನದಲ್ಲಿ ನೂತನ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು. 21 ಪದಾದಿಕಾರಿಗಳು ಹಾಗೂ 52 ಜನ ಜಿಲ್ಲಾ ಸಮಿತಿ ಸದಸ್ಯರುಗಳನ್ನು ಆಯ್ಕೆ ಮಾಡಲಾಯಿತು. ಜಿಲ್ಲಾಧ್ಯಕ್ಷರಾಗಿ ಆರ್.ಭಾಸ್ಕರ್‌ರೆಡ್ಡಿ, ಪ್ರಧಾನ ಕಾರ್ಯದರ್ಶಿಗಳಾಗಿ ಜೆ.ಸತ್ಯಬಾಬು(ಮರು ಆಯ್ಕೆ), ಖಜಾಂಚಿಯಾಗಿ ಕೆ.ನಾಗರತ್ನಮ್ಮ ಆಯ್ಕೆಯಾಗಿದ್ದು ಸಮ್ಮೇಳನ ಯಶಸ್ವಿಯಾಗಿ ನಡೆಸಲಾಯಿತು.





ಸಿಐಟಿಯು 3ನೇ ಸಿಯಟಿಯು ಕೊಪ್ಪಳ ಜಿಲ್ಲಾ ಸಮ್ಮೇಳನ

ಕಾರ್ಮಿಕರ ಹಿತವನ್ನು ಕಡೆಗಣಿಸುತ್ತಿರುವ ಸರ್ಕಾರಗಳು

ಸಿಐಟಿಯು ನ ಕೊಪ್ಪಳ ಜಿಲ್ಲೆಯ 3 ನೇ ಸಮ್ಮೇಳನ ದಿನಾಂಕ 24/25 ಜೂನ್ 2016 ರಂದು ಗಂಗಾವತಿಯಲ್ಲಿ ನಡೆಯಿತು. ಜೂನ್ 24 ರಂದು ಬೆಳಿಗ್ಗೆ ಬಹಿರಂಗ ಸಭೆಯ ರ್‍ಯಾಲಿಯಲ್ಲಿ ಸುಮಾರು 2 ಸಾವಿರ ಜನ ಭಾಗವಹಿಸಿದರು. ಬಹಿರಂಗ ಸಭೆಯನ್ನು ಉದ್ಘಾಟಿಸುತ್ತ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿಯವರು ಮಾತನಾಡಿ ದೇಶದಲ್ಲಿ ನಮ್ಮನಾಳುವ ಸರ್ಕಾರಗಳು ಕಾರ್ಮಿಕ–ವಿರೋಧಿ ನೀತಿಯನ್ನೇ ಅನುಸರಿಸುತ್ತಿವೆ, ಮೋದಿಯವರ ನೇತೃತ್ವದ ಬಿಜೆಪಿ ಸರಕಾರ ಮಾತಿನಲ್ಲೇ ಕಾಲಹರಣ ಮಾಡುತ್ತಾ ಬೇರೆ ದೇಶಕ್ಕೆ ನಮ್ಮ ದೇಶವನ್ನು ಒತ್ತೆಯ್ಟಿಟ್ಟು ಜನರ ನಿಜವಾದ ಸಮಸ್ಯೆಯನ್ನೇ ಬಿಟ್ಟು ದೇಶದ ಜನರನ್ನೇ ದಾರಿ ತಪ್ಪಿಸುವ ಹುನ್ನಾರ ಮಾಡುತ್ತಾರೆ ಎಂದರು.

ಸಿಐಟಿಯು ನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ವರಲಕ್ಷ್ಮಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ವೇತನ ಆಯೋಗದ ಶಿಫಾರಸ್ಸಿನಂತೆ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ 18000 ರೂ. ನೀಡಬೇಕಿದ್ದರೂ ಯಾವುದೇ ಸರ್ಕಾರ ಕ್ರಮ ಕೈಗೊಳ್ಳುತ್ತಿಲ್ಲ, ಕನಿಷ್ಠ ವೇತನಕ್ಕಾಗಿ ಕಾರ್ಮಿಕರ ಹೋರಾಟ ನಡೆಸಿದರೆ ಸರ್ಕಾರ ದೌರ್ಜನ್ಯ ಎಸಗುತ್ತಿದೆ, ಸುಳ್ಳು ಪ್ರಕರಣಗಳನ್ನು ದಾಖಲಿಸುತ್ತಿದೆ ಎಂದರು. ಪ್ರಧಾನಿ ನರೇಂದ್ರ ಮೋದಿಯವರ ಅಚ್ಛೇ ದಿನ್ ಬಂಡವಾಳಶಾಹಿಗಳಿಗೆ ಮಾತ್ರ ಅನ್ವಯವಾಗುತ್ತಿದ್ದರೆ, ಕಾರ್ಮಿಕರ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ರಾಜ್ಯ ಸರ್ಕಾರ ಕೂಡ ಕನಿಷ್ಠ ವೇತನ ನಿಗದಿ ವಿರುದ್ಧ ಕೋರ್ಟ್ ಮೊರೆ ಹೋಗಿರುವ ಕೆಲ ಕಂಪನಿಗಳ ಮಾಲಿಕರ ಪರವಾಗಿದೆ ಎಂದರು. ಇಂತಹ ಸನ್ನಿವೇಶದಲ್ಲಿ. ಕಾರ್ಮಿಕರ ಪರ ನೀತಿ ರೂಪಿಸುವಂತೆ ಸಮ್ಮೇಳನ, ಹೋರಾಟ ಮತ್ತು ಪ್ರತಿಭಟನೆ ಮೂಲಕ ಗಮನ ಸೆಳೆಯಲಾಗುತ್ತಿದೆ ಎಂದು ವರಲಕ್ಷ್ಮಿ ಹೇಳಿದರು.

ಸಿಐಟಿಯುನ ರಾಜ್ಯ ಕಾರ್ಯದರ್ಶಿ ಆರ್.ಎಸ್. ಬಸವರಾಜ ಮಾತನಾಡಿ ನಮನ್ನಾಳುವ ಸರ್ಕಾರಗಳು ಕಾರ್ಮಿಕರನ್ನು ಬೀದಿಪಾಲು ಮಾಡಲು ಹೊರಟಿವೆ, ಅದನ್ನು ವಿರೋದಿಸಿ ಸೆ: 2 ರಂದು ಭಾರತ ಬಂದ್‌ಗೆ ಕರೆ ನೀಡಿದೆ. ಎಲ್ಲಾ ಕಾರ್ಮಿಕರು ಭಾಗವಹಿಸಬೇಕೆಂದು ಕರೆ ನೀಡಿದರು.

ಪ್ರತಿನಿಧಿ ಅಧಿವೇಶನದಲ್ಲಿ ಜಿಲ್ಲಾ ಕಾರ್ಯದರ್ಶಿ ಗೌಸಸಾಬ ನದಾಫ್ ಕರಡು ವರದಿಯನ್ನು ಮಂಡಿಸಿದ ವರದಿ ಆದಾರದಲ್ಲಿ ಗ್ರಾಮ ಪಂಚಾಯತಿ, ಹಮಾಲಿ, ಬಿಸಿಯೂಟ, ಅಂಗನವಾಡಿ ನೌಕರರು, ಕಟ್ಟಡ ಕಾರ್ಮಿಕರು, ಕಿರ್ಲೋಸ್ಕರ ಫ್ಯಾಕ್ಟರಿ ಕಾರ್ಮಿಕ ಪ್ರತಿನಿಧಿಗಳು ಚರ್ಚೆಯಲ್ಲಿ ಭಾಗವಹಿಸಿದ್ದರು. ಚರ್ಚೆಯ ನಂತರ ಸರ್ವಾನುಮತದಿಂದ ವರದಿಯನ್ನು ಅಂಗಿಕರಿಸಲಾಯಿತು.

ಕನಿಷ್ಠ ವೇತನ 18000 ಸಾವಿರ ನಿಗದಿ ಮಾಡಬೇಕೆಂಬ ನಿರ್ಣಯವಲ್ಲದೆ, ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ನಿವೇಶನ ಕೊಡಬೇಕು, ಕೊಪ್ಪಳ ಜಿಲ್ಲೆಯ ಉಳಿದ ಭಾಗವನ್ನು ನೀರಾವರಿ ಸೌಲಭ್ಯ ಒದಗಿಸಬೇಕು ಮತ್ತು ಜಿಲ್ಲೆಯಲ್ಲಿ ಕೊಮುವಾದವನ್ನು ಹತ್ತಿಕ್ಕಲು ಕ್ರಮ ಕೈಗೊಳ್ಳಬೇಕು ಎಂಬ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಸಿಐಟಿಯು ನ ಜಿಲ್ಲಾ ಸಮಿತಿಗೆ ನೂತನ ಪದಾಧಿಕಾರಿಗಳ ಆಯ್ಕೆ

ಅಧ್ಯಕ್ಷರು : ನಿರುಪಾದಿ ಬೆಣಕಲಾ

ಉಪಾಧ್ಯಕ್ಷರುಗಳು : ಎ. ಹುಲುಗಪ್ಪ, ಕಲಾವತಿ, ಗೌಸಸಾಬ ನದಾಫ್, ಶಿವಮ್ಮ ಹುಡೇದ, ಶಾಂತ ಸಜ್ಜನ, ಎಸ್.ಎಸ್. ಹುಲುಗಪ್ಪ, ಶರಣಪ್ಪ ಆಗೊಲಿ, ಹನುಮಂತಪ್ಪ ಕೊಡಗಲಿ, ಹನುಮಂತಪ್ಪ ಸಿಡ್ಲಬಾಹಿ.

ಸಹ ಕಾರ್ಯದರ್ಶಿ : ಹನುಮಂತಪ್ಪ ಕಲ್ಮಿಂಗಿ, ಲಕ್ಷ್ಮಿದೇವಿ ಸೂನಾರ, ಅನ್ನಪೂರ್ಣ ಕುಷ್ಟಗಿ, ಶಿವನಗೌಡ, ಶೈಲಜ, ಎ.ಎಲ್. ತಿಮ್ಮಣ್ಣ, ನಾಗೇಶ್ ನಾಯ್ಕ, ಸಾವಿತ್ರಿ, ಸುಂಕಪ್ಪ ಗದಗ.


ನಾಳಿನ ಕಾರ್ಯಕ್ರಮಗಳು

ಜುಲೈ 11 ರಿಂದ 17	: ಸಿಪಿಐ(ಎಂ) ಪಕ್ಷದಿಂದ ಬೆಲೆ ಏರಿಕೆ, ನಿರುದ್ಯೋಗದ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಾಚರಣೆ
ಜುಲೈ 11	: ಮಿಷನ್ ಮೋಡ್ ವಿರೋಧಿಸಿ ದೇಶವ್ಯಾಪಿ ಅಂಗನವಾಡಿ ಕೇಂದ್ರಗಳ ಬಂದ್
ಜುಲೈ 11	: ಸಾರ್ವಜನಿಕ ಉದ್ದಿಮೆ ನೌಕರರ ಪ್ರತಿಭಟನೆ, ಟೌನ್‌ಹಾಲ್, ಬೆಂಗಳೂರು.
ಜುಲೈ 23 – 25	: ದಲಿತ ಶೋಷಣ ಮುಕ್ತಿ ಮಂಚ್ (ಡಿಎಸ್ಎಂಎಂ) ಅಖಿಲ ಭಾರತ ಅಧ್ಯಯನ ಶಿಬಿರ, ಹಾಸನ
ಜುಲೈ 25	: ಸರ್ಕಾರಿ ಸಾರಿಗೆ ನೌಕರರ ಮುಷ್ಕರ
ಆಗಸ್ಟ್ 09	: ಜೆಸಿಟಿಯು ವತಿಯಿಂದ ರಾಜ್ಯ ಮಟ್ಟದ ಬೃಹತ್ ರ್‍ಯಾಲಿ, ಬೆಂಗಳೂರು.
ಆಗಸ್ಟ್ 26 – 28	: ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ರಾಜ್ಯ ಸಮ್ಮೇಳನ, ಕೋಲಾರ
ಸೆಪ್ಟಂಬರ್ 2	: ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಜುಲೈ 16–17	: ಮೈಸೂರು ಜಿಲ್ಲೆ
ಜುಲೈ 23–24	: ದಾವಣಗೆರೆ ಜಿಲ್ಲೆ
ಜುಲೈ 24–25	: ಬೆಂಗಳೂರು ದಕ್ಷಿಣ ಜಿಲ್ಲೆ
ಜುಲೈ 29–30	: ಕಲಬುರಗಿ ಜಿಲ್ಲೆ
ಜುಲೈ 30–31	: ಉತ್ತರ ಕನ್ನಡ
ಜುಲೈ 30–31	: ಚಿತ್ರದುರ್ಗ
ಜುಲೈ 30	: ಯಾದಗಿರಿ ಜಿಲ್ಲೆ
ಜುಲೈ 31–ಆಗಸ್ಟ್ 01	: ಕೋಲಾರ ಜಿಲ್ಲೆ
ಆಗಸ್ಟ್ 06–07	: ಬೆಳಗಾಂ
ಆಗಸ್ಟ್ 6–7	: ತುಮಕೂರು ಜಿಲ್ಲೆ
ಆಗಸ್ಟ್ 13–14	: ಹಾಸನ ಜಿಲ್ಲೆ

ವಸೂಲಾಗದ ಕಾರ್ಪೊರೇಟ್ ಸಾಲಗಳ ಹೊರಲಾಗದ ಹೊರೆ



ಭಾರತೀಯ ರಿಸರ್ವ್ ಬ್ಯಾಂಕ್‌ನ ಇತ್ತೀಚಿನ ಹಣಕಾಸು ಸ್ಥಿರತೆ ವರದಿ (ಫೈನಾನ್ಶಿಯಲ್ ಸ್ಟೆಬಿಲಿಟಿ ರಿಪೋರ್ಟ್) ಪ್ರಕಾರ ಬ್ಯಾಂಕ್‌ಗಳ ವಸೂಲಾಗದ ಸಾಲದ (ಬ್ಯಾಡ್ ಡೆಟ್ – ಎನ್‌ಪಿಎ) ಹೊರೆಯ ಪರಿಸ್ಥಿತಿ ಕಳೆದ ಆರು ತಿಂಗಳಲ್ಲಿ ಹದಗೆಟ್ಟಿದೆ. ವರದಿಯ ಪ್ರಕಾರ, ಎನ್‌ಪಿಎ ಪರಿಮಾಣ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ 5.1 ಇದ್ದದ್ದು ಈ ವರ್ಷದ ಮಾರ್ಚ್‌ನಲ್ಲಿ 7.6ಕ್ಕೆ ಏರಿದೆ. ಒಟ್ಟು ಬ್ಯಾಡ್ ಡೆಟ್‌ನಲ್ಲಿ ದೊಡ್ಡ ಸಾಲಗಾರರ ಪಾಲು ಶೇಕಡಾ 86.4ಕ್ಕೆ ಏರಿದೆ. ಅದು 2016ರ ಮಾರ್ಚ್‌ನಲ್ಲಿ 58 ಶೇಕಡಾ ಆಗಿತ್ತು. ಒಂದು ಅಂದಾಜಿನ ಪ್ರಕಾರ ಕಾರ್ಪೊರೇಟ್ ವಲಯ ತೆಗೆದುಕೊಂಡ 6.7 ಲಕ್ಷ ಕೋಟಿ ರೂಪಾಯಿ ಸುಸ್ತಿ ಸಾಲಗಳಾಗುವ ಅಪಾಯವನ್ನು ಎದುರಿಸುತ್ತಿದೆ.

ಬ್ಯಾಂಕ್‌ಗಳ ಸ್ವತ್ತಿನ ಗುಣಾತ್ಮಕ ಪರಿಶೀಲನೆ ಮಾಡಲು ಹಾಗೂ ಬ್ಯಾಲೆನ್ಸ್‌ಶೀಟ್‌ಗಳನ್ನು ಸರಿಪಡಿಸಲು ರಿಸರ್ವ್ ಬ್ಯಾಂಕ್ ಎಲ್ಲಾ ಬ್ಯಾಂಕ್‌ಗಳಿಗೆ ಸೂಚಿಸಿದ ಮೇಲೆ ವಸೂಲಾಗದ ಸಾಲದ ಸಮಸ್ಯೆ ಮುನ್ನೆಲೆಗೆ ಬಂದಿದೆ. ರಿಸರ್ವ್ ಬ್ಯಾಂಕ್ ಸೂಚನೆ ಪ್ರಕಾರ ಬ್ಯಾಂಕ್‌ಗಳು ಆ ರೀತಿ ಮಾಡಿದಾಗ ಇನ್ನೂ ವರದಿಯಾಗದ ವಸೂಲಾಗದ ಸಾಲಗಳ ಹೂರಣ ಹೊರಬಿದ್ದಿದೆ.

ಯುಪಿಎ–2 ಸರಕಾರ ಹಾಗೂ ಈಗಿನ ನರೇಂದ್ರ ಮೋದಿ ಸರಕಾರ ನವ–ಉದಾರವಾದಿ ನೀತಿಗಳ ಹೆಸರಿನಲ್ಲಿ ಮೂಲಸೌಕರ್ಯಗಳ ವಲಯದಲ್ಲಿ ಖಾಸಗಿ ಕಂಪೆನಿಗಳಿಗೆ ಅತಿ ಉದಾರವಾಗಿ ಸಾಲಗಳನ್ನು ಪ್ರೋತ್ಸಾಹಿಸಿದ್ದೇ ಬ್ಯಾಂಕಿಂಗ್ ವಲಯ ಈ ದುಸ್ಥಿತಿಗೆ ಬರಲು ಕಾರಣವಾಗಿದೆ. ಸರಕಾರದ ಹಣಕಾಸು ಹೊಣೆಗಾರಿಕೆಗೆ ಬದ್ಧವಾಗಿರುವ ಹಿನ್ನೆಲೆಯಲ್ಲಿ, ಮೂಲಸೌಕರ್ಯ ಯೋಜನೆಗಳಲ್ಲಿ ಸರಕಾರಿ–ಖಾಸಗಿ ಸಹಭಾಗಿತ್ವದ ಹೆಸರಿನಲ್ಲಿ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ವಿದ್ಯುತ್ ಉತ್ಪಾದನೆ, ವಿದ್ಯುತ್ ವಿತರಣೆ, ಬಂದರು ಮತ್ತು ರಸ್ತೆ ಮುಂತಾದ ಮೂಲಸೌಕರ್ಯ ಕ್ಷೇತ್ರಗಳಲ್ಲಿ ಸಾಲ ನೀಡಲು ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ.

ಚಮಚಾ ಬಂಡವಾಳಶಾಹಿಗೆ ಉತ್ತೇಜನ ನೀಡುವುದೆಂದರೆ ಅದು ಸಾರ್ವಜನಿಕ ವಲಯದ ಬ್ಯಾಂಕ್‌ಗಳು ದೊಡ್ಡ ಕಾರ್ಪೊರೇಟ್ ಕಂಪೆನಿಗಳಿಗೆ ಮನಬಂದಂತೆ ಸಾಲ ನೀಡುವಂತೆ ಉತ್ತೇಜನ ನೀಡುವಂತೆಯೂ ಆಗುತ್ತದೆ. ಖಾಸಗಿ ಹೂಡಿಕೆಯ ಮೂಲಸೌಕರ್ಯ ಅಭಿವೃದ್ಧಿ ವಿಫಲವಾಗಿರುವುದಕ್ಕೆ ಎಸ್ಸಾರ್, ಜೆಪಿ, ಜಿಎಂಆರ್, ರಿಲಯನ್ಸ್ ಎಡಿಎಜಿ, ಅದಾನಿ, ಲ್ಯಾನ್ಕೊ ಮತ್ತಿತರ ದೊಡ್ಡ ಮೂಲಸೌಕರ್ಯ ಕ್ಷೇತ್ರದ ಕಂಪೆನಿಗಳು ಹೊಂದಿರುವ ದೊಡ್ಡ ಮೊತ್ತದ ವಸೂಲಾಗದ ಸಾಲಗಳೇ ಸಾಕ್ಷಿ ಹೇಳುತ್ತದೆ.

ಇದಕ್ಕೆ ಸರಕಾರದ ಪ್ರತಿಕ್ರಿಯೆಯೆಂದರೆ ಸಾರ್ವಜನಿಕ ವಲಯದ ಬ್ಯಾಂಕುಗಳು ಹೀಗೆ ಸತತವಾಗಿ ಸುಸ್ತಿದಾರರಾಗಿರುವವರ ಸಾಲವನ್ನು ಮನ್ನಾ ಮಾಡುವಂತೆ ಸೂಚಿಸುವುದು. 2013ರಿಂದ 2015ರ ನಡುವೆ ಬ್ಯಾಂಕ್‌ಗಳು ಈ ರೀತಿಯಾಗಿ ಮನ್ನಾ ಮಾಡಿದ ಸಾಲದ ಮೊತ್ತ 1.14 ಲಕ್ಷ ಕೋಟಿ ರೂಪಾಯಿ. ಹಣಕಾಸು ಖಾತೆಯ ಅಂಕಿಅಂಶಗಳು ತೋರಿಸುವ ಪ್ರಕಾರ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ ಬೇಕೆಂದೇ ಸುಸ್ತಿದಾರರಾದವರು 2015ರ ಡಿಸೆಂಬರ್ ವರೆಗೆ ಬಾಕಿಯಿಟ್ಟಿರುವ ಸಾಲದ ಮೊತ್ತ 66,190 ಕೋಟಿ ರೂಪಾಯಿಗಳು.

ಇತ್ತೀಚೆಗೆ, ಒತ್ತಡಕ್ಕೆ ಒಳಗಾದ ರಿಸರ್ವ್ ಬ್ಯಾಂಕ್ ಇಂಥ ಉದ್ದೇಶಪೂರ್ವಕ ಸುಸ್ತಿದಾರರ ಹೆಸರುಗಳನ್ನು ಪ್ರಕಟಿಸಲು ನಿರ್ಧರಿಸಿತು. ಆದರೆ ಇಂಥ ಸಾಲವನ್ನು ವಸೂಲಿ ಮಾಡಲು ಅವರ ಸೊತ್ತನ್ನು ವಶಪಡಿಸಿಕೊಳ್ಳಲು ಅಥವಾ ಮಾರಾಟ ಮಾಡಲು ಯಾವ ರೀತಿಯ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎನ್ನುವುದು ಮುಖ್ಯ ಪ್ರಶ್ನೆ. ಇದುವರೆಗೆ, ಯಾರನ್ನಾದರೂ ಉದ್ದೇಶಪೂರ್ವಕ ಸುಸ್ತಿದಾರ ಎಂದು ಘೋಷಿಸಿದರೆ ಅವರ ಸಾಲದ ಮಾರ್ಗಗಳನ್ನು ಮುಚ್ಚಲಾಗುತ್ತದೆ ಮತ್ತು ಬೇರೆ ಯಾವುದೇ ಬ್ಯಾಂಕ್ ಅಥವಾ ಸಂಸ್ಥೆಯಿಂದ ಅವರಿಗೆ ಹೆಚ್ಚುವರಿ ಸಾಲ ಸೌಲಭ್ಯ ಸಿಗದಂತೆ ಮಾಡಲಾಗುತ್ತದೆ. ಸಾಲ ಪಡೆಯುವವರಲ್ಲಿ ಪ್ರಮುಖರಾಗಿರುವ ದೊಡ್ಡ ಕಾರ್ಪೊರೇಟ್ ಕಂಪೆನಿಗಳು ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಪಡೆದ ಸಾಲವನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಮರುಪಾವತಿ ಮಾಡುವುದನ್ನು ಖಾತರಿಪಡಿಸಲು ಸರಕಾರ ಮತ್ತು ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಬೇಕು.

> ವಸೂಲಾಗದ ಕಾರ್ಪೊರೇಟ್ ಸಾಲಗಳ ಹೂರಣ ಹೊರಬಿದ್ದಿದೆ. ಯುಪಿಎ–2 ಸರಕಾರ ಹಾಗೂ ಈಗಿನ ನರೇಂದ್ರ ಮೋದಿ ಸರಕಾರ ನವ–ಉದಾರವಾದಿ ನೀತಿಗಳ ಹೆಸರಿನಲ್ಲಿ ಮೂಲಸೌಕರ್ಯಗಳ ವಲಯದಲ್ಲಿ ಖಾಸಗಿ ಕಂಪೆನಿಗಳಿಗೆ ಅತಿ ಉದಾರವಾಗಿ ಸಾಲಗಳನ್ನು ಪ್ರೋತ್ಸಾಹಿಸಿದ್ದೇ ಬ್ಯಾಂಕಿಂಗ್ ವಲಯ ಈ ದುಸ್ಥಿತಿಗೆ ಬರಲು ಕಾರಣವಾಗಿದೆ. ಬ್ಯಾಂಕಿಂಗ್ ವಲಯದಲ್ಲಿ ಖಾಸಗೀಕರಣಕ್ಕೆ ಒತ್ತು ನೀಡಿದರೆ ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ.

ಪ್ರಕಾಶ ಕಾರಟ್



ವಸೂಲಾಗದ ಸಾಲದಿಂದಾಗಿ ಬ್ಯಾಂಕ್‌ಗಳು ಅನುಭವಿಸುವ ಆದಾಯ ನಷ್ಟವನ್ನು ಚಿಲ್ಲರೆ ಸಾಲ ಕ್ಷೇತ್ರದ ಮೇಲೆ ಹೆಚ್ಚುವರಿ ಹೊರೆಯಾಗಿ ವರ್ಗಾಯಿಸಲಾಗುತ್ತದೆ. ಮನೆ, ಶಿಕ್ಷಣಕ್ಕಾಗಿ ಸಣ್ಣ ಸಾಲ ಪಡೆಯುವವರು ಮತ್ತು ಸಣ್ಣ ಉದ್ದಿಮೆದಾರರು ಇದರ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ.

ನವ–ಉದಾರವಾದಿ ಆಡಳಿತದಡಿ ಬ್ಯಾಂಕಿಂಗ್ ಕ್ಷೇತ್ರದ ಇಡೀ ದಿಕ್ಕನ್ನೇ ಮರುಪರಿಶೀಲಿಸಬೇಕಾಗಿದೆ. ಕೃಷಿ ಸಾಲದ ದೊಡ್ಡ ಪ್ರಮಾಣ ನಿಜವಾದ ರೈತರಿಗೆ ತಲುಪುತ್ತಿಲ್ಲ, ಕೃಷಿ–ಉದ್ಯಮ ಮತ್ತು ಕೃಷಿಯೇತರ ಉದ್ದೇಶಗಳಿಗೆ ಅದು ಹೋಗುತ್ತಿದೆ. ಆದ್ಯತೆ ಕ್ಷೇತ್ರಕ್ಕೆ ಸಾಲ ನೀಡಬೇಕೆಂಬ ಪರಿಕಲ್ಪನೆಯನ್ನೇ ಬುಡಮೇಲು ಮಾಡಲಾಗಿದೆ. ಮೋದಿ ಸರಕಾರ ಖಾಸಗೀಕರಣಕ್ಕೆ ಹೊಸದಾಗಿ ಮತ್ತಷ್ಟು ಒತ್ತನ್ನು ನೀಡುತ್ತಿದೆ.

ಬ್ಯಾಂಕಿಂಗ್ ವಲಯದಲ್ಲಿ ಖಾಸಗೀಕರಣಕ್ಕೆ ಒತ್ತು ನೀಡಿದರೆ ಪರಿಸ್ಥಿತಿ ಇನ್ನಷ್ಟು ಹದಗೆಡಲಿದೆ. ಕಾರ್ಪೊರೇಟ್ ಪ್ರಾಯೋಜಿತವೂ ಖಾಸಗಿ ಬ್ಯಾಂಕ್‌ಗಳೂ ಸೇರಿದಂತೆ ಹೊಸ ಬ್ಯಾಂಕ್‌ಗಳಿಗೆ ಲೈಸೆನ್ಸ್ ನೀಡಲು ಆರ್‌ಬಿಐ ನಿರ್ಧರಿಸಿರುವುದು ಅಪ್ಪಟ ತಪ್ಪು ನಡೆಯಾಗಿದೆ. ಸಾರ್ವಜನಿಕ ಕ್ಷೇತ್ರದ ಬ್ಯಾಂಕ್‌ಗಳ ಮರುಬಂಡವಾಳೀಕರಣಕ್ಕೆ ಸಾಕಷ್ಟು ಹಣ ನೀಡದಿರುವುದರ ಜತೆಜತೆಯಲ್ಲೇ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಬಂಡವಾಳವನ್ನು ವಾಪಸ್ ಪಡೆಯುವ ಸರಕಾರದ ನಿಲವು ಸಾರ್ವಜನಿಕ ಕ್ಷೇತ್ರದ ಬ್ಯಾಂಕ್ ವ್ಯವಸ್ಥೆಯ ಖಾಸಗೀಕರಣಕ್ಕೆ ಅನುವು ಮಾಡಿಕೊಡುತ್ತದೆ ಅಷ್ಟೇ.

ಸಾರ್ವಜನಿಕ ಕ್ಷೇತ್ರದ ಬ್ಯಾಂಕ್‌ಗಳ ಮರುಬಂಡವಾಳೀಕರಣಕ್ಕೆ ಹೆಚ್ಚಿನ ಅನುದಾನವನ್ನು ನೀಡುವುದು ಅಗತ್ಯ. 2019ರ ವರೆಗೆ 70ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಒದಗಿಸುವುದಾಗಿ ಸರಕಾರ ಆಶ್ವಾಸನೆ ನೀಡಿದ್ದು, ಈ ಹಣ ಏನೇನೂ ಸಾಲದು. ಪರಿಷ್ಕೃತ ಬಂಡವಾಳೀಕರಣ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಸರಕಾರ ನವ–ಉದಾರವಾದಿ ಹಣಕಾಸು ಪರಿಗಣನೆಯನ್ನು ಬದಿಗೆ ಸರಿಸಬೇಕಾಗುತ್ತದೆ. ಮೂಲಸೌಕರ್ಯ ಯೋಜನೆಗಳಿಗೆ ಹಣಕಾಸು ಒದಗಿಸುವಂತೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡುವುದನ್ನು ಸರಕಾರ ನಿಲ್ಲಿಸಬೇಕು. ಇಂಥ ಸಾಲಗಳಿಗೆ ಬೇರೆಯೇ ಒಂದು ಪರ್ಯಾಯ ಸಾಂಸ್ಥಿಕ ವ್ಯವಸ್ಥೆಯನ್ನು ರೂಪಿಸಬೇಕು.

ಅನು:ವಿಶ್ವ

* ಮಾರ್ಚ್2015ರಲ್ಲಿ ಅತ್ಯಂತ ದೊಡ್ಡ 100 ಸಾಲಗಾರರಲ್ಲಿ ವಸೂಲಾಗದ ಸಾಲಗಳ ಪ್ರಮಾಣ 0.7% ಇತ್ತು, ಮಾರ್ಚ್ 2016ರಲ್ಲಿ ಅದು 19.3% ಕ್ಕೇರಿದೆ.
* ಸಪ್ಟಂಬರ್2015ರಿಂದ ಮಾರ್ಚ್2016ರ ನಡುವೆ ದೊಡ್ಡ (5ಕೋಟಿ ರೂ.ಗಳಿಗಿಂತ ಹೆಚ್ಚಿನ ಸಾಲಗಳ)ಸಾಲಗಾರರ ವಸೂಲಾಗದ ಸಾಲಗಳಲ್ಲಿ 66.3% ಏರಿಕೆಯಾಗಿದೆ.
* ಕೃಷಿಯಲ್ಲಿನ ವಸೂಲಾಗದ ಸಾಲಗಳ ಪ್ರಮಾಣ ಉದ್ದಿಮೆ ವಲಯದ ಅರ್ಧದಷ್ಟು. ಆದರೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ, ಉದ್ಯಮಿಗಳು ದೇಶ ಬಿಟ್ಟು ಹಾರುತ್ತಾರೆ.

ಇಂದೀಗ ಅವಿವೇಕದ ವಿರುದ್ಧ ವಿವೇಕದ ಸಮರ –ಸೀತಾರಾಂ ಯೆಚೂರಿ



ನಾವೀಗ ವಿವೇಕವನ್ನು, ತರ್ಕಶಕ್ತಿಯನ್ನು ಬಲಗೊಳಿಸಿ ಅದು ಅವಿವೇಕದ ಮೇಲೆ, ತರ್ಕಹೀನತೆಯ ಮೇಲೆ ಜಯಗಳಿಸುವಂತೆ ಮಾಡಬೇಕಾಗಿದೆ ಎಂದು ಸೀತಾರಾಂ ಯೆಚೂರಿ ಕೊಲ್ಕೊತಾದಲ್ಲಿ ನ್ಯಾಶನಲ್ ಬುಕ್ ಏಜೆನ್ಸಿಯ 77ನೇ ವಾರ್ಷಿಕೋತ್ಸವದ ಸಮಾರಂಭದಲ್ಲಿ ಮಾತನಾಡುತ್ತ ಹೇಳಿದರು..

ಕೊಲ್ಕೊತಾದ ನ್ಯಾಶನಲ್ ಬುಕ್ ಏಜೆನ್ಸಿ ಅಥವ ಎನ್‌ಬಿಎ ಎರಡನೇ ಮಹಾಯುದ್ಧದ ಮೊದಲು ಮತ್ತು ನಂತರವೂ ಅತ್ಯಂತ ಕಷ್ಟಕರ ಸನ್ನಿವೇಶಗಳಲ್ಲಿ ಎಡ ಮತ್ತು ಪ್ರಗತಿಪರ ಸಾಹಿತ್ಯವನ್ನು ಪಸರಿಸುವಲ್ಲಿ ಬಹಳ ಮಹತ್ವದ ಪಾತ್ರ ವಹಿಸಿದ ಸಂಸ್ಥೆ.

ಈ ವಾರ್ಷಿಕೋತ್ಸವದ ಸಂದರ್ಭದಲ್ಲಿ 'ನವ–ಉದಾರವಾದ, ಕೋಮುವಾದ ಮತ್ತು ಬೌದ್ಧಿಕ ಪ್ರತಿ–ರೋಧ' ಎಂಬ ವಿಷಯದ ಮೇಲೆ ಮಾತಾಡುತ್ತ ಯೆಚೂರಿ ಬಿಜೆಪಿ ಆಳ್ವಿಕೆ ಮತ್ತು ಅರೆಸ್ಸೆಸ್ ಹಾಗೂ ರಾಷ್ಟ್ರೀಯವಾದ ಕುರಿತಂತೆ ಹಿಟ್ಲರನ ವಿಚಾರಗಳ ನಡುವಿನ ಸಾಮ್ಯವನ್ನು ಗುರುತಿಸುತ್ತ ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯ ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ ಹಿಂದೂರಾಷ್ಟ್ರವಾಗಿ ರೂಪಾಂತರ ಗೊಳ್ಳಬಹುದೆಂದು ಎಚ್ಚರಿಕೆ ನೀಡಿದರು.

ಜೆಎನ್‌ಯು ವಿವಾದ, ಅದಕ್ಕೆ ಮೊದಲು 'ಲವ್ ಜಿಹಾದ್', 'ಘರ್‌ವಾಪಸಿ' ಎಲ್ಲರನ್ನೂ ಒಳಗೊಳ್ಳುವ ಬಾರತೀಯತೆಯ ಸ್ಥಾನದಲ್ಲಿ ಕೆಲವರನ್ನು ಹೊರಗಿಡುವ ಹಿಂದೂರಾಷ್ಟ್ರದ ಪರಿಕಲ್ಪನೆಯನ್ನು ತರುವ ಪ್ರಯತ್ನ ಎಂದು ಅವರು ಹೇಳಿದರು. ಬೇರೆ ಯಾವುದೇ ಧರ್ಮವನ್ನು ಅನುಸರಿಸುವವರು ಅಥವ ಹಿಂದೂ ಜೀವನ ಶೈಲಿಯಲ್ಲಿ ಬೆರೆತು ಹೋಗಲು ಇಚ್ಛಿಸದವರೆಲ್ಲರೂ ಅವರ ಪ್ರಕಾರ, ವಿದೇಶೀಯರು ಮತ್ತು ರಾಷ್ಟ್ರ–ವಿರೋಧಿಗಳು.

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಾರ್ಪೊರೇಟ್‌ಗಳು ಹಿಟ್ಲರ್‌ನಲ್ಲಿ ಒಬ್ಬ ಉದ್ಧಾರಕನನ್ನು ಕಂಡಂತೆ ಭಾರತದಲ್ಲಿ ತಮ್ಮ ಲಾಭಗಳನ್ನು ಗರಿಷ್ಟ ಮಟ್ಟಕ್ಕೆ ಏರಿಸಿಕೊಳ್ಳಲು ಅವಕಾಶ ನೀಡುವ ಒಬ್ಬ ಉದ್ಧಾರಕ ಅವರಿಗೆ ಬೇಕಾಗಿದೆ. ಮೋದಿ ಅಮೆರಿಕಾ ಭೇಟಿಯಲ್ಲಿ, ರಕ್ಷಣಾ ವಲಯ ಸೇರಿದಂತೆ ಎಲ್ಲವನ್ನೂ ಎಫ್‌ಡಿಐಗೆ ತೆರೆದು ಮಾಡಿರುವುದು ಇದನ್ನೇ ಎಂದು ಯೆಚೂರಿ ವಿಶ್ಲೇಷಿಸಿದರು. ವೇಗವಾಗಿ ಬಳಿ ಬರುತ್ತಿರುವ ಫ್ಯಾಸಿಸ್ಟ್ ಪ್ರವೃತ್ತಿಗಳ ವಿರುದ್ಧ ಬೌದ್ಧಿಕ ಪ್ರತಿರೋಧವನ್ನು ಕಟ್ಟಬೇಕು ಎಂದು ಅವರು ಕರೆ ನೀಡಿದರು.

ಮುಂದುವರೆದು ಮಾತಾಡುತ್ತ ಯೆಚೂರಿ ದೇಶದಲ್ಲಿ ನಾವಿನ್ನೂ ಫ್ಯಾಸಿಸಂನ್ನು ಕಾಣುತ್ತಿಲ್ಲ ಎಂದರು. ಫ್ಯಾಸಿಸಂ ಎಂದರೆ ಸಂಸದೀಯ ಪ್ರಜಾಪ್ರಭುತ್ವದ ಜಾಗದಲ್ಲಿ ನಗ್ನ ಭಯೋತ್ಪಾದಕ ಸರ್ವಾಧಿಕಾರವನ್ನು ಹೇರುವುದು. ಸಂಸದೀಯ ಪ್ರಜಾಪ್ರಭುತ್ವವನ್ನು ಕಳಚಿ ಹಾಕಲು ಅವರನ್ನು ನಾವು ಬಿಟ್ಟಿಲ್ಲ.

ಆದರೆ ಪ್ರಜಾಪ್ರಭುತ್ವವನ್ನು ಕಳಚಿ ಹಾಕುವ ಪ್ರಯತ್ನ ನಡೆಯುತ್ತಿದೆ ಎಂದ ಅವರು, ಫ್ಯಾಸಿಸಂ ಬರುವುದನ್ನು ಕಾದು, ನಂತರ ಅದರ ವಿರುದ್ಧ ಹೋರಾಟ ನಡೆಸಬೇಕು ಎಂದಲ್ಲ ಎಂದು ಒತ್ತಿ ಹೇಳಿದರು. ಏಕೆಂದರೆ ಆಗ ಹೋರಾಟ ನಡೆಸಲು ಬಹಳ ಕಡಿಮೆ ಮಂದಿ ಉಳಿದಿರುತ್ತಾರೆ. ಫ್ಯಾಸಿಸಂ ಯಶಸ್ವಿಯಾಗಬೇಕಾದರೆ ಅವರು ಭಾರತೀಯ ಚರಿತ್ರೆಯ ಜಾಗದಲ್ಲಿ ಹಿಂದೂ ಪುರಾಣವನ್ನು ಕೂರಿಸಲು, ಭಾರತೀಯ ತತ್ವಶಾಸ್ತ್ರದ ಜಾಗದಲ್ಲಿ ಹಿಂದೂ ಧರ್ಮಶಾಸ್ತ್ರಗಳನ್ನು ಕೂರಿಸಲು ಯಶಸ್ವಿಯಾದರೆ ಮಾತ್ರ ಸಾಧ್ಯ.

ಆದ್ದರಿಂದ ಬೌದ್ಧಿಕ ಪ್ರತಿರೋಧವನ್ನು ಕಟ್ಟಿ ಬೆಳೆಸುವುದು ಮಹತ್ವದ್ದಾಗುತ್ತದೆ. ಇದು ಅವಿವೇಕದ ವಿರುದ್ಧ, ತರ್ಕಹೀನತೆಯ ವಿರುದ್ಧ ವಿವೇಕದ, ತರ್ಕಬದ್ಧತೆಯ ಸಮರ ಎಂದ ಅವರು ನಾವು ಅವಿವೇಕದ ಮೇಲೆ ವಿಜಯ ಸಾಧಿಸುವಂತೆ ಮಾಡಲು ವಿವೇಕವನ್ನು ಬಲಪಡಿಸಬೇಕಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು.

ಸೆಪ್ಟೆಂಬರ್ 2, 2016

ಎಸ್.ವರಲಕ್ಷ್ಮಿ



ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಾಕೆ?

ಕೇಂದ್ರದಲ್ಲಿ ಆಳ್ವಿಕೆ ನಡೆಸುತ್ತಿರುವ ನರೇಂದ್ರ ಮೋದಿ ನೇತೃತ್ವದ ಸರಕಾರ ಎರಡು ವರ್ಷಗಳ ಆಳ್ವಿಕೆಯ ಸಾಧನೆಗಳನ್ನು ಅದ್ದೂರಿಯ ಕಾರ್ಯಕ್ರಮಗಳು, ಟಿವಿ, ಪತ್ರಿಕಾ ಜಾಹೀರಾತುಗಳ ಮೂಲಕ ಜನಗಳಿಗೆ 'ತಲುಪಿಸಲು' ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿರುವಾಗ, ಆ ಜನಸಾಮಾನ್ಯರ ಒಂದು ಪ್ರಮುಖ ವಿಭಾಗ, ದೇಶದ ಕೋಟ್ಯಂತರ ಕಾರ್ಮಿಕರು ಮತ್ತು ನೌಕರರು ಈ ಸಪ್ಟಂಬರ್ 2ರಂದು ಮತ್ತೆ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ನಡೆಸುತ್ತಿದ್ದಾರೆ. ಇಷ್ಟು ದೊಡ್ಡ ಜನವಿಭಾಗವೊಂದು ಏಕೆ ಮತ್ತೆ ಹೋರಾಟದ ಕಣಕ್ಕಿಳಿದಿದೆ? ಈ ಸರಕಾರದಿಂದ ಅವರು ಏನನ್ನು ಕೇಳುತ್ತಿದ್ದಾರೆ? ಈ ವಾರದಿಂದ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿಯವರು ಈ ಮಹಾಮುಷ್ಕರದ ಬೇಡಿಕೆಗಳ ಬಗ್ಗೆ ನಮ್ಮ ಓದುಗರಿಗೆ ತಿಳಿಸುತ್ತಿದ್ದಾರೆ.

ಕಳೆದ ಸಂಚಿಕೆಗಳಲ್ಲಿ ರೂ.18,000 ಕನಿಷ್ಟ ಕೂಲಿಯ ಬೇಡಿಕೆ ಮತ್ತು ಉದ್ಯೋಗಾವಕಾಶ ನಿರ್ಮಾಣದ ಬೇಡಿಕೆಯ ಕುರಿತು ಬರೆದಿದ್ದಾರೆ. ಈ ಮಹಾಮುಷ್ಕರದ ಮತ್ತೊಂದು ಅತ್ಯಂತ ಮಹತ್ವದ ಬೇಡಿಕೆ, ನಿಜ ಹೇಳಬೇಕೆಂದರೆ, ಕಾರ್ಮಿಕ ಸಂಘಗಳ ಬೇರೆಲ್ಲ ಬೇಡಿಕೆಗಳ ಅಭಿನ್ನ ಭಾಗವಾದ ಕೇಂದ್ರ ಬೇಡಿಕೆಯೆಂದರೆ ಕಾರ್ಮಿಕ ಕಾನೂನುಗಳಿಗೆ ತರಬೇಕೆಂದಿರುವ ಎಲ್ಲ ಬದಲಾವಣೆಗಳನ್ನು ರದ್ದು ಮಾಡಬೇಕೆಂಬುದು. ದುಡಿಯುವ ಜನಗಳ ಮೇಲೆ ಗುಲಾಮಗಿರಿಯನ್ನು ಹೇರಲು ಈ ಬದಲಾವಣೆಗಳನ್ನು ಅತ್ಯಂತ ದಕ್ಷತೆಯಿಂದ ರೂಪಿಸಲಾಗಿದೆ. ಈ ಸಂಚಿಕೆಯಲ್ಲಿ ಲೇಖಕರು ಸಪ್ಟಂಬರ್2 ರ ಸಾರ್ವತ್ರಿಕ ಮುಷ್ಕರದ ಈ ಬೇಡಿಕೆಯನ್ನು ಪರಿಶೀಲಿಸುತ್ತಾರೆ.

3 ಕಾರ್ಮಿಕ ಕಾನೂನುಗಳಿಗೆ ಗುಲಾಮಗಿರಿ ಹೇರುವ ತಿದ್ದುಪಡಿಗಳು ಬೇಡವೇ ಬೇಡ

ಮೂಲ ಕಾರ್ಮಿಕ ಕಾನೂನುಗಳನ್ನು ಯಾವುದೇ ವಿನಾಯಿತಿಗಳಿಲ್ಲದೆ ಕಟ್ಟುನಿಟ್ಟಾಗಿ ಪಾಲಿಸಬೇಕು. ಕಾರ್ಮಿಕ ಕಾನೂನುಗಳ ಉಲ್ಲಂಘನೆಗೆ ಶಿಕ್ಷಾರ್ಹ ಕ್ರಮಗಳನ್ನು ಬಲಗೊಳಿಸಬೇಕು

ಶ್ರಮೇವ ಜಯತೆ ಎಂಬುದು ಸತ್ಯಮೇವ ಜಯತೆ ಎಂಬ ನಮ್ಮ ಪ್ರಜಾಪ್ರಭುತ್ವದ ಘೋಷವಾಕ್ಯದಷ್ಟೇ ಮಹತ್ವದ್ದು ಎನ್ನಲಾಗಿದೆ.

"ಭಾರತದಲ್ಲಿಯೇ ತಯಾರಿಸಿ" ಘೋಷಣೆಯ ಆಧಾರದಲ್ಲಿ ಬಂಡವಾಳವನ್ನು ಉತ್ತೇಜಿಸುವ ಹೆಸರಿನಲ್ಲಿ ಸ್ವಾತಂತ್ರ್ಯ ಪೂರ್ವದಿಂದಲೂ ಇದ್ದಂತಹ ಕಾರ್ಮಿಕ ಕಾನೂನುಗಳ ಸುಧಾರಣೆಯ ಹೆಸರಿನಲ್ಲಿ ಕೇಂದ್ರ ಸರ್ಕಾರ ಕಾರ್ಮಿಕರ ಪರವಾಗಿದ್ದ ಕಾನೂನುಗಳನ್ನು ಮಾಲೀಕರ ಪರವಾಗಿ ತಿದ್ದುಪಡಿ ಮಾಡುತ್ತಿದೆ.

ಈಗಾಗಲೇ ರಾಜಸ್ಥಾನ, ಮಧ್ಯಪ್ರದೇಶ, ಮಹಾರಾಷ್ಟ್ರ, ಹರಿಯಾಣ ಮತ್ತು ಆಂಧ್ರಪ್ರದೇಶಗಳು ತಮ್ಮ ರಾಜ್ಯಗಳಲ್ಲಿ ಇದನ್ನು ರಾಜ್ಯಸರಕಾರಗಳು ತಿದ್ದುಪಡಿ ಮಾಡಿವೆ.

ಕಾರ್ಖಾನೆಗಳ ಕಾಯ್ದೆ **(factories act)** ಯ ತಿದ್ದುಪಡಿಗಳನ್ನು ಸಂಸತ್ತಿನ ಮುಂದೆ ಇಡಲಾಗಿದೆ. ಇನ್ನೂ ಹೆಚ್ಚು ಅಪಾಯಕಾರಿಯಾದ ಸಣ್ಣ ಕಾರ್ಖಾನೆಗಳ ಕಾಯ್ದೆ Small Factories & other Establishments (Regulation of Employment and Condition of Services) Bill, 2014 ಯನ್ನು ಕೇಂದ್ರ ಸಂಪುಟ ಅಂತಿಮ ರೂಪಕ್ಕೆ ತರುತ್ತಿದೆ. 44 ಕಾರ್ಮಿಕ ಕಾನೂನುಗಳನ್ನು 5 ಕಾರ್ಮಿಕ ಸಂಹಿತೆ (Code) ಗಳನ್ನಾಗಿ ಬದಲಾಯಿಸಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿದ್ದು ಇದರಿಂದ ಕಾರ್ಮಿಕರಿಗೆ ಈಗಿರುವ ಎಲ್ಲಾ ಹಕ್ಕುಗಳು ಮತ್ತು ರಕ್ಷಣಾ ವ್ಯವಸ್ಥೆಯನ್ನು ತೊಡೆದು ಹಾಕಲಾಗುತ್ತಿದೆ.

ವೇತನಗಳ ಕುರಿತ ಶ್ರಮ ಸಂಹಿತೆ ಮಸೂದೆ (Labour Code on Wages Bill) ಮತ್ತು ಔದ್ಯಮಿಕ ಸಂಬಂಧಗಳ ಕುರಿತ ಶ್ರಮ ಸಂಹಿತೆ ಮಸೂದೆ (Labour Code on Industrial Relations Bill 2015) ಗಳು ಅಂತಿಮ ರೂಪ ಪಡೆದಿದ್ದು ಚಳಿಗಾಲದ ಅಧಿವೇಶನದ ಮುಂದೆ ಬರಲಿವೆ.

ಕೇಂದ್ರ ಕಾರ್ಮಿಕ ಸಚಿವರು 2015 ಮೇ 23 ರಂದು ಕೇಂದ್ರ ಕಾರ್ಮಿಕ ಸಂಘಟನೆಗಳೊಂದಿಗೆ ತ್ರಿಪಕ್ಷೀಯ ಸಭೆ ನಡೆಸಿ, ಸುದೀರ್ಘವಾಗಿ ಚರ್ಚಿಸಿ ಅವರು ನೀಡಿದ ಸಲಹೆಗಳನ್ನು ಸೂಕ್ತವಾಗಿ ಪರಿಗಣಿಸುವ ಮೂಲಕ ಯೋಜಿತ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಪತ್ರದಲ್ಲಿ ಬರೆದಿದ್ದರು. ಕೇಂದ್ರ ಕಾರ್ಮಿಕ ಸಂಘಟನೆಗಳು ಈ ಅಂಶವನ್ನು ತ್ರೀವ್ರವಾಗಿ ಅಲ್ಲಗಳೆದಿವೆ. ತ್ರಿಪಕ್ಷೀಯ ಸಭೆಯಲ್ಲಿ ಬಂದಂತಹ ಒಂದೇ ಒಂದು ಸಲಹೆಯನ್ನೂ ಕಾರ್ಮಿಕ ಮಂತ್ರಿಗಳು ಸ್ವೀಕರಿಸಿಲ್ಲ, ಅಷ್ಟೆ ಅಲ್ಲದೇ ಈಗಾಗಲೇ ತಿದ್ದುಪಡಿ ತಂದಿರುವ ರಾಜ್ಯ ಸರ್ಕಾರಗಳು ಕೂಡಾ ಕಾರ್ಮಿಕ ಸಂಘಟನೆಗಳ ಜೊತೆಗೆ ಚರ್ಚೆ ನಡೆಸಿಲ್ಲ. ಕೇಂದ್ರ ಕಾರ್ಮಿಕ ಸಂಘಟನೆಗಳು ಇವುಗಳ ಒಂದೊಂದೂ ಅಂಶಗಳ ಬಗ್ಗೆಯೂ ಕಾರ್ಮಿಕ ಸಚಿವಾಲಯಕ್ಕೆ ಮತ್ತು ಕಾರ್ಮಿಕ ಇಲಾಖೆ ಕುರಿತ ಸಂಸದೀಯ ಸ್ಥಾಯೀ ಸಮಿತಿಗೆ ತಮ್ಮ ವಿರೋಧಗಳನ್ನು ತಿಳಿಸಿವೆ. ಆದರೆ ಇದ್ಯಾವುದನ್ನೂ ಸರ್ಕಾರ ಪರಿಶೀಲನೆಗೆ ತೆಗೆದುಕೊಂಡಿಲ್ಲ.

ಇತ್ತೀಚೆಗೆ ಕಾರ್ಮಿಕ ಮಂತ್ರಿಗಳು ಅಷ್ಟೇ ಅಲ್ಲದೆ ಮೇನಕಾ ಗಾಂಧಿಯವರು ಕೂಡಾ ಅಂಗನವಾಡಿ ನೌಕರರಿಗೆ 2–4 ವರ್ಷಗಳ ಹಿಂದೆ ಜಾರಿ ಮಾಡಿದ ವಿಮಾ ಮತ್ತು ಹೆರಿಗೆ ಸೌಲಭ್ಯ, 2 ಸೀರೆಗಳು, ಮೇಲ್ವಿಚಾರಕಿಯರ ಹುದ್ದೆಗೆ ಮೀಸಲಾತಿ ತಮ್ಮ ಸರ್ಕಾರ ಕೊಟ್ಟಿದೆ ಎಂದು ಪತ್ರಿಕಾಗೋಷ್ಠಿ ನಡೆಸಿದ್ದರು. ಇಂತಹ ಹಸಿ ಸುಳ್ಳುಗಳನ್ನು ಹೇಳುವುದು ನರೇಂದ್ರ ಮೋದಿ ಸರ್ಕಾರದಲ್ಲಿ ಹೆಚ್ಚಾಗುತ್ತಿದೆ. ಕೇಂದ್ರ ಸಚಿವರುಗಳ ಜವಾಬ್ದಾರಿಯುತವಾಗಿ ನಡೆದು ಕೊಳ್ಳಬೇಕಿದೆ.

ಯಾವ ಯಾವ ಕಾನೂನಿಗೆ ಏನೇನು ಬದಲಾವಣೆ

1) ಕಾರ್ಖಾನೆ ಕಾಯ್ದೆ 1948 :

ಉತ್ಪಾದನೆಯಲ್ಲಿ ತೊಡಗಿರುವ ವಿದ್ಯುತ್ ಚಾಲಿತ 10 ಹಾಗೂ ವಿದ್ಯುತ್ ರಹಿತ 20 ಕಾರ್ಮಿಕರನ್ನು ಹೊಂದಿರುವ ಕಾರ್ಖಾನೆಗಳಿಗೆ 1948ರ ಕಾರ್ಖಾನೆ ಕಾಯ್ದೆ ಅನ್ವಯವಾಗುತಿತ್ತು. ಆದರೆ ಈಗ ವಿದ್ಯುತ್ ಸಹಿತ 20, ವಿದ್ಯುತ್ ರಹಿತ 40 ಕಾರ್ಮಿಕರಿರುವ ಕಾರ್ಖಾನೆಗಳಿಗೆ ಕಾಯ್ದೆಯನ್ನು ಅನ್ವಯಿಸಿದೆ.

ಕೈಗಾರಿಕಾ ವಿವಾದಗಳ ಕಾಯ್ದೆ, ಕನಿಷ್ಠ ವೇತನ ಕಾಯ್ದೆ, ಹೆರಿಗೆ ಸೌಲಭ್ಯ ಕಾಯ್ದೆ, ನೌಕರರ ಪರಿಹಾರ ಕಾಯ್ದೆ, ಭವಿಷ್ಯನಿಧಿ ಕಾಯ್ದೆ, ನೌಕರರ ರಾಜ್ಯ ವಿಮಾ ಕಾಯ್ದೆ, ವೇತನ ಪಾವತಿ ಕಾಯ್ದೆ, ಉಪಧನಪಾವತಿ ಕಾಯ್ದೆ, ಬೋನಸ್ ಪಾವತಿ ಕಾಯ್ದೆ, ಮುಂತಾದ ಕಾರ್ಮಿಕ ಕಾನೂನುಗಳಿಂದ 40 ಕ್ಕಿಂತ ಕಡಿಮೆ ಕಾರ್ಮಿಕರು ಇರುವ ಸಂಸ್ಥೆಗಳಿಗೆ ವಿನಾಯಿತಿ ನೀಡಲಾಗುತ್ತಿದೆ.

ನಮ್ಮ ರಾಜ್ಯ ಮತ್ತು ದೇಶದಲ್ಲಿ ಇರುವ ಲಕ್ಷಾಂತರ ಕಾರ್ಕಾನೆಗಳು ಸಣ್ಣ ಕಾರ್ಖಾನೆಗಳಾಗಿವೆ, ಈ ಕಾರ್ಖಾನೆಗಳಲ್ಲಿ ಕೋಟ್ಯಾಂತರ ಕಾರ್ಮಿಕರು ದೇಶದಾದ್ಯಂತ ದುಡಿಯುತ್ತಿದ್ದಾರೆ. ಇವರೆಲ್ಲರೂ ಈಗ ಎಲ್ಲಾ ಕಾರ್ಮಿಕ ಕಾನೂನುಗಳಿಂದ ವಂಚಿತರಾಗುತ್ತಾರೆ.

ಈ ಕಾರ್ಖಾನೆಗಳಿಗೆ ಈಗ ಕಾರ್ಮಿಕ ಇಲಾಖೆಯ ಪರವಾನಿಗಿ ಬೇಕಿಲ್ಲ, ದಾಖಲೆಗಳನ್ನು ಇಡುವ ಅಗತ್ಯವಿಲ್ಲ, ಸ್ವಚ್ಚತೆ, ತ್ಯಾಜ್ಯ ವಿಲೇವಾರಿ, ಹೊರ ಹಾಕುವ ಕಲ್ಮಷಗಳ ಕುರಿತಾಗಿರುವ ನಿಯಮಗಳನ್ನು ಪಾಲಿಸುವ ಅಗತ್ಯವಿಲ್ಲ, ಕುಡಿಯುವ ನೀರು, ಸುರಕ್ಷತಾ ಕ್ರಮಗಳನ್ನು, ಬೆಂಕಿ ಮತ್ತು ಅನಾಹುತ ಕುರಿತು ಯಾವುದೇ ವರದಿ ನೀಡಬೇಕಿಲ್ಲ. 8 ಗಂಟೆ ಕೆಲಸದ ನಿಯಮ ಗಾಳಿಗೆ ತೂರಿ, 50 ಗಂಟೆಗಳಿದ್ದ ಓ.ಟಿ ಯನ್ನು 100 ಗಂಟೆಗಳಿಗೆ ಹೆಚ್ಚಿಸಿ, ಓ.ಟಿ. ಗೆ ದುಪ್ಪಟ್ಟು ವೇತನ ನೀಡಬೇಕಿಲ್ಲ. ವಾರದ ಮತ್ತು ವೇತನ ಸಹಿತದ ವಾರ್ಷಿಕ ರಜೆ ನೀಡಬೇಕಿಲ್ಲ, ಹಾಜರಾತಿ ಪುಸ್ತಕವನ್ನು ನಿರ್ವಹಿಸಬೇಕಿಲ್ಲ.

ಈ ತಿದ್ದುಪಡಿಯಿಂದಾಗಿ ಕಾರ್ಮಿಕರನ್ನು ಗುಲಾಮರನ್ನಾಗಿಸುವ ಮತ್ತು ಭಾರತದ ಸಂವಿಧಾನವು ಖಾತ್ರಿ ಪಡಿಸಿದ ಮಾನವ ಹಕ್ಕುಗಳ ಒಟ್ಟಾರೆ ಉಲ್ಲಂಘನೆಯಾಗುತ್ತದೆ.

2) ಕೈಗಾರಿಕಾ ವಿವಾದಗಳ ಕಾಯ್ದೆ 1947 :

100 ಕ್ಕಿಂತ ಕಾರ್ಮಿಕರು ಕೆಲಸ ಮಾಡುವ ಉದ್ದಿಮೆಯಲ್ಲಿ ರಿಟ್ರೆಂಚ್‌ಮೆಂಟ್ ಮಾಡಲು ಸರ್ಕಾರದ ಪೂರ್ಣ ಅನುಮತಿ ಪಡೆಯಬೇಕಿತ್ತು ಈಗ ಅದರ ಸಂಖ್ಯೆಯನ್ನು 300ಕ್ಕೆ ಹೆಚ್ಚಿಸಲಾಗಿದೆ. ಅಂದರೆ 300ಕಿಂತ ಹೆಚ್ಚು ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವ ಉದ್ದಿಮೆಗಳಿಗೆ ಮಾತ್ರ ಇದು ಅನ್ವಯವಾಗುತ್ತದೆ. ಅದಕ್ಕಿಂತ ಕಡಿಮೆ ಸಂಖ್ಯೆಯ ಕಾರ್ಮಿಕರಿರುವ ಉದ್ದಿಮೆಗಳು ಈ ಕಾಯ್ದೆಯನ್ನು ಪಾಲಿಸಬೇಕಿಲ್ಲ!

> ಬಂಡವಾಳವು ಶ್ರಮಿಕರ/ಕಾರ್ಮಿಕರ ರಕ್ತವನ್ನು ಹೀರಿ ಬದುಕುತ್ತದೆ. ಹಾಗಿಲ್ಲದಿದ್ದರೆ ಅದು ನಿಷ್ಕ್ರೀಯವಾಗುತ್ತದೆ. ಪರೋಪಜೀವಿಯಾಗುತ್ತದೆ. ಅದು ರಕ್ತ ಪಿಪಾಸು, ಪರೋಪಜೀವಿ, ಅದು ವರ್ಧಿಸಿದಷ್ಟು ಹೆಚ್ಚೆಚ್ಚು ರಕ್ತವನ್ನು ಹೀರುತ್ತದೆ. ಶ್ರಮಜೀವಿಯ ದುಡಿಯುವ ಅವಧಿಯು ಬಂಡವಾಳಗಾರನು ಅವನಿಂದ ಖರೀದಿಸಿದ ಶ್ರಮಶಕ್ತಿಯನ್ನು ಉಪಭೋಗಿಸುವ ಅವಧಿಯೇ ಆಗಿದೆ.
>
> – ಕಾರ್ಲ್ ಮಾರ್ಕ್ಸ್

3)ಗುತ್ತಿಗೆ ಕಾರ್ಮಿಕ ಕಾಯ್ದೆ – 1970

ಒಂದು ಸಂಸ್ಥೆಯಲ್ಲಿ 20 ಕ್ಕಿಂತ ಹೆಚ್ಚು ಗುತ್ತಿಗೆ ಕಾರ್ಮಿಕರಿದ್ದರೆ ಅವರಿಗೆ ಸಮಾನ ವೇತನ, ರಜಾ ಸೌಲಭ್ಯ ಕೆಲಸದ ಅವಧಿ, ಹಾಜರಾತಿಪಟ್ಟಿ, ವೇತನ ದಾಖಲೆ, ವೇತನ ಚೀಟಿ, ಉದ್ಯೋಗ ಕಾರ್ಡ್, ಇಎಸ್ಐ, ಪಿಎಫ್‌ಗಳನ್ನು ಕೊಡಬೇಕಿತ್ತು. ಈಗ ಆ ಸಂಖ್ಯೆಯನ್ನು 50 ಕ್ಕೆ ಹೆಚ್ಚಿಸಲಾಗಿದೆ. 50 ಕ್ಕಿಂತ ಕಡಿಮೆ ಕಾರ್ಮಿಕರಿದ್ದರೆ ಈ ಯಾವ ಸವಲತ್ತುಗಳನ್ನು ಕೊಡಬೇಕಿಲ್ಲ.

4) ವೃತ್ತಿ ಸಂಘಗಳ ಕಾಯ್ದೆ :

ಕಾರ್ಮಿಕರು ತಮ್ಮ ಸಂಸ್ಥೆಗಳಲ್ಲಿ ಕಾರ್ಮಿಕ ಸಂಘವನ್ನು ರಚಿಸಬೇಕಿದ್ದರೆ ಒಟ್ಟು ಕಾರ್ಮಿಕರಲ್ಲಿ 10% ಸದಸ್ಯರಿದ್ದರೆ ಕಾರ್ಮಿಕ ಸಂಘವನ್ನು ರಚಿಸಿಕೊಳ್ಳಬಹುದಿತ್ತು. ಆದರೆ ಈಗ 30% ಇದ್ದ–ರೆ ಮಾತ್ರ ಕಾರ್ಮಿಕ ಸಂಘದ ರಚನೆ ಸಾಧ್ಯ. ಹಲವಾರು ಕಾರ್ಖಾನೆಗಳಲ್ಲಿ ಕಾರ್ಮಿಕ ಸಂಘವನ್ನು ರಚನೆ ಮಾಡಿಕೊಳ್ಳುವುದು ಕೆಲವು ಕಾರ್ಮಿಕರು ಮಾತ್ರವೇ ಸೇರಿ ರಚಿಸಿ ನಂತರ ಎಲ್ಲರ ಸದಸ್ಯತ್ವ ಪಡೆಯುತ್ತಾರೆ. ಏಕೆಂದರೆ ಮಾಲೀಕರು ಸಂಘ ರಚಿಸಲು ಮುಂದಾಗುವವರನ್ನು ಕೂಡಲೇ ಕೆಲಸದಿಂದ ತೆಗೆಯುವುದು ವಾಡಿಕೆಯಾಗಿದೆ. ಈ ತಿದ್ದುಪಡಿಯಿಂದಾಗಿ ಕಾರ್ಮಿಕರ ಮೂಲಭೂತ ಹಕ್ಕಾಗಿರುವ ಸಂಘವನ್ನು ರಚಿಸಿ ಕೊಳ್ಳುವ ಹಕ್ಕನ್ನು ನಿರಾಕರಿಸಿದಂತಾಗಿದೆ.

5) ಕಾರ್ಖಾನೆ ಕಾಯ್ದೆ – 2014

ಇದರ ತಿದ್ದುಪಡಿ ಮಸೂದೆಯಲ್ಲಿ ಮಹಿಳೆಯರು ರಾತ್ರಿ ಪಾಳಿಯ ಕೆಲಸವನ್ನು ಮಾಡಬೇಕೆಂದು ಕಡ್ಡಾಯಗೊಳಿಸಿದೆ. ಐಟಿ ಮತ್ತು ಬಿಟಿ ವಲಯಗಳಲ್ಲಿ, ದೂರವಾಣಿ ವಿನಿಮಯ ಕೇಂದ್ರಗಳಲ್ಲಿ ರಾತ್ರಿ ಪಾಳಿಯ ಅವಶ್ಯಕತೆ ಇದೆ. ಆದರೆ ಉತ್ಪಾದನಾ ಮತ್ತು ಇತರ ಎಲ್ಲಾ ವಲಯಗಳಲ್ಲಿಯೂ ಮಹಿಳೆಯರು ರಾತ್ರಿ ಪಾಳಿಯಲ್ಲಿ ದುಡಿಯಬೇಕು ಎಂಬುದಕ್ಕೆ ಯಾವುದೇ ರೀತಿಯ ವಿವರಣೆಗಳನ್ನು ಕೊಡದೆ ಕಡ್ಡಾಯಗೊಳಿಸಲಾಗಿದೆ. ಇದರಿಂದಾಗಿ ಮಹಿಳೆಯರ ಸುರಕ್ಷತೆ ಮತ್ತು ಆರೋಗ್ಯದ ಪ್ರಶ್ನೆಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಮಾತ್ರವಲ್ಲದೆ ಕಡಿಮೆ ಶಿಕ್ಷಣ ಅಥವಾ ಶಿಕ್ಷಣವಿಲ್ಲದಿರುವ ಮಹಿಳಾ ವಿಭಾಗವು ರಾತ್ರಿ ಪಾಳಿ ಕೆಲಸ ಮಾಡುವಂತಹ ದೈಹಿಕ ಮತ್ತು ಮಾನಸಿಕ ಸಾಮಾರ್ಥ್ಯಗಳನ್ನು ಅಷ್ಟು ಹೊಂದಿದವರಾಗಿರುವುದಿಲ್ಲ. ಹಾಗಾಗಿ

ಪುಟ 10 ಕ್ಕೆ

ಭೂಮಿ ಹೋರಾಟ: ಸಪ್ಟಂಬರ್ ತಿಂಗಳಲ್ಲಿ ರೈತರ ಬೃಹತ್ ಜೈಲ್ ಭರೋ ಚಳುವಳಿ



ವರದಿ: ಹೆಚ್.ಆರ್. ನವೀನ್‌ಕುಮಾರ್

ಜುಲೈ 1 ರಂದು ಬೆಂಗಳೂರಿನಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಏರ್ಪಡಿಸಿದ್ದ ಪ್ರತಿಭಟನಾ ಸಭೆ ರೈತರು ಸಾಗುವಳಿ ಮಾಡುತ್ತಿರುವ ಅರಣ್ಯ ಮತ್ತು ಕಂದಾಯ ಭೂಮಿಗಳಿಗೆ ಹಕ್ಕುಪತ್ರಗಳನ್ನು ನೀಡಲು ಅಗತ್ಯವಿರುವ ಭೂಕಂದಾಯ ಮತ್ತು ಅರಣ್ಯ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಬೇಕು, ಎಲ್ಲಾ ಬಡವರಿಗೂ ಮನೆ ನಿವೇಶನ ನೀಡಬೇಕು, ಉದ್ಯೋಗ ಖಾತ್ರಿಯ ಕೂಲಿಯನ್ನು 500 ರೂಗೆ ಹೆಚ್ಚಿಸಬೇಕು, ಡಾ.ಎಂ. ಎಸ್. ಸ್ವಾಮಿನಾಥನ್‌ರವರ ಕೃಷಿ ಆಯೋಗದ ಬೆಂಬಲ ಬೆಲೆ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ರೈತರ ಎಲ್ಲ ರೀತಿಯ ಸಾಲಗಳನ್ನು ಮನ್ನಾಮಾಡಿ ಅವರನ್ನು ಋಣಮುಕ್ತರನ್ನಾಗಿಸಬೇಕು ಎಂಬ ಬೇಡಿಕೆಗಳನ್ನು ಸರಕಾರದ ಮುಂದಿಟ್ಟಿದೆ.

ಇತ್ತೀಚೆಗೆ ರಾಜ್ಯ ಸರ್ಕಾರದ ಮಂತ್ರಿಗಳು ಈಗಿರುವ ಕಾನೂನಿನ ಅಡಿಯಲ್ಲಿಯೇ ಬಡವರಿಗೆ ಭೂಮಿಯನ್ನು ಹಂಚುತ್ತೇವೆಂದು ಹೇಳಿಕೆಗಳನ್ನು ನೀಡುತ್ತಿದ್ದು ಇದು ಸಾಧ್ಯವಿಲ್ಲವೆಂಬುದು ರೈತ ಸಂಘದ ಇದುವರೆಗಿನ ಅನುಭವ ಮತ್ತು ಕಾನೂನಿನ ತಿಳುವಳಿಕೆಯಿಂದ ಅರ್ಥವಾಗುವ ಸಂಗತಿ, ರಾಜ್ಯದ ಎಲ್ಲ ಬಡ ಸಾಗುವಳಿದಾರರಿಗೂ ಕಂದಾಯ ಮತ್ತು ಅರಣ್ಯ ಭೂಮಿ ಸಿಗಬೇಕೆಂದರೆ ಪ್ರಸ್ತುತ ಇರುವ ಕಾನೂನಿಗೆ ತಿದ್ದುಪಡಿ ತಂದರೆ ಮಾತ್ರ ಭೂಮಿಯನ್ನು ಹಂಚಲು ಸಾಧ್ಯ ಎಂದು ಅಭಿಪ್ರಾಯ ಪಟ್ಟ ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರು ಭೂಮಿ ಹೋರಾಟವನ್ನು ಮುಂದುವರೆಸಲಾಗುವುದು ಮತ್ತು ಈ ಹೋರಾಟವನ್ನು ತಾರ್ಕಿಕ ಹಂತಕ್ಕೆ ಮುಟ್ಟಿಸಲು ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಸಾವಿರಾರು ಸಂ–ಖ್ಯೆಯ ರೈತರಿಂದ ಜೈಲ್ ಭರೋ ಚಳವಳಿಯನ್ನು ನಡೆಸಲಾಗುವುದು ಎಂದು ಘೋಷಿಸಿದರು.

ದೇಶಾದ್ಯಂತ ಕೃಷಿ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದು ರೈತಾಪಿ ಜನಗಳ ಬದುಕಿನ ಮೇಲೆ ದಾಳಿಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇದನ್ನು ಪರಿಣಾಮಕಾರಿಯಾಗಿ ಎದುರಿಸುವ ಬಗೆಯನ್ನು ಚರ್ಚಿಸಲು ಬೆಂಗಳೂರಿನಲ್ಲಿ ಜುಲೈ 1 ರಿಂದ 3 ರವರೆಗೆ ದೇಶದ ಪ್ರಧಾನ ರೈತ ಸಂಘಟನೆಯಾದ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಕಿಸಾನ್ ಮಂಡಳಿಯ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಎಐಕೆಎಸ್‌ಗೆ ಸಂಯೋಜಿತವಾಗಿರುವ ಕರ್ನಾಟಕ ಪ್ರಾಂತ ರೈತ ಸಂಘ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳನ್ನು ವಿರೋಧಿಸಿ ಪ್ರತಿಭಟನಾ ರ್‍ಯಾಲಿಯನ್ನು ಸಂಘಟಿಸಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ರೈತರು ಮತ್ತು ದೇಶದ ವಿವಿಧ ರಾಜ್ಯಗಳಿಂದ ಅಖಿಲ ಭಾರತ ಕಿಸಾನ್ ಮಂಡಳಿ ಸಭೆಗೆ ಆಗಮಿಸಿದ್ದ ಮುಖಂಡರುಗಳು ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡರ ನೇತೃತ್ವದಲ್ಲಿ ಸಿಟಿ ರೈಲ್ವೇ ನಿಲ್ದಾಣದಿಂದ ಹೊರಟ ರೈತರ ಮೆರವಣಿಗೆ ಫ್ರೀಡಂ ಪಾರ್ಕ್ ಬಳಿಯ ಕಾಳಿಂಗ ರಸ್ತೆಯಲ್ಲಿ ಸಮಾವೇಶಗೊಂಡಿತು. ಮೆರವಣಿಗೆಯಲ್ಲಿ ಕಂಡುಬಂದ ಕೆಂಬಾವುಟಗಳ ಸಾಗರ ರೈತರ ಹೋರಾಟದ ದೃಢನಿರ್ಧಾರಕ್ಕೆ ಸಾಕ್ಷಿಯಂತೆ ಹಾರಾಡುತ್ತಿದ್ದವು.

ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಮತ್ತು ಮಾಜಿ ಸಂಸದ ಹನ್ನನ್ ಮುಲ್ಲರವರು ಕೇಂದ್ರದ ನರೇಂದ್ರ ಮೋದಿ ಸರ್ಕಾರ ರೈತ ಸಮುದಾಯಕ್ಕೆ ಮೋಸ ಮಾಡುತ್ತಿದ್ದು ನುಡಿದಂತೆ ನಡೆದುಕೊಳ್ಳುತ್ತಿಲ್ಲ ಎಂದು ದೂರಿದರು. ಮೋದಿಯವರು ಎರಡು ವರ್ಷಗಳ ಹಿಂದೆ ದೇಶದಾದ್ಯಂತ ನಡೆದ ಸುಮಾರು 400 ಕ್ಕೂ ಹೆಚ್ಚು ಚುನಾವಣಾ ಪ್ರಚಾರಸಭೆಗಳಲ್ಲಿ ದೇಶದ ಕೃಷಿಯನ್ನು ಬಿಕ್ಕಟ್ಟಿನಿಂದ ಹೊರತರಲು ಡಾ.ಸ್ವಾಮಿನಾಥನ್‌ರವರ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸುತ್ತೇನೆ ಎಂದು ಹೇಳಿದ್ದರು ಆದರೆ ಅಧಿಕಾರಕ್ಕೆ ಬಂದ ನಂತರ ಸ್ವಾಮಿನಾಥನ್ ವರದಿಯನ್ನು ಜಾರಿಮಾಡಲು ಸಾಧ್ಯವಿಲ್ಲವೆಂದು ಸುಪ್ರಿಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿ ದೇಶದ ರೈತ ಸಮುದಾಯಕ್ಕೆ ಮಹಾ ದ್ರೋಹ ಎಸಗಿದ್ದಾರೆ ಎಂದರು.

ಎಐಕೆಎಸ್‌ನ ಅಖಿಲ ಭಾರತ ಅಧ್ಯಕ್ಷರಾದ ಅಮ್ರರಾಂ, ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿಗಳಾದ ಯು.ಬಸವರಾಜ್, ಉಪಾಧ್ಯಕ್ಷರುಗಳಾದ ಜಿ.ವಿ.ಶೀರಾಮರೆಡ್ಡಿ, ಜಿ.ಸಿ.ಬಯ್ಯಾರೆಡ್ಡಿ ಮತ್ತು ವೆಂಕಟಾಚಲಯ್ಯ ಹಾಗೂ ಎಐಕೆಎಸ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ಸಂಘದ ಮುಖಂಡರುಗಳು ರಾಜ್ಯದಲ್ಲಿ ಈಗ ಹಮ್ಮಿಕೊಂಡಿರುವ ಭೂಮಿ ಹೋರಾಟದ ಬೇಡಿಕೆಗಳನ್ನು, ಅವುಗಳ ಹಿನ್ನೆಲೆಯನ್ನು ವಿವರಿಸಿದರು. (ಈ ಪುಟದಲ್ಲಿರುವ 'ಕರ್ನಾಟಕದಲ್ಲಿ ತೀವ್ರಗೊಳ್ಳುತ್ತಿರುವ ಭೂಮಿ ಹೋರಾಟ' ನೋಡಿ). ಸಭೆಗೆ ಬಂದಿದ್ದ ಬೆಂಗಳೂರು ಜಿಲ್ಲಾಧಿಕಾರಿ ಶ್ರೀ ಶಂಕರ್ ಅವರ ಮೂಲಕ ಭೂಮಿ ಕುರಿತಂತೆ ಮತ್ತು ಕರ್ನಾಟಕದ ರೈತರ ಇತರೆ ಬೇಡಿಕೆಗಳ ಮನವಿ ಪತ್ರವನ್ನು ಸರಕಾರಕ್ಕೆ ಸಲ್ಲಿಸಲಾಯಿತು.

ಕಸ್ತೂರಿ ರಂಗನ್ ಮತ್ತು ಮಾಧವ ಗಾಡ್ಗೀಳ ವರದಿಗಳ ಬಗ್ಗೆ ಆತಂಕ ಆವರಿಸಿದೆ. ಹಿಂದಿನ ಯು.ಪಿ.ಎ. ಸರಕಾರವಾಗಲಿ ಇಂದಿನ ಎನ್.ಡಿ.ಎ ಸರಕಾರವಾಗಲಿ ಅರಣ್ಯ ರಕ್ಷಣೆ ಪಶ್ಚಿಮ ಘಟ್ಟಗಳ ರಕ್ಷಣೆ ವನ್ಯ ಜೀವಿಗಳ ರಕ್ಷಣೆ ಹೆಸರು ಹೇಳಿಕೊಂಡು ರೈತರನ್ನು ಉಳಿಮೆದಾರರಿಗೆ ಆದಿವಾಸಿಗಳನ್ನು ಅರಣ್ಯದಿಂದ ಓಡಿಸಲು ಪ್ರಯತ್ನ ನಡೆಸುತ್ತಿದ್ದಾರೆ. ಈ ಎರಡು ವರದಿಗಳ ಜಾರಿ ಕೈಬಿಡಬೇಕು ಎಂದು ಪ್ರತಿಭಟನಾ ಸಭೆಯಲ್ಲಿ ಒತ್ತಾಯಿಸಲಾಯಿತು.



ಕರ್ನಾಟಕದಲ್ಲಿ ತೀವ್ರಗೊಳ್ಳುತ್ತಿರುವ ಭೂಮಿ ಹೋರಾಟ:

ಸರ್ಕಾರ ರಚಿಸಿದ 162 ಭೂ ಮಂಜುರಾತಿ ಸಮಿತಿಗೆ ಭೂ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿ ಮಂಜೂರಾತಿಗಾಗಿ ಕಾಯುತ್ತಿರುವ 4,59,936 ಉಳುಮೆದಾರರಿಗೆ, ಭೂ ಮಂಜೂರಾತಿ ಮಾಡಿ ಕೊಡುತ್ತೇವೆಂದು, ಸರಕಾರದ ಪರವಾಗಿ ಕಂದಾಯ ಸಚಿವರು, ಕಾನೂನು ಸಚಿವರು ಹಾಗೂ ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ವಿಧಾನ ಪರಿಷತ್‌ನಲ್ಲಿ ಹೇಳಿಕೆ ನೀಡುತ್ತಿದ್ದಾರೆ. ಆದರೆ ಇದು ಸಾಧ್ಯವಾಗುವಂತದ್ದಲ್ಲ.

ಏಕೆಂದರೆ, ಭೂಮಿಯ ಹಂಚಿಕೆಗೆ ಕಂದಾಯ ಕಾಯ್ದೆ 1964ಕ್ಕೆ ಕಲಂ 94, ಎ ಮತ್ತು ಬಿ ತಿದ್ದುಪಡಿ ತಂದು ಅರ್ಜಿ ನಮೂನೆ 50 ಮತ್ತು 53 ರಲ್ಲಿ 25,14,476 ಅರ್ಜಿಗಳು ಪಡೆಯಲಾಗಿದ್ದರೂ ಕಂದಾಯ ಕಾಯ್ದೆಯ ಕಲಂ 71 ರ ಅಡಿಯಲ್ಲಿ ಕೆಲವು ಬಲಪಂಥೀಯರು, ನೂರು ಜಾನವಾರುಗಳಿಗೆ 30 ಎಕರೆ ಜಮೀನು ಕಾಯ್ದಿಡಬೇಕೆಂಬ ಕಾನೂನಿನ ಅಂಶವನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ W.P.No. 14048 / 2015 (KLR Res) D.D. 22.09.2005 ಅರ್ಜಿ ಸಲ್ಲಿಸಿರುವುದರಿಂದ ಉಚ್ಚ ನ್ಯಾಯಾಲಯದ ತೀರ್ಪಿನಂತೆ, ಶಾಸಕರ ನೇತೃತ್ವದ ಭೂ ಮಂಜೂರಾತಿ ಸಮಿತಿಗಳು ಬಡ ಉಳುಮೆದಾರರ 13,16,177 ಅರ್ಜಿಗಳನ್ನು ತಿರಸ್ಕಾರ ಮಾಡಿವೆ.

ಉಳುಮೆದಾರರಿಗೆ ಭೂಮಿ ಮಂಜೂರು ಮಾಡಬಾರದು ಎಂಬ ತೀರ್ಪಿನ ಹಿನ್ನಲೆಯಲ್ಲಿ ಹಾಗೂ W.A.No. 1353/2006 (KLR Res) D.D. 18.11.2006 ಹೈಕೋರ್ಟಿನ ವಿಭಾಗೀಯ ಪೀಠ ಸರ್ಕಾರಿ ಭೂಮಿಯನ್ನು ಸರ್ವೆ ಮಾಡಬೇಕು ಹಾಗೂ ಜಾನುವಾರುಗಳನ್ನು ಎಣಿಕೆ ಮಾಡಬೇಕು. ಜಾನುವಾರಗಳಿಗೆ ಮೀಸಲಿಟ್ಟು, ಉಳಿದ ಭೂಮಿಯನ್ನು ಅರ್ಜಿದಾರರಿಗೆ ಮಂಜೂರು ಮಾಡಬೇಕು ಎನ್ನುವ ತೀರ್ಪಿನ ಹಿನ್ನಲೆಯಲ್ಲಿ, ಉಳುಮೆದಾರರಿಗೆ ಭೂಮಿ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ.

ಬಡರೈತರಿಗೆ ಭೂಗಳ್ಳರೆಂಬ ಹಣೆಪಟ್ಟಿ!

ಶ್ರೀ ಎಸ್.ಆರ್. ಹಿರೇಮಠ ಸಮಾಜ ಪರಿವರ್ತನಾ ಸಂಘಟನೆ ಹಾಗೂ ರಾಜ್ಯ ಸಭಾ ಸದಸ್ಯರಾದ ರಾಜೀವ ಚಂದ್ರಶೇಖರ ನೇತೃತ್ವದ ನಮ್ಮ ಬೆಂಗಳೂರು ಪೌಂಡೇಷನ್ ಹೈಕೋರ್ಟಿಗೆ ಅರ್ಜಿ ಸಲ್ಲಿಸಿ, ಭೂ ಕಬಳಿಕೆ ಮಾಡಿದ ಸರಕಾರಿ ಭೂಮಿಯನ್ನು ವಶಪಡಿಸಿಕೊಳ್ಳಬೇಕೆಂದು ಕೋರಿದ್ದು ಈ ಹಿನ್ನಲೆಯಲ್ಲಿ ಹೈಕೋರ್ಟ್ ಭೂ ಕಬಳಿಕೆದಾರರಿಗೆ ಸರಕಾರ ರಕ್ಷಣೆ ನೀಡುತ್ತಿದೆ–ಯೆಂದು, ತರಾಟೆಗೆ ತೆಗೆದುಕೊಂಡಿದೆ. ಅಧಿಕಾರಿಗಳು ತರಾತುರಿಯಲ್ಲಿ ಮುಖ್ಯಮಂತ್ರಿಗಳಿಂದ ಒಪ್ಪಿಗೆ ಪಡೆದು ಹೈಕೋರ್ಟ್‌ಗೆ ಹೊಟ್ಟೆಪಾಡಿಗಾಗಿ ಉಳುಮೆ ಮಾಡುವ ಉಳುಮೆದಾರರನ್ನು ಎತ್ತಂಗಡಿ ಮಾಡುತ್ತೇವೆಯೆಂದು ಅಫಿಡವಿಟ್ ಸಲ್ಲಿಸಿರುವದರಿಂದ ರಾಜ್ಯದ ಉಳುಮೆದಾರರಿಗೆ ತೊಂದರೆಯಾಗಿತ್ತು. ಉಳುಮೆದಾರರು ಕರ್ನಾಟಕ ಪ್ರಾಂತ ರೈತ ಸಂಘದ ಮಾರ್ಗದರ್ಶನದಲ್ಲಿ ಉಳುಮೆದಾರರ ಹೊಟ್ಟೆ ಪಾಡಿನ ಕಷ್ಟವನ್ನು ತೋಡಿಕೊಂಡು ಹೈಕೋರ್ಟಿಗೆ ಲಕ್ಷಾಂತರ

ಪುಟ 10 ಕ್ಕೆ

ತಪ್ಪೋಲೆ : ಕಳೆದ ಸಂಚಿಕೆಯಲ್ಲಿ ಪುಟ 8 ಹಾಗೂ 9 ರಲ್ಲಿ ಪ್ರಕಟವಾದ ವಿಶೇಷ ಲೇಖನಗಳಲ್ಲಿ ತಾಂತ್ರಿಕ ಕಾರಣಗಳಿಂದ ತಪ್ಪುಗಳಾಗಿವೆ. ಪುಟ 8 ರ 4ನೇ ಕಾಲಂ ಕೊನೆಯ ಮೂರು ಪ್ಯಾರಾಗಳು "**ಇದನ್ನು ಎಲ್ಲೂ ಕೂಡ... ರೈತರು ಹಾಕುವಂತಹ**" ಇದು ಪುಟ 9 ರಲ್ಲಿ ಪ್ರಕಟವಾದ ಜಿ.ವಿ. ಶ್ರೀರಾಮರೆಡ್ಡಿಯವರ ಮುಂದುವರಿದ ಭಾಗವಾಗಿದೆ. ಪು 8 ರಲ್ಲಿ ಪ್ರಕಟವಾದ ಯು. ಬಸವರಾಜರವರ ಲೇಖನ ನಾಲ್ಕನೇ ಕಾಲಂ ಮೊದಲನೇ ಪ್ಯಾರ ಆದ ನಂತರ (ಲೂಟಿಕೋರರದರವಾಗದೇ?!) ನಂತರ ಪುಟ 11 ರಲ್ಲಿ ಸರಿಯಾಗಿ ಮುಂದುವರೆದಿದೆ. –ಸಂ.







ಕರ್ನಾಟಕದಲ್ಲಿ ತೀವ್ರಗೊಳ್ಳುತ್ತಿರುವ ಭೂಮಿ ಹೋರಾಟ..... ಪುಟ 9 ರಿಂದ

ಅರ್ಜಿಗಳನ್ನು ಉಳಿಮೆದಾರರಿಂದ ಸಲ್ಲಿಸಿರುವದು, ಹೈಕೋರ್ಟ್ ಬಡವರ ಪರವಾಗಿ ನಿಲುಮೆ ತಾಳಲು ಸಾಧ್ಯವಾಗಿದೆ ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ. ಸರ್ಕಾರ ಕೂಡ ಅಫಿಡವಿಟ್ ತಿದ್ದುಪಡಿ ಮಾಡಿ ಪುನಃ ಸಲ್ಲಿಸಿತು.

ಬೆಂಗಳೂರು ನಗರ ಸುತ್ತಲೂ 18 ಕಿ.ಮೀಗಳ, ಮೈಸೂರು, ಹುಬ್ಬಳ್ಳಿ ಧಾರವಾಡ, ಕಲಬುರ್ಗಿ ಮತ್ತಿತರ ನಗರಗಳಿಗೆ 10.ಕಿ.ಮಿ. ಪುರಸಭೆಗಳಿಗೆ 5 ಕಿ.ಮಿ. ವ್ಯಾಪ್ತಿಯಲ್ಲಿ ಉಳುಮೆ ಮಾಡಿದ ಬಡವರಿಗೆ ಭೂಮಿ ಮಂಜೂರು ಮಾಡಬಾರದೆಂದು, ಕಂದಾಯ ಕಾಯ್ದೆ ಕಲಂ 94 ಎ ಮತ್ತು ಬಿ. ತಿದ್ದುಪಡಿ ಮಾಡುವಾಗ ಅಂಗೀಕರಿಸಿರುವದು ಲಕ್ಷಾಂತರ ಬಡವರಿಗೆ ಅನ್ಯಾಯವಾಗಿದೆ. ಪಟ್ಟಣ, ನಗರಗಳ ಸುತ್ತಮುತ್ತಲೂ ಉಳುಮೆ ಮಾಡಿದ ಬಡವರಿಗೆ ಒಂದು ಎಕರೆ ಭೂಮಿ ಮಂಜೂರು ಮಾಡಲು ಸಾಧ್ಯವಾಗುತ್ತಿಲ್ಲವೆಂದು ತಾವೂ ಮನಗಂಡು ಕಂದಾಯ ಕಾಯ್ದೆಯ ಕಲಂ 94 ಎ ಮತ್ತು ಬಿ ಗೆ ತಿದ್ದುಪಡಿ ತಂದು ಪಟ್ಟಣ, ನಗರಗಳ ವ್ಯಾಪ್ತಿ ಕೈಬಿಡಬೇಕೆಂದು ಹಾಗೂ ನಗರ ಪಟ್ಟಣ ಸುತ್ತಲೂ ಇರುವ ಉಳುಮೆದಾರರಿಗೆ ಭೂ ಮಂಜೂರಾತಿಗೆ ದಾರಿ ಸುಗಮ ಮಾಡಬೇಕಾಗಿದೆ.

ಹಾಗೇನೇ ರಾಜ್ಯದಲ್ಲಿ ಬಡವರು ಉಳುಮೆ ಮಾಡಿದ ಲಕ್ಷಾಂತರ ಅರ್ಜಿಗಳು ತಿರಸ್ಕಾರಗೊಂಡಿದ್ದು, ಸರಕಾರವು ದಿ॥ ದೇವರಾಜ ಅರಸುರವರ ಜನ್ಮ ಶತಮಾನೋತ್ಸವ ಆಚರಣೆ ಮಾಡುತ್ತಿರುವ ಸಂದರ್ಭದಲ್ಲಿ "ಉಳುವವನೆ ಭೂಮಿ ಒಡೆಯ" ಎಂದು ಮತ್ತೊಮ್ಮೆ ಸಾಬೀತು ಪಡಿಸಲು ಸರಕಾರಿ ಜಮೀನನ್ನು ಬಡ ದಲಿತ ಉಳುಮೆದಾರರಿಗೆ ಮಂಜೂರಾತಿ ನೀಡಲು ಅವಕಾಶವಾಗುವಂತೆ, ಕಂದಾಯ ಕಾಯ್ದೆಗೆ ಮತ್ತೊಮ್ಮೆ ತಿದ್ದುಪಡಿ ಮಾಡಿ ಹೊಸದಾಗಿ ಅರ್ಜಿಗಳನ್ನು ಕರೆಯಬೇಕು.

ಇತ್ತೀಚೆಗೆ ಭೂಕಬಳಿಕೆದಾರರನ್ನು ಶಿಕ್ಷಿಸಲು ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011 (2014ರ ಕರ್ನಾಟಕ ಅಧಿನಿಯಮ ಸಂ–ಖ್ಯೆ 38 2014ರ ಅಕ್ಟೋಬರ್ 20 ರಂದು ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿದೆ. ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011ರ ಕಲಂ 2 (ಈ) ಭೂಕಬಳಿಕೆದಾರ ಮತ್ತು (ಎಫ್) ಭೂಕಬಳಿಕೆ ಹಾಗೂ (ಜಿ) ಸ್ಥಳೀಯ ಪ್ರಾಧಿಕಾರ ಈ ಪರಿಭಾಷೆಯು ಬಡ ಉಳುಮೆದಾರರು ಕೂಡ ಭೂಕಬಳಿಕೆದಾರರು ಎಂದು ಅರ್ಥೈಸಲಾಗಿದೆ. ರಾಜ್ಯದ ಸುಮಾರು 20 ಲಕ್ಷ ಬಡ ಉಳುಮೆದಾರರು ಕೂಡ ಭೂಗಳ್ಳರಾಗುತ್ತಾರೆ. ಆದ್ದರಿಂದ ಕರ್ನಾಟಕ ಭೂಕಬಳಿಕೆ ನಿಷೇಧ ಅಧಿನಿಯಮ 2011ರ ಕಲಂ 2(ಈ) ಭೂಕಬಳಿಕೆದಾರ, (ಎಫ್) ಭೂಕಬಳಿಕೆ ಮತ್ತು (ಜಿ) ಸ್ಥಳೀಯ ಪ್ರಾಧಿಕಾರ ಪರಿಭಾಷೆಯಲ್ಲಿ ತಿದ್ದುಪಡಿ ಮಾಡಿ ಬಡ ಉಳುಮೆದಾರರನ್ನೂ ರಕ್ಷಿಸಬೇಕು.

ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕು

ಸ್ವಾತಂತ್ರ್ಯ ಪೂರ್ವದಿಂದಲು ಕರ್ನಾಟಕದಲ್ಲಿ ಲಕ್ಷಾಂತರ ಆದಿವಾಸಿ ಮತ್ತು ಇತರೆ ಬಡ ಕುಟುಂಬಗಳು ಅರಣ್ಯ ಜಮೀನಿನಲ್ಲಿ ಸಾಗುವಳಿ ಮಾಡುತಿದ್ದಾರೆ. ಉಳುಮೆ ಮಾಡುತ್ತಿರುವ ಆದಿವಾಸಿಗಳು ಹಾಗೂ ಬಡಕುಟುಂಬಗಳಿಗೆ ಭೂಮಿಯ ಹಕ್ಕು ಸಿಗಬೇಕೆಂದು ಅಖಿಲ ಭಾರತ ಕಿಸಾನ ಸಭಾ, ಎಡ ಪಕ್ಷಗಳು, ರೈತ ಸಂಘಟನೆಗಳ ಹೋರಾಟದ ಫಲವಾಗಿ ಅಂದಿನ ಯು.ಪಿ.ಎ ಸರಕಾರವು ಅರಣ್ಯ ಹಕ್ಕು ಮಾನ್ಯತೆ ಕಾಯ್ದೆ 2006 ರಲ್ಲಿ ಜಾರಿಗೆ ತಂದಿತು. ಕಳೆದ ಹತ್ತು ವರ್ಷಗಳಲ್ಲಿ ಕಾಯ್ದೆ ಜಾರಿಗೆ ಹಿಂದಿನ ಬಿ.ಜೆ.ಪಿ ಸರಕಾರ ಪ್ರಯತ್ನ ನಡೆಸಲಿಲ್ಲ. ಈಗಿನ ಕಾಂಗ್ರೆಸ್ ಸರಕಾರವು ಶಿವಮೊಗ್ಗ ಉತ್ತರ ಕನ್ನಡ ಹಾಗೂ ಮತ್ತಿತರ ಜಿಲ್ಲೆಗಳಲ್ಲಿ ಅರ್ಜಿಗಳನ್ನು ಪಡೆದರೂ ಕೂಡ ಗ್ರಾಮ ಸಭೆಯಲ್ಲಿ ಆಧಿವಾಸಿ ಅಲ್ಲದ ಜನರಿಗೆ 75 ವರ್ಷಗಳ ದಾಖಲೆ ಕೊಡಲು ಸಾಧ್ಯವಾಗುತ್ತಿಲ್ಲ. ಹಿರಿಯರ ಸಮ್ಮುಖದಲ್ಲಿ ಮಾಡಿದ ಪಂಚನಾಮ ಹೊರತು ಪಡಿಸಿ ಬೇರೇನು ದಾಖಲೆ ಕೊಡಲು ಸಾಧ್ಯವಿಲ್ಲ. ಭೂಮಿ ಕೊಡಿಸುತ್ತೇನೆಂದು ಹೇಳಿದ ಕಾಂಗ್ರೆಸ್ ಸರಕಾರ ಹಿರಿಯರ ಸಮ್ಮುಖದಲ್ಲಿ ಮಾಡಿದ ಪಂಚನಾಮ ಮೇಲೆ ಭೂಮಿ ಕೋಡಿಸಬೇಕು. ಇಲ್ಲವೇ ಅರಣ್ಯ ಹಕ್ಕು ಮಾನ್ಯತೆ ಕಾಯ್ದೆ ಕಾನೂನು ತಿದ್ದುಪಡೆಗೆ ಕೇಂದ್ರ ಸರಕಾರದ ಮೇಲೆ ಒತ್ತಾಯ ತರಬೇಕು. ಕೇಂದ್ರದಲ್ಲಿ ಬಿಜೆಪಿ ಸರಕಾರ ಇರುವುದರಿಂದ ಕಾನೂನಿಗೆ ತಿದ್ದುಪಡಿ ಮಾಡಿಸುವುದು ಬಿಜೆಪಿಯವರ ನೈತಿಕ ಕರ್ತವ್ಯವಾಗಿದೆ.

ವರದಿ: ಹೆಚ್.ಆರ್.ಎನ್.

ತಾಂತ್ರಿಕ ವಿದ್ಯಾ ಸಂಸ್ಥೆಗಳ ಬೋಧಕೇತರ ನೌಕರರ ಸಂಘದ ವಾರ್ಷಿಕ ಸಭೆ

ಮೆಡಿಕಲ್ – ಇಂಜಿನಿಯರಿಂಗ್ ಕಾಲೇಜು ಬೋಧಕೇತರ ನೌಕರರಿಗೆ ಅನ್ಯಾಯ – ಸೈಯದ್ ಮುಜೀಬ್



ವೃತ್ತಿಪರ ಕೋರ್ಸ್‌ಗಳಿಗೆ ಲಕ್ಷಗಟ್ಟಲೆ, ಕೋಟಿಗಟ್ಟಲೆ ಶುಲ್ಕ ಪಡೆಯುತ್ತಿರುವ ಖಾಸಗಿ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜ್‌ಗಳು ಅಲ್ಲಿ ದುಡಿಯುತ್ತಿರುವ ಬೋ ಧ–ಕೇತರ ನೌಕರರಿಗೆ ತೀವ್ರ ಅನ್ಯಾಯ ಮಾಡುತ್ತಿವೆ. ಬಹುತೇಕ ಮೆಡಿಕಲ್ ಇಂಜಿನಿಂ੍ರಿಂಗ್ ಕಾಲೇಜುಗಳ ನಡೆಸುವ ರಾಜಕಾರಣಿಗಳು ಪ್ರಭಾವಿಗಳಾಗಿದ್ದು ಶಾಸನಾತ್ಮಕ ಕೂಲಿ ಹಾಗು ಬಡ್ತಿಗಳನ್ನು ನೀಡದೆ ವಂಚಿಸುತ್ತಿದ್ದಾರೆ ಎಂದು ಸಿಐಟಿಯುನ ತುಮಕೂರು ಜಿಲ್ಲಾ ಅಧ್ಯಕ್ಷರಾದ ಸೈಯದ್ ಮುಜೀಬ್ ಅವರು ಆರೋಪಿಸಿದ್ದಾರೆ.

ಅವರು ಜೂನ್ 2ರಂದು ತುಮಕೂರಿನಲ್ಲಿ ಶ್ರೀ ಸ್ವಾಮಿ ವಿವೇಕಾನಂದ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ನಡೆದ ಜಿಲ್ಲಾ ತಾಂತ್ರಿಕ ವಿದ್ಯಾ ಸಂಸ್ಥೆಗಳ ಬೋಧಕೇತರ ನೌಕರರ ಸಂಘ(ರಿ) ಸಿಐಟಿಯುನ 29ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಸಮಾಜವು ದುಡಿಯುವ ಜನರ ಬಗ್ಗೆ ತಾಳಿರುವ ಧೋರಣೆಯು ಸರಿಯಾದುದ್ದಲ್ಲ, ಸಮಾಜ ಹಾಗೂ ಸರ್ಕಾರಗಳು ನಿವೃತ್ತರ ಕುರಿತು ಸಹ ಅಸಡ್ಡೆಯ ಭಾವನೆ ತೋರುತ್ತಿರುವುದು ಆರೋಗ್ಯಕರವಲ್ಲ ಎಂದು ಎಲ್ಲರೂ ತಮ್ಮ ಸ್ವಂತ ಲಾಭಕ್ಕೆ ಮಾತ್ರ ಯೋಚಿಸುವ ಹಾಗೂ ಅವಕಾಶವಾದಿ ಅಂಶಗಳು ಸಮಾಜಕ್ಕೆ ಮಾರಕ ಎಂದು ಸೈಯದ್ ಮುಜೀಬ್ ಹೇಳಿದರು.

ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಟಿ.ಜಿ.ಶಿವಲಿಂಗಯ್ಯನವರು ಸಂಘದ ವಾರ್ಷಿಕ ವರದಿಯನ್ನು ಮಂಡಿಸಿದರು. ಇಂಜಿನಿಯರಿಂಗ್ ಕಾಲೇಜು–ಐಟಿಯ ಹಾಗು ಮೆಡಿಕಲ್ ಕಾಲೇಜುಗಳಲ್ಲಿ ಹಲವು ವರ್ಷಗಳಿಂದ ಕನ್ಸಾಲಿಡೇಟೆಡ್ ಹೆಸರಿನಲ್ಲಿ ಆಲ್ಪ ವೇತನ ನೀಡಿ ಶೋಷಿಸುತ್ತಿರುವ ಬಗ್ಗೆ ಗಮನ ಹರಿಸಿ ಸರ್ಕಾರ ನೌಕರರಿಗೆ ನ್ಯಾಯ ಒದಗಿಸಲು ಕ್ರಮವಹಿಸುವಂತೆ ಒತ್ತಾಯಿಸಲಾಯಿತು. ಸಂಘದ ಲೆಕ್ಕೆ ಪತ್ರವನ್ನು ಖಜಾಂಚಿ ಚಂದ್ರಶೇಖರಯ್ಯ ಮಂಡಿಸಿದರು. ಸಭೆ ವರದಿ ಹಾಗೂ ಲೆಕ್ಕೆ ಪತ್ರವನ್ನು ಸಭೆ ಅನುಮೊದಿಸಿತು. ಅರಂಭದಲ್ಲಿ ಸಹಕಾರ್ಯದರ್ಶಿ ಎನ್.ನಾಗರಾಜಯ್ಯ ಸ್ವಾಗತಿಸಿ ಹೆಚ್.ಕೆ.ಗೋವಿಂದಯ್ಯ ವಂದನಾರ್ಪಣೆ ಮಾಡಿದರು. ಸಭೆಯಲ್ಲಿ ನಿವೃತ್ತಿ ಹೊಂದಿರುವ ನೌಕರರಾದ ಜಯಕುಮಾರ್ ಹಾಗು ನಾಗರಾಜು ಅವರನ್ನು ಅಭಿನಂದಿಸಲಾಯಿತು.

ನೂತನ ಪದಾಧಿಕಾರಿಗಳನ್ನು ಚುನಾಯಿಸಲಾಯಿತು. ಅಧ್ಯಕ್ಷರಾಗಿ ಮಿನಾಕ್ಷಿ ಸುಂದರಂ, ಉಪಾಧ್ಯಕ್ಷರಾಗಿ ಸೈಯದ್ ಮುಜೀಬ್, ಪ್ರಧಾನ ಕಾರ್ಯದರ್ಶಿಯಾಗಿ ಟಿ.ಜಿ.ಶಿವಲಿಂಗಯ್ಯ, ಸಹ ಕಾರ್ಯದರ್ಶಿಯಾಗಿ ಎನ್.ನಾಗರಾಜಯ್ಯ ಹಾಗೂ ಖಜಾಂಚಿಯಾಗಿ ಚಂದ್ರಶೇಖರಯ್ಯ ಆಯ್ಕೆಯಾಗಿದ್ದಾರೆ. ●

PEÃ½ZÀÄY

ವಿನಾಯಕ ಬಾಳಿಗಾ ಕೊಲೆ ಪ್ರಕರಣದ
ಮುಖ್ಯ ಆರೋಪಿ ನರೇಶ್ ಶೆಣ್ಯೆ ಕೊನೆಗೂ
ಜೈಲು ಸೇರಿದ್ದಾನೆ......
ನರೇಶ್ ಶೆಣ್ಯೆ ಶೆಣ್ಯೆ ತಲೆ ಮರೆಸಿಕೊಂಡಾಗ
ಕೆಲವರು ಆತ ಪಾಕಿಸ್ತಾನಕ್ಕೆ
ಹೋಗಿದ್ದರೂ ಹೋಗಿರಬಹುದು ಎಂದು
ಮಾತಾಡಿಕೊಂಡರು. ಇದಕ್ಕೆ ಕಾರಣವೂ
ಇತ್ತು. ಈತ ಮೋದಿ ಗೆದ್ದರೆ
ದೇಶ ತೊರೆಯುವುದಾಗಿ ಹೇಳಿದ್ದ
ಅನಂತಮೂರ್ತಿಯವರಿಗೆ ಪಾಕಿಸ್ತಾನದ
ಟಿಕೆಟ್ ಮಾಡಿಸಿದ್ದ. ಅದಕ್ಕೂ ಮುನ್ನ
ಟಿಕೇಟಿಗೆ ದೇಶಪ್ರೇಮಿಗಳೆಲ್ಲರೂ ದೇಣಿಗೆ
ನೀಡಿ ಅಂತ ಕರೆಕೊಟ್ಟು ಅದನ್ನೊಂದು
ಅಭಿಯಾನದಂತೆ ಬಿಂಬಿಸಿದ್ದ ಮತ್ತು
ತಾನು 12 ರೂ. ಮನಿ ಆರ್ಡರ್ ಮಾಡುವ
ಮೂಲಕ ಅದಕ್ಕೆ ಚಾಲನೆ ನೀಡಿದ್ದ......
ಈಗ ನರೇಶ್ ಶೆಣ್ಯೆ ಜೈಲು ಸೇರಿದ್ದಾನೆ.
ಅನಂತಮೂರ್ತಿಗಳಿಗೆ ಮಾಡಿಸಿದ್ದ
ಪಾಕಿಸ್ತಾನದ ಟಿಕೇಟು ಬಹುಶಃ ಹಾಗೇ
ಉಳಿದಿರಬೇಕು

–ಮಾಧ್ಯಮ,ನೆಟ್.ಕಾಂ, ಜುಲೈ 3

ಗುಲಾಮಗಿರಿ ಹೇರುವ ತಿದ್ದುಪಡಿಗಳು ಬೇಡವೇ ಬೇಡ..... ಪುಟ 8 ರಿಂದ

ಇದು ಮಹಿಳಾ ಕಾರ್ಮಿಕರ ಮೇಲಿನ ದಮನಕಾರಿ ತಿದ್ದುಪಡಿಯಾಗಿದೆ.

6) ಕನಿಷ್ಠ ವೇತನ ಕಾಯ್ದೆ 1948

ಶೆಡ್ಯೂಲ್‌ನಲ್ಲಿ ಬರುವ ಕೈಗಾರಿಕೆಗಳಿಗೆ ಈ ಕಾಯ್ದೆ ಕನಿಷ್ಠ ವೇತನ ನಿಗದಿಪಡಿಸುತ್ತದೆ. ಆದರೆ ಈ ಕಾಯ್ದೆಯಲ್ಲಿ ರಾಜ್ಯ ಸರ್ಕಾರಗಳು ಯಾವುದೇ ಉದ್ಯೋಗಗಳನ್ನು ಶೆಡ್ಯೂಲ್‌ನಿಂದ ತೆಗೆದುಹಾಕಲು ಅಥವಾ ಇಚ್ಛಾನುಸಾರ ಬದಲಾಯಿಸಲು ಅವಕಾಶ ನೀಡಿದೆ. ಮತ್ತು ಇದರಿಂದಾಗಿ ಸಾಂವಿಧಾನಿಕ ಕನಿಷ್ಠ ವೇತನದ ಹಕ್ಕಿಗೆ ತಿದ್ದುಪಡಿಗಳು ಅಡ್ಡಿ ಬರುತ್ತವೆ.

ಈ ಮಸೂದೆ ಹೆಚ್ಚುವರಿ ಕೆಲಸದ ಅವಧಿಯ ಮಿತಿಯನ್ನು ಹಾಲೀ ತ್ರೈಮಾಸಿಕ 50 ಗಂಟೆಗಳಿಂದ 100 ಮತ್ತು 125 ಗಂಟೆಗಳಿಗೆ ಹೆಚ್ಚಿಸಲು ಸೂಚಿಸಿದೆ.

ಈ ಹೊಸ ಪ್ರಸ್ತಾವನೆ ಕಾರ್ಮಿಕರು ಬಿಡವು ಇಲ್ಲದಂತೆ ದುಡಿಯಬೇಕು ಎಂದು ಬಯಸುತ್ತದೆ. ಕಾರ್ಮಿಕರ ಅರೋಗ್ಯವನ್ನು ಇದು ಸಂಪೂರ್ಣವಾಗಿ ನಿರ್ಲಕ್ಷಿಸಿದೆ, ಇದರಿಂದ ಗೈರುಹಾಜರಾತಿ ಹೆಚ್ಚಬಹುದು. ಅಲ್ಲದೆ ಹೆಚ್ಚು ಕಾರ್ಮಿಕರನ್ನು ನೇಮಕಾತಿ ಮಾಡದಿರಲು ಇದು ಅವಕಾಶ ಮಾಡಿಕೊಟ್ಟಿದೆ. ಓ.ಟಿ. ವೇತನದ ಬಾಕಿಯನ್ನು ವಸೂಲಿ ಮಾಡಲು ಯಾವುದೇ ಕ್ರಮಗಳನ್ನು ಸೂಚಿಸಿಲ್ಲ.

7) ಅಪ್ರೆಂಟೀಸ್ ಕಾಯ್ದೆ 1961 :

ಒಟ್ಟು ಕಾರ್ಮಿಕರಲ್ಲಿ 30% ಕಾರ್ಮಿಕರನ್ನು ಅಪ್ರೆಂಟೀಸ್‌ಗಳಾಗಿ ದುಡಿಸಬಹುದು ಮತ್ತು ಅವರನ್ನು ದುಡಿಸಲು ಇದ್ದ ವಿಧಾನಗಳಲ್ಲಿ ಮಾಲೀಕರಿಗೆ ಶಿಕ್ಷೆ ಕೊಡುವ ವಿಧಾನಗಳನ್ನು ಬದಲಿಸಿ 500 ರೂ ದಂಡ ಮಾತ್ರ ಎಂದು ಸೇರಿಸಲಾಗಿದೆ. ಇದರಿಂದಾಗಿ ಮಾಲೀಕರು ಅಪ್ರೆಂಟೀಸ್ ಎಂಬ ಹೆಸರಿನಲ್ಲಿ ಕಡಿಮೆ ಸವಲತ್ತುಗಳಲ್ಲಿ ಎಷ್ಟು ಬೇಕಾದರೂ ದುಡಿಸಲು ಅವಕಾಶವಾಗಿದೆ.

1988ರ ಮೋಟಾರು ವಾಹನ ಕಾಯ್ದೆಯ ಬದಲಿಗೆ "ರಸ್ತೆ ಸಾರಿಗೆ & ಸುರಕ್ಷತಾ ಮಸೂದೆ 2015" ನ್ನು ತರಲು ಸರ್ಕಾರ ಹೊರಟಿದೆ. ಈ ಕ್ಷೇತ್ರದಲ್ಲಿ ಪ್ರತ್ಯಕ್ಷವಾಗಿ ಮತ್ತು ಅಪ್ರತ್ಯಕ್ಷ ವಾಗಿ 17 ಕೋಟಿ ಕಾರ್ಮಿಕರು ದುಡಿಯುತ್ತಿದ್ದಾರೆ. ಅಮೆರಿಕಾದಲ್ಲಿ ಹೆಚ್ಚು ಅಪಘಾತಗಳನ್ನು ತಡೆಯಲು ಅವರು ತಂದಿರುವ ಕಾಯ್ದೆಯಂತೆ ನಮ್ಮ ಕೇಂದ್ರ ಸರ್ಕಾರವು ಈ ಕಾಯ್ದೆಯನ್ನು ಅಮೆರಿಕಾ ಬಯ ಕೆಯಂತೆ ತರುತ್ತಿದೆ. ಈ ಕಾಯ್ದೆಯಲ್ಲಿ ರಾಜ್ಯ ಸರ್ಕಾರದ ಅಧಿಕಾರವನ್ನು ಮೊಟಕುಗೊಳಿಸಿ, ರಾಜ್ಯ ಸರ್ಕಾರಗಳ ಸಾರಿಗೆ ವ್ಯವಸ್ಥೆಯನ್ನು ಮೊಟಕುಗೊಳಿಸಿ ಕಾರ್ಪೊರೇಟ್ ಕಂಪನಿಗಳಿಗೆ ಕೊಡಲಾಗುತ್ತದೆ. ಇದುವರೆಗೂ ರಾಜ್ಯ ಸರ್ಕಾರಗಳಟ್ವಹಿಸುತ್ತಿರುವ ಸರ್ಟಿಫಿಕೇಟ್, ಡ್ರೈವಿಂಗ್ ಲೈಸೆನ್ಸ್ ಮತ್ತು ಮೋಟಾರು ವಾಹನಗಳಲ್ಲಿ ನೊಂದಾವಣಿ ಮತ್ತು ವಿಮೆಗಳನ್ನು ಇದರ ಪ್ರಕಾರ ಕಾರ್ಪೊರೇಟ್ ಸಂಸ್ಥೆಗಳು ನಿರ್ವಹಿಸುತ್ತವೆ.


ಈ ಮಸೂದೆ ಕಾನೂನು ಆದರೆ ಆಟೋ, ಟ್ಯಾಕ್ಸಿ, ಬಸ್, ಗೂಡ್ಸ್ ಇತ್ಯಾದಿ ವಾಹನಗಳನ್ನು ಓಡಿಸುವ ಚಾಲಕರು 1100 ರೂ. ನಿಂದ 3 ಲಕ್ಷದವರೆಗೂ ದಂಡ ಅಥವಾ ಜೈಲುವಾಸ ಅಥವ ಎರಡನ್ನೂ ಅನುಭವಿಸಬೇಕಾಗುತ್ತದೆ.

ಹೆಸರಲ್ಲಿ 'ಸುರಕ್ಷತೆ' ಇದ್ದರೂ ರಸ್ತೆಯಲ್ಲಿ ಓಡಾಡುವ ಪ್ರಯಾಣಿಕರ ಸುರಕ್ಷತೆಯ ಬಗ್ಗೆ ಏನನ್ನೂ ಹೇಳದ ಈ ಮಸೂದೆಯನ್ನು ಸಂಪೂರ್ಣವಾಗಿ ವಿದೇಶಿ ಕಂಪನಿಗಳಿಗೆ ಅನುವು ಮಾಡಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

ಒಟ್ಟಿನಲ್ಲಿ ಗಮನಿಸಬೇಕಾದ ಮುಖ್ಯ ಅಂಶ ಎಂದರೆ, ಪ್ರಸ್ತಾವಿತ ಬದಲಾವಣೆಗಳೇನಾದರೂ ಕಾರ್ಮಿಕ ಕಾನೂನುಗಳಲ್ಲಿ ಸೇರಿದರೆ, ಸಂಘಟಿತ ವಲಯದಲ್ಲೇ ಬಹುಪಾಲು ಕಾರ್ಮಿಕರು ತಮ್ಮ ಹಕ್ಕುಗಳನ್ನು, ಎಲ್ಲ ಕಾರ್ಮಿಕ ಕಾನೂನುಗಳ ರಕ್ಷಣೆಯನ್ನು ಕಳಕೊಳ್ಳುತ್ತಾರೆ. ಇತರ ಬೇಡಿಕೆಗಳನ್ನು ಕಾರ್ಮಿಕರಿಗೆ ಅನುಕೂಲ ವಾಗುವಂತೆ ಪರಿಶೀಲಿಸಿದರೂ ಅವೆಲ್ಲ ಅರ್ಥಹೀನವಾಗುತ್ತವೆ. ಆದ್ದರಿಂದ ಮೂಲ ಕಾರ್ಮಿಕ ಕಾನೂನುಗಳನ್ನು ಯಾವುದೇ ವಿನಾಯಿತಿಗಳಿಲ್ಲದೆ ಕಟ್ಟುನಿಟ್ಟಾಗಿ ಪಾಲಿಸಬೇಕು. ಕಾರ್ಮಿಕ ಕಾನೂನುಗಳ ಉಲ್ಲಂಘನೆಗೆ ಶಿಕ್ಷಾರ್ಹ ಕ್ರಮಗಳನ್ನು ಬಲಗೊಳಿಸಬೇಕು ಎಂದು ದೇಶದ ಕಾರ್ಮಿಕ ವರ್ಗ ಒತ್ತಾಯಿಸುತ್ತಿದೆ. ■

ಕ್ಯಾಸ್ಟ್ರೋ ಕಥೆ 17

ಸಿಯೆರ್ರಾ ಮೇಸ್ತ್ರಾ'ಕ್ಕೆ ಪಯಣ



ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ಕ್ರಾಂತಿಕಾರಿಗಳು ಡಿಸೆಂಬರ್ 18 ರಂದು ಸಿಯೆರ್ರಾ ಮೇಸ್ತ್ರಾ'ದ ಬೆಟ್ಟಗಳ ತೀರಾ ಒಳಗೆ ಒಂದುಗೂಡಿದರು. ಮೆಕ್ಸಿಕೋ ಬಿಟ್ಟಾಗ ಇದ್ದ 82 ಜನ ಕ್ರಾಂತಿಕಾರಿಗಳ ಪೈಕಿ ಈಗ ಕೇವಲ 12 ಜನ ಮಾತ್ರ ಉಳಿದಿದ್ದರು. ಅವರೆಂದರೆ:– ಫಿಡೆಲ್ ಮತ್ತು ರಾಲ್ ಸಹೋದರರು, ಚೆ ಗೆವಾರ, ಕ್ಯಾಮಿಲೊ ಸಿಯೆನ್‌ಫ್ಯೂಗೊಸ್, ಜುವಾನ್ ಅಲ್ಮೇಡಾ, ಎಫಿಜೆನಿಯೊ ಅಮೇಜೀರಾಸ್, ಸಿರೊ ರೆಡೊಂಡೊ, ಜೂಲಿಯೊ ಡಯಾಝ್, ಕ್ಯಾಲಿಕ್ಸ್ಟೋ ಗಾರ್ಸಿಯಾ, ಲೂಯಿ ಕ್ರೆಸ್ಪೊ, ಜೊಸ್ ಪಾನ್ಸ್, ಮತ್ತು ಯೂನಿವರ್ಸೋ ಸ್ಯಾಂಚೆಝ್.
ಇಂತಹ ದುಃಸ್ಥಿತಿಯಲ್ಲೂ, ಸಂಗಾತಿಗಳ ಅಪಾರ ಸಾವುಗಳ ನಡುವಿನಲ್ಲೂ ಫಿಡೆಲ್ ಹೇಳಿದ್ದು, "ನಾವು ಯುದ್ಧ ಗೆಲ್ಲುತ್ತೇವೆ, ನಾವು ಹೋರಾಡಲು ಈಗ ಪ್ರಾರಂಭಿಸಿದ್ದೇವೆ" (We will win the war, we are just begining to fight) ಎಂದು ಇಂತಹ ದೃಢ ನಿಶ್ಚಯದೊಂದಿಗೆ 17 ಗನ್‌ಗಳನ್ನು ಹೊಂದಿಸಿದರು ಯುದ್ಧ ಮುಂದುವರಿಸಿದರು.



ನಿಗದಿತ ಅವಧಿಗಿಂತ ಎರಡು ದಿನಗಳು ತಡವಾಗಿ ಗ್ರಾನ್ಮಾ ಚಲಿಸುತ್ತಿದ್ದ ಕಾರಣದಿಂದ ಮತ್ತು ಹೇಗೋ ಮಾಹಿತಿಯನ್ನು ಪಡೆದುಕೊಂಡ ಬಟಿಸ್ಟಾನ ಸೈನಿಕ ಹೆಲಿಕಾಪ್ಟರೊಂದು ದೋಣಿಯನ್ನು ಗುರುತಿಸಿತು. ಇದರಿಂದ ತಪ್ಪಿಸಿಕೊಳ್ಳಲು ಕ್ರಾಂತಿಕಾರಿಗಳು ಬೇ–ರೊಂದು ಸ್ಥಳದಲ್ಲಿ ತಮ್ಮ ದೋಣಿಯನ್ನು ಲಂಗರು ಹಾಕಬೇಕಾಯಿತು. ಇವರು ನಿಗದಿಪಡಿಸಿಕೊಂಡಿದ್ದ ಸ್ಥಳದಿಂದ 15 ಮೈಲಿ ದೂರದ 'ಲಾಸ್ ಕೊಲೊರಡಾಸ್' ಎಂಬಲ್ಲಿ ಇವರು ದೋಣಿಯನ್ನು ದಡಕ್ಕೆ ತಂದರು. ಇದರಿಂದ ಇವರ ಇಡೀ ಯೋಜನೆಯ ಸಾಮರ್ಥ್ಯದಲ್ಲಿ ಪೂರ್ತಿ ವ್ಯತ್ಯಾಸವಾಯಿತು. ಈಗ ತಲುಪಿದ ಸ್ಥಳ ವಾಸ್ತವವಾಗಿ ಒಂದು ಜೌಗು ಪ್ರದೇಶವಾಗಿತ್ತು. ಲಂಗರು ಹಾಕುವ ಯಾವ ಲಕ್ಷಣವೂ ಆ ಜಾಗಕ್ಕಿರಲಿಲ್ಲ. ಜೇಡಿ ಹಾಗೂ ಬುರುದೆ ಮಣ್ಣಿನ ಕಾರಣದಿಂದ ದೋಣಿಯಲ್ಲಿದ್ದ ಸಾಕಷ್ಟು ಆಯುಧಗಳನ್ನು ಕೆಳಗಿಳಿಸಲೂ ಆಗಲಿಲ್ಲ. ಇವರಿಗಾಗಿ ಬೇರೆಡೆ ಕಾಯುತ್ತಿದ್ದ ಜೀಪುಗಳು, ಟ್ರಕ್‌ಗಳು, ಆಹಾರ, ಇಂಧನ ಇವರಿಗೆ ಲಭ್ಯವಾಗಲಿಲ್ಲ. ಮತ್ತೊಮ್ಮೆ ಸಂಕಷ್ಟಕ್ಕೆ ಸಿಕ್ಕಿಕೊಂಡರು.

ಬೇರೆ ದಾರಿಯಿಲ್ಲದೆ ಅಲ್ಲಿಳಿದ ಕ್ರಾಂತಿಕಾರಿಗಳು ಒಳ ಪ್ರದೇಶವನ್ನು ಹೊಕ್ಕರು. ಅಲ್ಲಿಂದ ಸಿಯೆರ್ರಾ ಮೇಸ್ತ್ರಾದ ಕಡೆ ನಡೆಯಲು ಶುರು ಮಾಡಿದರು. ಆ ಮೊದಲ ದಿನ ಅವರಿಗೆ ತಿನ್ನಲು ಏನೂ ಸಿಗಲಿಲ್ಲ. ಡಿಸೆಂಬರ್ 5 ರವರೆಗೆ ಹೀಗೇ ದಾರಿಯಲ್ಲಿ ರೈತರು ಕೊಟ್ಟ ಊಟ, ತಿಂಡಿ, ನೀರು ಬಳಸಿ ನಡೆಯುತ್ತಾ ನಡೆಯುತ್ತಾ ದಾರಿ ತಪ್ಪಿದರು. ದಾರಿ ತೋರಿಸಲು ಇವರಿಗೆ ಸಹಾಯ ಮಾಡುತ್ತಿದ್ದ ಗೈಡ್ ಒಬ್ಬ ಇವರಿಗೆ ದ್ರೋಹ ಬಗೆದ. ಬಟಿಸ್ಟಾ ಸೈನಿಕರ ದಾಳಿಯಿಂದ ತಪ್ಪಿಸಿಕೊಳ್ಳಲು ಅವರ ಕಣ್ಣಿಗೆ ಕಾಣದ ಹಾಗೆ ಬಚ್ಚಿಟ್ಟುಕೊಳ್ಳಲು ಆರಂಭಿಸಿದರು. ಹಾಗೆ ಮಾಡುತ್ತಾ ರಾತ್ರಿ ಕಳೆಯಲು ಸಿದ್ಧತೆ ಮಾಡಿಕೊಂಡರು. ಅವರು ಉಳಿದುಕೊಳ್ಳಲು ಹುಡುಕಿಕೊಂಡ ಸ್ಥಳಗಳು ಬಟಿಸ್ಟಾ'ನ ಮಿಲಿಟರಿ ಪೋಸ್ಟ್‌ಗೆ ಕೇವಲ 100 ಗಜಗಳ ದೂರದಲ್ಲಿದ್ದವು ಎಂಬುದೇ ಇವರ (ಅತಿಯಾದ) ವಿಶ್ವಾಸಕ್ಕೆ ಸಾಕ್ಷಿಯಾಗಿತ್ತು.

ಅಂದು ಸಂಜೆ ಸುಮಾರು 4 ಗಂಟೆಗೆ ಶತ್ರು ಸೈನ್ಯದ ಸಿಂಗಲ್ ಇಂಜಿನ್‌ನ ಸಣ್ಣ ವಿಮಾನಗಳು ಇವರು ಅವಿತು ಕುಳಿತಿದ್ದ ಮರಗಳ ಮೇಲೆ ಹಾರಾಡಲು ಶುರು ಮಾಡಿದವು. ಒಂದು ಗಂಟೆ ಬಳಿಕ ಆ ವಿಮಾನಗಳು ಗುಂಡಿನ ದಾಳಿಯನ್ನು ನಡೆಸಿದವು. ಅದೇ ಸಂದರ್ಭಕ್ಕೆ ಬಟಿಸ್ಟಾ'ನ ನೆಲ ಸೈನಿಕರು ಗುಂಡಿನ ದಾಳಿ ಶುರುಮಾಡಿದರು. ಆ ದಾಳಿಯ ಅಬ್ಬರಕ್ಕೆ ಕೆಲವು ಕ್ಷಣಗಳು ಫಿಡೆಲ್ ಮತ್ತು ಗೆಳೆಯರು ಆತಂಕಕ್ಕೆ ಒಳಗಾದರು. ಆತಂಕದಿಂದ ಚೆಲ್ಲಾಪಿಲ್ಲಿಯಾಗತೊಡಗಿದರು. ಫಿಡೆಲ್ ಜೊತೆ ಇಬ್ಬರು ಸಂಗಾತಿಗಳಿದ್ದರು. ರಾತ್ರಿಯಾಗುವುದನ್ನೇ ಕಾಯುತ್ತಿದ್ದ ಇವರು ಅಲ್ಲಿ ಸೊಂಪಾಗಿ ಬೆಳೆದು ನಿಂತಿದ್ದ ಕಬ್ಬಿನ ಗದ್ದೆಗಳ ಒಳಹೊಕ್ಕು ಅಲ್ಲಿದ್ದ ಬೃಹತ್ ಮರಗಳ ಪೊಟರೆಗಳ ಕಡೆಗೆ ಚಲಿಸಿ ಅಲ್ಲೇ ಮಲಗಲು ತೀರ್ಮಾನಿಸಿದರು.

ಆದರೆ ಇಡೀ ಪ್ರದೇಶ ಬಟಿಸ್ಟಾ'ನ ಸೈನಿಕರಿಂದ ತುಂಬಿ ಹೋಗಿತ್ತು. ಫಿಡೆಲ್ ಮತ್ತು ಕ್ರಾಂತಿಕಾರಿಗಳು ಪೂರ್ವಕ್ಕೆ ಹೋಗಬೇಕಿತ್ತು ಮತ್ತು ಚದುರಿಹೋಗಿದ್ದ ಒಡನಾಡಿಗಳನ್ನು ಸಾಧ್ಯವಾದಷ್ಟು ಒಟ್ಟುಗೂಡಿಸಬೇಕಿತ್ತು. ಆದರೆ 3 ಸಾವಿರ ಅಡಿಗಳ ಮೇಲೆ ಬಟಿಸ್ಟಾ'ನ ಹೆಲಿಕಾಪ್ಟರ್‌ಗಳು ಶತ್ರುವನ್ನು ಹುಡುಕಿ ಹಾರಾಡುತ್ತಿದ್ದವು. ಅಪಾಯ ನೆತ್ತಿಯ ಮೇಲಿತ್ತು. ಫಿಡೆಲ್ ಮತ್ತು ಗೆಳೆಯರು ನಿಂತಿ–ದ್ದ ಒಂದು ಭಾಗಕ್ಕೆ ಮುಳ್ಳುಗಿಡಗಳ ಪೊದೆಯಿತ್ತು. ಇನ್ನೊಂದು ಬದಿಗೆ ಅರ್ಧಬೆಳೆದಿದ್ದ ಕಬ್ಬಿನ ತೋಟವಿತ್ತು. ಮುಳ್ಳಿನ ಪೊದೆಗಳಲ್ಲಿ ಅಡಗಿ ಕೂರುವ ಯೋಚನೆ ಬಂತಾದರೂ ಕೊನೆಗೆ ತೀರ್ಮಾನ ಬದಲಿಸಿ ಕಬ್ಬಿನ ಗದ್ದೆಗೆ ಚಂಗನೆ ಹಾರಿ ಕಬ್ಬಿನ ಹಸಿರು ಗರಿಗಳ ಅಡಿಯಲ್ಲಿ ಅಡಗಿ ಕುಳಿತರು. ಅದೇ ಸಮಯಕ್ಕೆ ಹೆಲಿಕಾಪ್ಟರ್‌ಗಳು ಮುಳ್ಳಿನ ಪೊದೆಗಳ ಮೇಲೆ ಒಂದೇ ಸಮನೆ ಗುಂಡಿನ ಮಳೆಗರೆದವು. ಫಿಡೆಲ್ ತೀರ್ಮಾನ ಸರಿಯಾಗಿತ್ತು. .50 ಕ್ಯಾಲಿಬರ್ ಮೆಷಿನ್‌ಗನ್‌ನ ಗುಂಡಿನ ಮಳೆಯನ್ನು ತಪ್ಪಿಸಿಕೊಳ್ಳಲು ಅಲ್ಲಿಂದ ಸ್ವಲ್ಪ ಎತ್ತರಕ್ಕೆ ಬೆಳೆದಿದ್ದ ಕಬ್ಬಿನ ಗದ್ದೆಗೆ ತೆವಳುತ್ತಾ ಸಾಗಿ ಕಬ್ಬು ಗರಿಗಳ ಕೆಳಗೆ ಸದ್ದಿಲ್ಲದೆ ಸ್ಥಬ್ಧವಾಗಿ ಕುಳಿತುಬಿಟ್ಟರು.

"ನನ್ನ ಜೀವನದ ಅತ್ಯಂತ ನಾಟಕೀಯ ಸಂದರ್ಭವನ್ನು ನಾನು ಅನುಭವಿಸಿದೆ" ಎಂಬುದು ಫಿಡೆಲ್‌ನ ಅಭಿಪ್ರಾಯ. ತಾವಿದ್ದ ಸ್ಥಳದ ಸುತ್ತಲೂ ನಡೆಯುತ್ತಿದ್ದ ವಾಯುದಾಳಿ ಮತ್ತು ನೆಲದಾಳಿಯ ಗುಂಡುಗಳು ಯಾವುದೇ ಸಂದರ್ಭದಲ್ಲೂ ತಮ್ಮ ಎದೆಯೊಕ್ಕಬಹುದು. ಅಥವಾ ತಾವು ನಡೆಸಿದ ದಾಳಿಯ ಪರಿಣಾಮ ಏನಾಗಿದೆ ಎಂದು ಪರಿಶೀಲಿಸಲು ಬಟಿಸ್ಟಾ'ನ ಸೈನಿಕರು ಬರಬಹುದು. ಹೃದಯವನ್ನು ಕಲ್ಲು ಬಂಡೆ ಮಾಡಿ ಕೂತ ಭಯಾನಕ ಆತಂಕದ ಕ್ಷಣಗಳವು. ವಿಚಿತ್ರವೆಂದರೆ ಆ ಸಂದರ್ಭದಲ್ಲಿ ಫಿಡೆಲ್‌ಗೆ ಭಯಂಕರವಾದ ಮಂಪರು. ನಿದ್ದೆ ಎಳೆಯುತ್ತಿತ್ತು. ದೀರ್ಘ ಕಾಲದ ಓಡಾಟದ ಒತ್ತಡ, ಆಯಾಸ ಅವರನ್ನು ನಿದ್ದೆಗೆ ನೂಕಿತು.

ಫಿಡೆಲ್‌ನ ಆತ್ಮವಿಶ್ವಾಸ ಮತ್ತು ಶೌರ್ಯ ಎಣೆಯಿಲ್ಲದ್ದು. ಬಟಿಸ್ಟಾ'ನ ಸೈನಿಕರು ಹುಡುಕಾಡುತ್ತಾ ಯಾರಾದರೂ ಇತ್ತ ಬರಬಹುದೆಂದು ಎಣಿಸಿದ್ದರು. ಫಿಡೆಲ್ ಬಳಿಯಿದ್ದ ರೈಫಲ್‌ಗೆ ಎರಡು ಟ್ರಿಗರ್‌ಗಳಿದ್ದವು. ಒಂದನ್ನು ಎಳೆದು ಹಿಡಿದು ಮತ್ತೊಂದನ್ನು ಸುಮ್ಮನೆ ಮುಟ್ಟಿದರೂ ಸಾಕು ಅದು ನಿಖರವಾಗಿ ದಾಳಿ ಮಾಡುತ್ತಿತ್ತು. ನಿದ್ರೆಯನ್ನು ತಡೆಯಲಾಗದೆ ಮಲಗುವುದಕ್ಕೆ ಮುಂಚೆ ತಮ್ಮ ರೈಫಲ್‌ನ ಹಿಂಬದಿಯನ್ನು ಎರಡು ತೊಡೆಗಳ ನಡುವೆ ಸಿಕ್ಕಿಸಿಕೊಂಡರು. ರೈಫಲ್ ಬ್ಯಾರಲ್ ತುದಿಯನ್ನು ತಮ್ಮ ಗಡ್ಡದ ತುದಿಗೆ ಇಟ್ಟುಕೊಂಡರು. ತಾವು ಮಲಗಿದ್ದಾಗ ಶತ್ರುಗಳ ಬಂದು ತಮ್ಮನ್ನು ಬಂಧಿಸಬಹುದು ಅಥವಾ ಸಾಯಿಸಬಹುದು ಎಂಬುದು ಫಿಡೆಲ್ ಅಭಿಪ್ರಾಯವಾಗಿತ್ತು. ರೈಫಲ್‌ನ್ನು ಹೀಗಿಟ್ಟುಕೊಂಡಾಗ ಒಂದೋ ತಕ್ಷಣದಲ್ಲೇ ಶತ್ರುವನ್ನು ಕೊಲ್ಲಬಹುದು ಅಥವಾ ತನ್ನನ್ನೇ ಕೊಂದುಕೊಳ್ಳಬಹುದು ಎಂಬ ಕಾರಣಕ್ಕೆ ಈ ರೀತಿ ಮಾಡಿದ್ದರು. ಆದರೆ ಹಗಲು ಕಳೆದು ರಾತ್ರಿಯಾಗುತ್ತಾ ಗಾಳಿ ಬೀಸುತ್ತಾ ತಂಪಾಯಿತು. ಅದೃಷ್ಟವಶಾತ್ ಶತ್ರುವಿನ ದಾಳಿಯಲ್ಲಿ ಇವರು ಬಲಿಯಾಗಲಿಲ್ಲ. ಆದರೆ ಈ ಪ್ರಕ್ರಿಯೆಯಲ್ಲಿ ಗ್ರಾನ್ಮಾದಲ್ಲಿ ಬಂದಿಳಿದಿದ್ದ ಸಾಕಷ್ಟು ಕ್ರಾಂತಿಕಾರಿಗಳು ಸಾವನ್ನಪ್ಪಿದರು.


ಆದರೆ ಫಿಡೆಲ್‌ದು ಸೋಲುವ ಅಥವಾ ಸೋಲೊಪ್ಪಿಕೊಳ್ಳುವ ಜಾಯಮಾನವಲ್ಲ. ಆ ಸ್ಥಳದಿಂದ ಹೊರಟು ಚದುರಿಹೋಗಿದ್ದ ಉಳಿದ ಕ್ರಾಂತಿಕಾರಿಗಳನ್ನು ಪ ು ನ ರ್ ಸ ಂ ಘ ಟಿ ಸ ಲ ು ತೀರ್ಮಾನಿಸಿದರು. ಹನ್ನೊಂದು ದಿನಗಳ ನಂತರ ಉಳಿದ, ಗಾಯಗೊಂಡ, ಹಸಿವಿನಿಂದ ಬಳಲುತ್ತಿದ್ದ, ಚದುರಿದ ಕ್ರಾಂತಿಕಾರಿಗಳು ಡಿಸೆಂಬರ್ 18 ರಂದು ಸಿಯೆರ್ರಾ ಮೇಸ್ತ್ರಾ'ದ ಬೆಟ್ಟಗಳ ತೀರಾ ಒಳಗೆ ಒಂದುಗೂಡಿದರು. ಮೆಕ್ಸಿಕೋ ಬಿಟ್ಟಾಗ ಇದ್ದ 82 ಜನ ಕ್ರಾಂತಿಕಾರಿಗಳ ಪೈಕಿ ಈಗ ಕೇವಲ 12 ಜನ ಮಾತ್ರ ಉಳಿದಿದ್ದರು. ಅವರೆಂದರೆ:– ಫಿಡೆಲ್ ಮತ್ತು ರಾಲ್ ಸಹೋದರರು, ಚೆ ಗೆವಾರ, ಕ್ಯಾಮಿಲೊ ಸಿಯೆನ್‌ಫ್ಯೂಗೊಸ್, ಜುವಾನ್ ಅಲ್ಮೇಡಾ, ಎಫಿಜೆನಿಯೊ ಅಮೇಜೀರಾಸ್, ಸಿರೊ ರೆಡೊಂಡೊ, ಜೂಲಿಯೊ ಡಯಾಝ್, ಕ್ಯಾಲಿಕ್ಸ್ಟೋ ಗಾರ್ಸಿಯಾ, ಲೂಯಿ ಕ್ರೆಸ್ಪೊ, ಜೊಸ್ ಪಾನ್ಸ್, ಮತ್ತು ಯೂನಿವರ್ಸೋ ಸ್ಯಾಂಚೆಝ್.

ಇಂತಹ ದುಃಸ್ಥಿತಿಯಲ್ಲೂ, ಸಂಗಾತಿಗಳ ಅಪಾರ ಸಾವುಗಳ ನಡುವಿನಲ್ಲೂ ಫಿಡೆಲ್ ಹೇಳಿದ್ದು, "ನಾವು ಯುದ್ಧ ಗೆಲ್ಲುತ್ತೇವೆ, ನಾವು ಹೋರಾಡಲು ಈಗ ಪ್ರಾರಂಭಿಸಿದ್ದೇವೆ" (We will win the war, we are just begining to fight) ಎಂದು. ಫಿಡೆಲ್ ಈ ಪರಿಸ್ಥಿತಿಯನ್ನು ವಿವರಿಸುವಾಗ ಇಂತಹುದೇ ಸ್ಥಿತಿಯಲ್ಲಿ ಕಾರ್ಲೋಸ್ ಮ್ಯಾನ್ಯುಯಲ್ ಡಿ ಸೆಸ್‌ಪಿಡೆಸ್ ಹೇಳಿದ "ನಾವಿನ್ನೂ 12 ಜನರಿದ್ದೇವೆ! ಕ್ಯೂಬಾ ಸ್ವಾತಂತ್ರ್ಯ ಜಯಿಸಲು ಇಷ್ಟು ಸಾಕು" ಎಂಬ ಹೇಳಿಕೆಯನ್ನು ನೆನಪಿಸುತ್ತಾರೆ. ರಾಲ್ ಮತ್ತು ಫಿಡೆಲ್ ಇಬ್ಬರೂ ಇದೇ ಅಭಿಪ್ರಾಯವನ್ನು ಹೊಂದಿದ್ದರು – ಸಿಯೆರ್ರಾಗೆ ಹೋಗುವುದು ಮತ್ತು ಯುದ್ಧವನ್ನು ಮುಂದುವರಿಸುವುದು. ಇಂತಹ ದೃಢ ನಿಶ್ಚಯದೊಂದಿಗೆ 17 ಗನ್‌ಗಳನ್ನು ಹೊಂದಿಸಿದರು ಯುದ್ಧ ಮುಂದುವರಿಸಿದರು.

ಈ ವಾರ ಚರಿತ್ರೆಯಲ್ಲಿ

9 ಜುಲೈ 1951

ಮೊದಲ ಪಂಚವಾರ್ಷಿಕ ಯೋಜನೆಯ ಪ್ರಕಟಣೆ



ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯರು ರೂಪಿಸಿಕೊಂಡ ಒಂದು ಪ್ರಮುಖ ನೀತಿಯೆಂದರೆ ದೇಶದ ಆರ್ಥಿಕ ಬೆಳವಣಿಗೆಯ ದಾರಿ ಯೋಜನಾಬದ್ಧವಾಗಿರಬೇಕು; ಆಗ ಟಾಟಾ, ಬಿರ್ಲಾ ಮುಂತಾದ ಪ್ರಮುಖ ಬಂಡವಾಳಶಾಹಿಗಳು ಕೂಡ ಅದನ್ನೇ ಬಯಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಸ್ವತಂತ್ರ ಭಾರತ ಯೋಜನಾಬದ್ಧ ಆರ್ಥಿಕ ಬೆಳವಣಿಗೆಯ ದಾರಿಯನ್ನು ಅಂಗೀಕರಿಸಿತು. ಜುಲೈ 9, 1951 ರಂದು ದೇಶದ ಮೊದಲ ಪಂಚವಾರ್ಷಿಕ ಯೋಜನೆ ಪ್ರಕಟವಾಯಿತು. ಇದನ್ನು ತಯಾರಿಸಿದ ಯೋಜನಾ ಆಯೋಗ ನಂತರ 12 ಯೋಜನೆಗಳನ್ನು ತಯಾರಿಸಿತು. ಆದರೆ ಈಗ ಅದು ಇತಿಹಾಸ ಸೇರಿದೆ. 2014ರಲ್ಲಿ ಅಧಿಕಾರಕ್ಕೆ ಬಂದ ಮೋದಿ ಸರಕಾರ ಅದನ್ನು ವಿಸರ್ಜಿಸಿ 'ನೀತಿ ಆಯೋಗ' ಎಂಬುದನ್ನು ರಚಿಸಿದೆ. ನಮ್ಮಂತಹ ದೇಶದ ಅಭಿವೃದ್ಧಿ ಯೋಜನಾಬದ್ಧವಾಗಿರಬೇಕು, ಇಲ್ಲವಾದರೆ ಅದು ಖಾಸಗಿ ದುರಾಸೆಗೆ ಒಳಗಾಗುತ್ತದೆ, ದೇಶದ ಅಭಿವೃದ್ಧಿ ಅರ್ಥಹೀನವಾಗುತ್ತದೆ ಎಂಬ ತತ್ವ ಹಿಂದಕ್ಕೆ ಸರಿದು ಖಾಸಗಿ ದುರಾಸೆಯಿಂದಲೇ ಅಭಿವೃದ್ಧಿ ಸಾಧ್ಯ ಎಂಬ ತತ್ವದ ಕೈಮೇಲಾಗಿದೆ. ಈ ಬದಲಾವಣೆ ನಾಲ್ಕು ದಶಕಗಳ ಯೋಜನಾಬದ್ಧ ಬೆಳವಣಿಗೆಯ ನಂತರ 1991ರಲ್ಲಿ ನಮ್ಮ ಆಳುವ ವರ್ಗಗಳು ನವ–ಉದಾರವಾದವನ್ನು ಅಂಗೀಕರಿಸಿದಾಗಲೇ ಆರಂಭವಾಗಿತ್ತು.

ÉaeQmi



ಬ್ರಿಟನ್ನಿನ ಜನತೆ ಯುರೋಪಿಯನನ್ ಒಕ್ಕೂಟದಿಂದ ಹೊರ ಹೋಗಬೇಕೆನ್ನುವ ‘ಬ್ರೆಕ್ಸಿಟ್’’ ಪರವಾಗಿ ಮತನೀಡಿರುವುದು ಜಾಗತಿಕವಾಗಿ ಒಂದು ಮಹತ್ವದ ಘಟನೆ. ಆದರೆ ಕಾರ್ಪೊರೇಟ್ ಮಾಧ್ಯಮಗಳು ಬೊಬ್ಬಿಡುತ್ತಿರುವಂತೆ ಅಲ್ಲ. ಬ್ರೆಕ್ಸಿಟ್ ಮೂಲಕ ಬ್ರಿಟಿಷ್ ಜನರು ತಮ್ಮ ಹಕ್ಕುಗಳು ಮತ್ತು ಪ್ರಜಾಸತ್ತಾತ್ಮಕ ಆಯ್ಕೆಯನ್ನು ಮರಳಿ ಪಡೆಯುವತ್ತ ಹೆಜ್ಜೆಯಿಟ್ಟಿದ್ದಾರೆ ಎನ್ನುತ್ತಾರೆ ಸಿಪಿಐ(ಎಂ)ನ ಹಿರಿಯ ಮುಖಂಡ ಪ್ರಕಾಶ ಕಾರಟ್.

ಈ ಜನಾದೇಶವು ವಾಸ್ತವವಾಗಿ ಜಾಗತೀಕರಣಗೊಂಡಿರುವ ಹಣಕಾಸು ಬಂಡವಾಳದ ಆಧಿಪತ್ಯದ ವಿರುದ್ಧ ಜನತೆ ಸಾರಿದ ಒಂದು ಭಾರಿ ಬಂಡಾಯ **ಎನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ. ಪ್ರಭಾತ್ ಪಟ್ನಾಯಕ್.**

28 ಸದಸ್ಯ ದೇಶಗಳನ್ನು ನವ-ಉದಾರವಾದಿ ವ್ಯವಸ್ಥೆಯೊಳಗೆ ಬಂಧಿ ಮಾಡಿಕೊಂಡ ಯುರೋಪಿಯನ್ ಒಕ್ಕೂಟಕ್ಕೆ ಬ್ರಿಟನ್ ಜನತೆಯ ಈ ನಿರ್ಧಾರ ಗುಲಾಮಗಿರಿಯ ಒಂದು ಸ್ಪಷ್ಟ ನಿರಾಕರಣೆಯಾಗಿದೆ. ಅತ್ತ ಹಣಕಾಸು ಬಂಡವಾಳದ ವಿರುದ್ಧವಾದ ಬಂಡಾಯ ಎನ್ನುವಾಗ, ಅದರ ಅರ್ಥ ಜರ್ಮನ್ ಹಣಕಾಸು ಬಂಡವಾಳ ಮಾತ್ರವಲ್ಲ, ಅದಕ್ಕಿಂತಲೂ ಮಿಗಿಲಾಗಿ ಬ್ರಿಟಿಷ್ ಹಣಕಾಸು ಬಂಡವಾಳದ ವಿರುದ್ಧದ ಬಂಡಾಯ ಎಂದೂ ಆಗುತ್ತದೆ.

ಯುರೋಪಿಯನ್ ಒಕ್ಕೂಟದ ಸಂಕೋಲೆಯಿಂದ ಬ್ರಿಟಿಶ್ ಜನತೆಗೆ ಬಿಡುಗಡೆ

*** ಪ್ರಕಾಶ್ ಕಾರಟ್**

ಜಗತ್ತಿನಾದ್ಯಂತ ಕಾರ್ಪೊರೇಟ್ ಮಾಧ್ಯಮಗಳು ಬೊಬ್ಬಿಡುತ್ತಿರುವುದನ್ನು ನೋಡಿದರೆ ಬ್ರಿಟನ್ ಜನತೆ ಯುರೋಪಿಯನ್ ಒಕ್ಕೂಟದಿಂದ ಹೊರಬರಲು (ಬ್ರಿಟನ್ಎಕ್ಸಿಟ್-ಬ್ರೆಕ್ಸಿಟ್) ಮಾಡಿದ ತೀರ್ಮಾನವು ಬ್ರಿಟನ್, ಯುರೋಪ್ ಮತ್ತು ಜಗತ್ತಿಗೆ ಒಂದು ಅಪ್ಪಟ ದುರಂತ ಎನ್ನುವಂತೆ ಕಾಣುತ್ತದೆ. ಜಾಗತೀಕರಣ ಮತ್ತು ‘ಉದಾರವಾದಿ-ಬಂಡವಾಳಶಾಹಿ’ ವ್ಯವಸ್ಥೆ ಕೊನೆಗೊಂಡಿತೆಂದು ಶ್ರದ್ಧಾಂಜಲಿಯ ಕಂಬನಿ ಮಿಡಿಯಲಾಗುತ್ತಿದೆ. ‘ಬ್ರೆಕ್ಸಿಟ್’ನಿಂದಾಗಿ ನಿಜವಾಗಿಯೂ ನೋವಾಗಿರುವುದು ಯಾರಿಗೆ ಎನ್ನುವುದು ಜಗತ್ತಿನ ಷೇರು ಮಾರುಕಟ್ಟೆ ಮತ್ತು ಹಣಕಾಸು ಮಾರುಕಟ್ಟೆಯಲ್ಲಿನ ಕುಸಿತಗಳು ತೋರಿಸುತ್ತವೆ- ದೊಡ್ಡ ಹಣಕಾಸು ಯಜಮಾನರುಗಳು ಹಾಗೂ ಬ್ಯಾಂಕ್‌ಗಳಿಗಷ್ಟೇ ಎನ್ನುವುದು ಸ್ಪಷ್ಟ.

ಆದರೆ, ಯುರೋಪಿಯನ್ ಒಕ್ಕೂಟ(ಇಯು)ದಲ್ಲಿ ಉಳಿಯಬೇಕೇ ಬೇಡವೇ ಎಂದು ನಡೆದ ಜನಮತಗಣನೆ ಬಗ್ಗೆ ಇನ್ನೂ ಒಂದು ಪರ್ಯಾಯ ಅಭಿಪ್ರಾಯವಿದೆ. ನಿರ್ಗಮಿಸಲು 52ಶೇಕಡಾ ಜನರು ಮತ ನೀಡಿದ್ದಾರೆ. ತನ್ನ 28 ಸದಸ್ಯ ದೇಶಗಳನ್ನು ನವ-ಉದಾರವಾದಿ ವ್ಯವಸ್ಥೆಯ ಬಂಧಿ ಮಾಡಿಕೊಂಡ ಇಯುಗೆ ಬ್ರಿಟನ್ ಜನತೆಯ ಈ ನಿರ್ಧಾರ ಗುಲಾಮಗಿರಿಯ ಒಂದು ಸ್ಪಷ್ಟ ನಿರಾಕರಣೆಯಾಗಿದೆ.

ಇಯು ಒಂದು ರಾಷ್ಟ್ರವನ್ನು ಮೀರಿದ ಸಂಸ್ಥೆಯಾಗಿದೆ. ಯುರೋಪ್‌ನ ದೊಡ್ಡ ಬಂಡವಾಳ ಮತ್ತು ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಹಿತವನ್ನು ಪ್ರವರ್ತಿಸುವ ಸಾಧನವಾಗಿದೆ. ಸದಸ್ಯ ದೇಶಗಳ ನಡುವೆ ಬಂಡವಾಳ ಹರಿದು ಬರುವಲ್ಲಿ ಯಾವುದೇ ನಿರ್ಬಂಧ ಇಲದಂತೆ ಒಕ್ಕೂಟ ಖಾತರಿಪಡಿಸುತ್ತದೆ. ಇಲ್ಲಿ ಯಾವುದೇ ದೇಶದ ಸರಕಾರಿ ಹಣಕಾಸು ಕೊರತೆಯು (ಫಿಸ್ಕಲ್ ಡೆಫಿಸಿಟ್) ಜಿಡಿಪಿಯ ಮೂರು ಶೇಕಡಾಕ್ಕಿಂತ ಹೆಚ್ಚಿಗೆ ಇರಬಾರದು ಎಂಬ ನಿಯಮವ್ವು ಹಾಕಲಾಗಿದೆ. ಈ ಮೂಲಕ ಒಕ್ಕೂಟದ ಯಾವುದೇ ದೇಶ ಮಾಡುವ ವೆಚ್ಚದ ಮೇಲೆ ನಿರ್ಬಂಧ ವಿಧಿಸಲಾಗಿದೆ. ಯೂರೋ ಎಂಬ ಒಂದು ಸಾಮಾನ್ಯ ಕರೆನ್ಸಿಯನ್ನು ಅಳವಡಿಸಿಕೊಂಡಿರುವ ಯುರೋಪಿಯನ್ ಒಕ್ಕೂಟದ ಒಳಗಡೆ ಅದರ ಸದಸ್ಯ ದೇಶಗಳು ಸ್ವತಂತ್ರ ಹಣ ನೀತಿಯನ್ನು ಹೊಂದುವಂತಿಲ್ಲ. ಅವು ತಮ್ಮ ಕರೆನ್ಸಿಯನ್ನು ಅಪಮೌಲ್ಯಗೊಳಿಸುವಂತಿಲ್ಲ ಅಥವಾ ತಮ್ಮ ರಫ್ತುಗಳಿಗೆ ಸಬ್ಸಿಡಿ ನೀಡುವಂತಿಲ್ಲ. ಒಕ್ಕೂಟದ ನಿಯಮಗಳ ಪ್ರಕಾರ, ಯಾವುದೇ ಒಂದು ಕೈಗಾರಿಕೆ ಬಿಕ್ಕಟ್ಟಿನಲ್ಲಿದ್ದರೆ ಅದಕ್ಕೆ ಸರಕಾರಗಳು ಸಬ್ಸಿಡಿ ನೀಡುವಂತಿಲ್ಲ.

2008ರ ಜಾಗತಿಕ ಹಣಕಾಸು ಬಿಕ್ಕಟ್ಟಿನ ನಂತರ ಯುರೋಪಿಯನ್ ಒಕ್ಕೂಟ ಮಿತವ್ಯಯದ ಕ್ರಮಗಳನ್ನು ಪ್ರಕಟಿಸಿತು. ಅದರ ಅಂಗವಾಗಿ ಸಾರ್ವಜನಿಕ ವೆಚ್ಚಗಳು ಮತ್ತು ಸಾಮಾಜಿಕ ವೆಚ್ಚಗಳ ಮೇಲೆ ಕಡಿತ ಹೇರಲಾಯಿತು. ಇದು ದುಡಿಯುವ ವರ್ಗ ಮತ್ತು ಬಡಜನರ ಮೇಲೆ ತೀವ್ರ ದುಷ್ಪರಿಣಾಮ ಬೀರಿತು. ಕಡಿತ ನಿಯಮಗಳಿಂದಾಗಿ ಅವರ ಶಿಕ್ಷಣ, ಆರೋಗ್ಯ ಮತ್ತು ಪಿಂಚಣಿ ಸೌಲಭ್ಯಗಳು ತೀವ್ರವಾಗಿ ಕಡಿತಗೊಂಡವು.

ನವ-ಉದಾರವಾದಿ ನೀತಿಗಳು ಅಸಮಾನತೆಯನ್ನು ಮತ್ತು ಸಂಪತ್ತಿನ ಕೇಂದ್ರೀಕರಣಗೊಳ್ಳುವುದನ್ನು ಪ್ರೋತ್ಸಾಹಿಸಿದವು. ಬ್ರಿಟನ್‌ನಂಥ ದೇಶಗಳಲ್ಲಿ ಅದು ದೇಶದ ಆರ್ಥಿಕತೆಯ “ಹಣಕಾಸೀಕರಣಕ್ಕೆ” ಮತ್ತು ಕೈಗಾರಿಕೀಕರಣದ ಹಿಂಜರಿಕೆಗೆ ಎಡೆ ಮಾಡಿಕೊಟ್ಟವು. ಬಲಪಂಥೀಯ ಕನ್ಸರ್ವೇಟಿವ್(ಸಂಪ್ರದಾಯಶರಣ) ಸರಕಾರದಡಿಯಲ್ಲಿ ಬ್ರಿಟನ್ ರಾಷ್ಟ್ರೀಯ ಆರೋಗ್ಯ ಸೇವೆ, ವಸತಿ, ಸಾಮಾಜಿಕ ಕಲ್ಯಾಣ ಕ್ಷೇತ್ರಗಳಲ್ಲಿ ಭಾರೀ ಕಡಿತಗಳನ್ನು ಕಂಡಿತು. ಹಾಗೂ ಕೈಗಾರಿಕಾ ಕಾರ್ಮಿಕರು ಭಾರೀ ಪ್ರಮಾಣದಲ್ಲಿ ಉದ್ಯೋಗಗಳನ್ನು ಕಳೆದುಕೊಂಡರು.

ಇಯುನ ‘ಪ್ರಜಾಪ್ರಭುತ್ವ ಕೊರತೆ’ಯು ಬ್ರಸೆಲ್ಸ್‌ನಲ್ಲಿನ ಗುರುತಿಲ್ಲದ ಆಡಳಿತಶಾಹಿಯ ಪರಿಣಾಮವಾಗಿದ್ದು ಅದು ಒಕ್ಕೂಟದ ದೇಶಗಳ ಜನರಿಗೆ ಉತ್ತರದಾಯಿತ್ವ ಹೊಂದಿರಲಿಲ್ಲ. ಗ್ರೀಸ್‌ನಲ್ಲಿ ಸಿರಿಝಾ ಸರಕಾರ ಆಯ್ಕೆಗೊಂಡಾಗ, ಅಲ್ಲಿನ ಸರಕಾರ ಕೆಲವು ಮಿತವ್ಯಯ ಕ್ರಮಗಳನ್ನು ಹಿಂದಕ್ಕೆ ಪಡೆಯಲು ಕೋರಿತ್ತು. ಆದರೆ ಅದಕ್ಕಾದ ಗತಿಯೇನೆಂಬುದನ್ನು ಎಲ್ಲರೂ ನೋಡಿದ್ದು ಇದಕ್ಕೊಂದು ಉದಾಹರಣೆಯಾಗಿದೆ. ಯುರೋಪಿಯನ್ ಯೂನಿಯನ್-ಯುರೋಪಿಯನ್ ಸೆಂಟ್ರಲ್ ಬ್ಯಾಂಕ್-ಐಎಂಎಫ್ ತ್ರಿವಳಿ ಹೇರಿದ ಇನ್ನಷ್ಟು ತೀಕ್ಷ್ಣ ಮಿತವ್ಯಯ ಕ್ರಮದ ಕಹಿಗುಳಿಗೆಯನ್ನು ಗ್ರೀಸ್ ನುಂಗಬೇಕಾಗಿ ಬಂದಿತ್ತು.

ಯುರೋಪಿಯನ್ ಒಕ್ಕೂಟ ಮತ್ತು ಯೂ-ರೋ ಕರೆನ್ಸಿಯೊಂದಿಗೆ ಇದ್ದರೆ ಯಾವುದೇ ಸರಕಾರ ಅಧಿಕಾರಕ್ಕೆ ಬಂದು ಮಿತವ್ಯಯ-ವಿರೋಧಿ ಪರ್ಯಾಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಾಧ್ಯವಿಲ್ಲ ಅಥವಾ ಯುರೋಪಿಯನ್ ಯೂನಿಯನ್ ಬಂಡವಾಳ ನಿರ್ದೇಶಿತ ನೀತಿಗಳನ್ನಲ್ಲದೆ ಬೇರಾವುದೇ ಪ್ರಜಾಸತ್ತಾತ್ಮಕ ಆಯ್ಕೆ ಜನರ ಮುಂದೆ ಇರುವುದಿಲ್ಲ.

ಬ್ರಿಟನ್‌ನ ಆಳುವ ಕನ್ಸರ್ವೇಟಿವ್ ಪಕ್ಷದ ಆಂತರಿಕ ಕಚ್ಚಾಟವನ್ನು ಪರಿಹರಿಸಲು ಜನಮತಗಣನೆಗೆ ಕರೆ ನೀಡಲಾಯಿತು. ಯುರೋಪಿಯನ್ ಒಕ್ಕೂಟದಲ್ಲಿ ಉಳಿಯುವ ಅತುಲ ಆತ್ಮವಿಶ್ವಾಸದೊಂದಿಗೆ ಪ್ರಧಾನಿ ಡೇವಿಡ್ ಕ್ಯಾಮರೂನ್ ಈ ಕರೆ ನೀಡಿದ್ದರು. ಆದರೆ ಅವರ ತಪ್ಪು ಲೆಕ್ಕಾಚಾರ ಕ್ಯಾಮರೂನ್‌ರ ಪ್ರಧಾನಿ ಪಟ್ಟಕ್ಕೇ ಸಂಚಕಾರ ತಂದಿದೆ. ಲೇಬರ್ ಪಕ್ಷದ ಬಗ್ಗೆ ಹೇಳುವುದಾದರೆ ಅದರ ಕೆಲವು ಬೆಂಬಲಿಗರು ಕೂಡ ನಿರ್ಗಮನದ ಪರವಾಗಿ ಮತ ನೀಡಿದರು. ಬ್ರಿಟಿಷ್ ಕಮ್ಯೂನಿಸ್ಟ್ ಪಕ್ಷ, ಟ್ರಾಟ್‌ಸ್ಕಿವಾದಿ ಪಕ್ಷಗಳೂ ಸೇರಿದಂತೆ ಎಡಪಂಥೀಯರ ದೊಡ್ಡ ವಿಭಾಗ ಮತ್ತು ಇತರರು ನಿರ್ಗಮನದ ಪರವಾಗಿಯೇ ಪ್ರಚಾರ ನಡೆಸಿದವು. ಆದರೆ ಬ್ರಿಟನ್‌ನಲ್ಲಿ ಎಡಪಂಥೀಯರು ಶಕ್ತಿಶಾಲಿಗಳಲ್ಲ. ಬಲಪಂಥೀಯ ಶಕ್ತಿಗಳು ಪ್ರಚಾರದ ಮುಂಚೂಣಿಯಲ್ಲಿದ್ದವು. ಅವುಗಳು ವಲಸೆ-ವಿರೋಧಿ ವೇದಿಕೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡವು. ಇಯು ನಿಯಮಗಳ ಪ್ರಕಾರ ಜನತೆಯ ಮುಕ್ತ ಓಡಾಟಕ್ಕೆ ಅವಕಾಶವಿದೆ. ಹೀಗಾಗಿ ಪೂರ್ವ ಯುರೋಪ್ ದೇಶಗಳಿಂದ ದೊಡ್ಡ ಸಂಖ್ಯೆಯ ಜನರು ಕಡಿಮೆ ವೇತನಕ್ಕೆ ದುಡಿಯಲು ಬ್ರಿಟನ್‌ಗೆ ವಲಸೆ ಬಂದಿದ್ದಾರೆ. ಕಡಿಮೆ ವೇತನಕ್ಕೆ ದುಡಿಸಿಕೊಳ್ಳುವ ಉದ್ದೇಶದಿಂದ ಮತ್ತು ಬ್ರಿಟಿಷ್ ಕಾರ್ಮಿಕರ ಉದ್ಯೋಗಗಳನ್ನು ತೆ-ಗೆದು ಹಾಕುವ ಉದ್ದೇಶದಿಂದ ಬಂಡವಾಳಶಾಹಿಗಳು ಈ ಮುಕ್ತ ಓಡಾಟದ ನೀತಿಯನ್ನು ಚೆನ್ನಾಗಿಯೇ ಬಳಸಿಕೊಂಡರು. ಯುನೈಟೆಡ್ ಕಿಂಗ್‌ಡಮ್ ಇಂಡಿಪೆಂಡೆನ್ಸ್ ಪಾರ್ಟಿಯಂಥ ಬಲಪಂಥೀಯರು ವಲಸೆ ಭಯವನ್ನು ಬಳಸಿಕೊಂಡರು ಮತ್ತು ಜನಾಂಗವಾದದ ಲೇಪವಿದ್ದ ಪ್ರಚಾರವನ್ನು ನಡೆಸಿದರು. ಈ ರೀತಿಯಾಗಿ ಉದ್ದೀಪಿಸಿದ ವಿದೇಶಿ ವಲಸಿಗ-ವಿರೋಧಿ ಉದ್ರೇಕ ಒಂದು ಗಂಭೀರ ಆತಂಕದ ವಿಚಾರವಾಗಿದೆ.

ಲಂಡನ್‌ನಿಂದ ಹೊರಗಿರುವ ಇಂಗ್ಲೆಂಡ್‌ನ ಪ್ರದೇಶಗಳಿಗೆ ಸೇರಿದ ಗಣನೀಯ ಪ್ರಮಾಣದ ದುಡಿಮೆಗಾರರು ಹಾಗೂ ಜನರು ಇಯುನಿಂದ ನಿರ್ಗಮಿಸುವ ಪರವಾಗಿ ಮತ ನೀಡಿದ್ದಾರೆ. ಆಳುವ

ಪುಟ 14 ಕ್ಕೆ



ಜೂನ್ 23ರಂದು ಬ್ರಿಟನ್‌ನಲ್ಲಿ ನಡೆದ ಜನಮತಗಣನೆಯಲ್ಲಿ ತಮ್ಮ ದೇಶವು ಐರೋಪ್ಯ ಒಕ್ಕೂಟದಿಂದ ಹೊರ ಬರುವುದರ ಪರವಾಗಿ ಬ್ರಿಟಿಷ್ ಜನತೆ ವ್ಯಕ್ತಪಡಿಸಿರುವ ಬಹುಮತದ ಪರಿಣಾಮಗಳನ್ನು ವ್ಯಾಖ್ಯಾನಿಸಿರುವ ಬಹುತೇಕ ಎಲ್ಲಾ (ಎಡ ಅಥವಾ ಬಲ) ವ್ಯಾಖ್ಯಾನಕಾರರು ಒಂದು ಪ್ರಮುಖ ಅಂಶವನ್ನು ಪ್ರಸ್ತಾಪ ಮಾಡದೆ ಬಿಟ್ಟಿದ್ದಾರೆ. ಈ ಜನಾದೇಶವು ಜಾಗತೀಕರಣಗೊಂಡಿರುವ ಹಣಕಾಸು ಬಂಡವಾಳದ ಆಧಿಪತ್ಯದ ವಿರುದ್ಧ ಜನತೆ ಸಾರಿದ ಒಂದು ಭಾರಿ ಬಂಡಾಯ ಎಂಬುದೇ ಆ ಅಂಶ. ಈ ಪಂಡಿತರುಗಳು ಅದನ್ನು ಪ್ರಸ್ತಾಪಿಸದೆ ಬಿಟ್ಟಿರುವುದು ಅವರು ಹಣಕಾಸು ಬಂಡವಾಳದ ಆಧಿಪತ್ಯಕ್ಕೆ ಸಂಪೂರ್ಣವಾಗಿ ವಶವಾಗಿರುವುದನ್ನು ಸೂಚಿಸುತ್ತದೆ. ಇದಕ್ಕೆ ಪ್ರತಿಯಾಗಿ ಬ್ರಿಟಿಷ್ ಮತದಾರರು ಅದೇ ಆಧಿಪತ್ಯದಿಂದ ಒಂದಿಷ್ಟು ಬಿಡುಗಡೆ ಪಡೆದಿರುವುದು ಕುತೂಹಲಕಾರಿಯಾಗಿದೆ.

ಬ್ರಿಟಿಷ್ ಮತದಾರರ ತೀರ್ಪು ಜಾಗತೀಕರಣದ ನಿರಾಕರಣೆ ಎಂದು ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮ ಹೇಳಿದ್ದಾರೆ. ಜಾಗತೀಕರಣದ ಬಗ್ಗೆ ಜನರಿಗಿರುವ ಅನುಚಿತವಾದ ಭಯವೇ ಅದಕ್ಕೆ ಕಾರಣವೆಂದೂ ಮತ್ತು ಅದನ್ನು ಹೋಗಲಾಡಿಸಬೇಕು ಎನ್ನುತ್ತಾರೆ ಒಬಾಮ. ಜಾಗತಿಕ ಹಣಕಾಸು ಬಂಡವಾಳವು ಬ್ರಿಟಿಷ್ ಅರ್ಥವ್ಯವಸ್ಥೆಯಲ್ಲಿ ಸೃಷ್ಟಿಸಿದ ಸಮಸ್ಯೆಗಳಿಂದ ಹೈರಾಣಾಗಿರುವ ಬ್ರಿಟಿಷ್ ಜನತೆಯ ಆಕ್ರೋಶ ಬ್ರೆಕ್ಸಿಟ್ ಮೂಲಕ ಹೊರಬಂದಿದೆ ಎಂದು ಅವರು ಹೇಳುವುದಿಲ್ಲ. ಜಾಗತೀಕರಣವು ಅನುಕೂಲಕಾರಿ ಎಂದು ಸಮರ್ಥಿಸುವ ಅವರು ಜಾಗತೀಕರಣದ ಹೆಗ್ಗುರುತಾಗಿರುವ ಹಣಕಾಸು ಬಂಡವಾಳವು ಜನಸಾಮಾನ್ಯರ ಮೇಲೆ ಬೀರಿದ ಹಾನಿಕಾರಕ ಪರಿಣಾಮಗಳ ಬಗ್ಗೆ ಜಾಣ ಮೌನ ವಹಿಸುತ್ತಾರೆ.

ಯೂರೋಪಿನ ಎಡ ಪಂಥೀಯರ ನಿಲುವು

ಜಾಗತೀಕರಣವು ಮಾನವಕೋಟಿಯನ್ನು ಒಟ್ಟುಗೂಡಿಸಿ ಅವರಿಗೆ ಪ್ರಯೋಜನ ಉಂಟುಮಾಡುತ್ತದೆ ಎಂದು ಅದರ ಸಮರ್ಥಕರು ಹೇಳುತ್ತಾರೆ. ಆದರೆ, ಜಾಗತೀಕರಣದ ಪ್ರಕ್ರಿಯೆಯಲ್ಲಿ ಪ್ರಾಬಲ್ಯ ಹೊಂದಿರುವ ಹಣಕಾಸು ಬಂಡವಾಳವು ಅರ್ಥವ್ಯವಸ್ಥೆಯಲ್ಲಿ ಉಂಟುಮಾಡುವ ಸಮಸ್ಯೆಗಳಿಗೆ ಜನರು ಬಲಿಯಾಗುತ್ತಾರೆ ಎಂಬ ಅಂಶವನ್ನು ಅವರು ಕಡೆಗಣಿಸುತ್ತಾರೆ.ಯೂರೋಪಿನ ಎಡ ಒಲವಿನ ಬಹಳ ಮಂದಿ ಜಾಗತೀಕರಣದ ಪರ ಇದ್ದಾರೆ ಮತ್ತು ಐರೋಪ್ಯ ಒಕ್ಕೂಟವನ್ನು ಬಲವಾಗಿ ಸಮರ್ಥಿಸುತ್ತಾರೆ. ಅವರ ಪ್ರಕಾರ, ಇಪ್ಪತ್ತನೇ ಶತಮಾನದ ಮೊದಲ ಐವತ್ತು ವರ್ಷಗಳ ಕಾಲದಲ್ಲಿ ದೇಶ ದೇಶಗಳ ನಡುವಿನ ಘರ್ಷಣೆಗಳಿಂದ ಬಳಲಿದ್ದ ಯೂರೋಪಿಯನ್ ದೇಶಗಳಿಗೆ ಐರೋಪ್ಯ ಒಕ್ಕೂಟದ ಅಸ್ತಿತ್ವವು ಒಂದು ನಿಟ್ಟುಸಿರಾಗಿದೆ. ಜರ್ಮನ್ ಹಣಕಾಸು ಬಂಡವಾಳವು ಮೇಲುಗೈ ಪಡೆದಿರುವ ಐರೋಪ್ಯ ಒಕ್ಕೂಟವು ವೈರುಧ್ಯಗಳಿಂದ ಕೂಡಿದೆ-ಯಾದರೂ ಅದನ್ನು ಪ್ರಜಾತಾಂತ್ರಿಕ ಒತ್ತಡಗಳ ಮೂಲಕ ಪರಿಹರಿಸಿಕೊಳ್ಳಬಹುದೆಂದು ಯೂರೋಪಿನ ಎಡಪಂಥ ನೆಚ್ಚಿಕೊಂಡಿದೆ. ಈ ನೆಚ್ಚಿಗೆ ಒಂದು ಅನಿಸಿಕೆಯಷ್ಟೇ, ಬೇರೇನಲ್ಲ.

ಐರೋಪ್ಯ ಒಕ್ಕೂಟದ ಸದಸ್ಯ ದೇಶ ಗ್ರೀಸ್‌ನಲ್ಲಿ ‘ಮಿತವ್ಯಯ’ ನೀತಿಗಳನ್ನು ವಿರೋಧಿಸಿ ಅಧಿಕಾರಕ್ಕೆ ಬಂದ ಸಿರಿಜ಼ಾ (ಗ್ರೀಸ್ ದೇಶದ ತೀವ್ರಗಾಮಿ ಎಡ ಪಕ್ಷಗಳ ಒಂದು ಒಕ್ಕೂಟದ ಸಂಕ್ಷಿಪ್ತ ಪದ) ಐರೋಪ್ಯ ಒಕ್ಕೂಟದಲ್ಲಿ ಪ್ರಾಬಲ್ಯ ಹೊಂದಿರುವ ಜರ್ಮನ್

ನಿಜ, ಬ್ರಿಟನ್‌ನ ವರ್ಗ ಬಲಾಬಲವನ್ನು ಪರಿಗಣಿಸಿದರೆ ಬಲಪಂಥೀಯರೇ ಅಲ್ಪಾವಧಿಯಲ್ಲಿ ಇದರ ಲಾಭ ಪಡೆಯುತ್ತಾರೆ. ಆದರೂ ಯುರೋಪಿಯನ್ ಒಕ್ಕೂಟದ ಸಂಕೋಲೆಯನ್ನು ಈಗ ಕಡಿದು ಹಾಕಿರುವುದರಿಂದ ರೈಲ್ವೆಯ ಮರು–ರಾಷ್ಟ್ರೀಕರಣ ಮತ್ತು ಆರ್ಥಿಕತೆಯ ಪ್ರಮುಖ ಕ್ಷೇತ್ರಗಳ ಮೇಲೆ ಸಾಮಾಜಿಕ ನಿಯಂತ್ರಣ ಸಾಧಿಸುವುದು ಇವೇ ಮೊದಲಾದ ಕಾರ್ಯಕ್ರಮಗಳುಳ್ಳ ಎಡ ಕಾರ್ಯಕ್ರಮದ ಪರ್ಯಾಯ ಅಜೆಂಡಾಕ್ಕಾಗಿನ ಹೋರಾಟವನ್ನು ಮುಂದಕ್ಕೊಯ್ಯಬಹುದಾಗಿದೆ. ಒಂದು ನ್ಯಾಯಸಮ್ಮತ ಹಾಗೂ ಸಮಾನತೆಯ ಸಮಾಜ ರಚನೆಗಾಗಿ ಬ್ರಿಟನ್ನಿನ ಜನತೆ ದೀರ್ಘ ಹಾದಿಯನ್ನು ಸವೆಸಬೇಕಾಗಿದೆ, ಮತ್ತು ಕಠಿಣ ಹೋರಾಟಗಳನ್ನು ಎದುರಿಸಬೇಕಾಗಿದೆ ಎಂದು ಈ ಇಬ್ಬರೂ ಪರಿಣಿತರು ಅಭಿಪ್ರಾಯ ಪಡುತ್ತಾರೆ.



ಜಾಗತಿಕ ಹಣಕಾಸು ಬಂಡವಾಳದ ಆಧಿಪತ್ಯದ ವಿರುದ್ಧ ಬಂಡಾಯ

* ಪ್ರೊ.ಪ್ರಭಾತ್ ಪಟ್ನಾಯಕ್

ಹಣಕಾಸು ಬಂಡವಾಳವು ಹೇರುತ್ತಿದ್ದ ಒತ್ತಡಗಳನ್ನು ನಿಭಾಯಿಸಬಹುದೆಂದು ಭಾವಿಸಿತ್ತು. ಅದು ಕೇವಲ ಅನ್ನಿಸಿಕೆ ಎಂಬುದು ಗ್ರೀಸ್‌ನಲ್ಲೇ ಸಾಬೀತಾಯ್ತು. ಸಾಲದ ಬಿಕ್ಕಟ್ಟಿನಲ್ಲಿ ಒದ್ದಾಡುತ್ತಿದ್ದ ಗ್ರೀಸ್, ಜರ್ಮನ್ ಹಣಕಾಸು ಬಂಡವಾಳದ ಅನೌಪಚಾರಿಕ ಪ್ರತಿನಿಧಿಯಂತಿರುವ ಜರ್ಮನ್ ಹಣಕಾಸು ಮಂತ್ರಿ ವೂಲ್ಫ್‌ಗ್ಯಾಂಗ್ ಷ್ಯಾಬ್ಲ್ ಹೇರಿದ ಮತ್ತೊಂದು 'ಮಿತವ್ಯಯ' ಪ್ಯಾಕೇಜ್ ಒಪ್ಪಿಕೊಳ್ಳಬೇಕಾಯ್ತು. ಈ ಬೆಳವಣಿಗೆಯು ಯೂರೋಪಿನ ಎಡ ಪಕ್ಷಗಳನ್ನು ಒಂದು ಸುಸಂಬದ್ಧ ಮತ್ತು ವಿಶ್ವಾಸಾರ್ಹ ಶಕ್ತಿಯಾಗಿ ಹೊರಹೊಮ್ಮಲಾರದಷ್ಟು ನಿತ್ರಾಣಗೊಳಿಸಿದೆ. ಹಾಗಾಗಿ, ಹಣಕಾಸು ಬಂಡವಾಳದ ಆಧಿಪತ್ಯದಲ್ಲಿ ನಡೆಯುತ್ತಿರುವ ಜಾಗತೀಕರಣವು ಸೃಷ್ಟಿಸಿರುವ ಸಮಸ್ಯೆಯಿಂದ ಬಳಲುತ್ತಿರುವ ಜನತೆಯ ಆತಂಕದ ಲಾಭ ಪಡೆಯಲು ಬಲಪಂಥೀಯ, ಜನಾಂಗೀಯ, ಫ್ಯಾಸಿಸ್ಟ್ ಅಥವಾ ಅರೆ–ಫ್ಯಾಸಿಸ್ಟ್ ಪಕ್ಷಗಳಿಗೆ ಹಾಸಿಗೆ ಹಾಸಿಕೊಟ್ಟಂತಾಗಿದೆ.

ಬ್ರಿಟನ್ ಪರಿಸ್ಥಿತಿಯೂ ಇದೇ ರೀತಿಯಲ್ಲಿತ್ತು. ಐರೋಪ್ಯ ಒಕ್ಕೂಟವು ಹೇರಿದ್ದ 'ಮಿತವ್ಯಯ' ನೀತಿಗಳ ನಿಷ್ಠಾವಂತ ವಿರೋಧಿಯಾಗಿದ್ದ ಲೇಬರ್ ಪಕ್ಷದ ನಾಯಕ ಜೆರೆಮಿ ಕಾರ್ಬಿನ್, ಬ್ರಿಟನ್ ಐರೋಪ್ಯ ಒಕ್ಕೂಟದಲ್ಲಿ ಉಳಿಯುವಂತೆ (Remain) ಮತದಾರರಿಗೆ ನೀಡಿದ ಕರೆಯು, ದೇವರು, ದೊರೆ, ದೇಶ ಇವುಗಳನ್ನು ಮುಖ್ಯ ಲಕ್ಷಣವಾಗುಳ್ಳ ಟೋರಿ(ಕನ್ಸರ್ವೇಟಿವ್ ಪಕ್ಷದವರನ್ನು ಹೀಗೂ ಕರೆಯುತ್ತಾರೆ) ಪ್ರಧಾನ ಮಂತ್ರಿ ಡೆವಿಡ್ ಕ್ಯಮರೂನ್ ಅವರ ಕರೆಯ ಅನುಕರಣೆಯಾಗಿತ್ತು. ಮತ್ತು ಬ್ರಿಟಿಷ್ ಹಣಕಾಸು ಬಂಡವಾಳದ ನೆಲೆಯೂ ಹಾಗೂ ಅಂತರಾಷ್ಟ್ರೀಯ ಆರ್ಥಿಕ ಚಟುವಟಿಕೆಗಳ ಕೇಂದ್ರ ಸ್ಥಾನವೂ ಆದ ಲಂಡನ್ ನಗರವು ಬೆಂಬಲಿಸುತ್ತಿದ್ದ ಐರೋಪ್ಯ ಒಕ್ಕೂಟ ಪರ ಮಾರ್ಗದ ಹಿಂಬಾಲಿಕೆಯೂ ಆಗಿತ್ತು. ಒಂದು ಎಡ ಗುಂಪು ಬ್ರೆಕ್ಸಿಟ್ ಪರವಾಗಿ ಪ್ರಚಾರ ಪ್ರಕ್ಷೋಭೆ ನಡೆಸಿತು. ಎಡ ಚಳುವಳಿ ಹರಿದು ಹಂಚಿಹೋಗಿದ್ದರಿಂದ ಅದರ ಪ್ರಚಾರ ಪ್ರಕ್ಷೋಭೆಯೂ ದುರ್ಬಲವಾಗಿತ್ತು. ಹಾಗಾಗಿ, ಉಗ್ರ–ಬಲಪಂಥೀಯ ಯು ಕೆ ಇಂಡಿಪೆಂಡೆಂಟ್ ಪಾರ್ಟಿ ಮತ್ತು ಲಂಡನ್ ನಗರದ ಮಾಜಿ ಮೇಯರ್ ಬೋರಿಸ್ ಜಾನ್ಸನ್ ನೇತೃತ್ವದ ಒಂದು ಗುಂಪು(ಟೋರಿ ಪಕ್ಷ) ಜಾಗತೀಕರಣದ ಹೊಡೆತ ತಿಂದ ಜನರ ಆಕ್ರೋಶವನ್ನು ಬ್ರೆಕ್ಸಿಟ್ ಪರವಾಗಿ ತಿರುಗಿಸಲು ಮುತುವರ್ಜಿ ವಹಿಸಿದವು.



ವಲಸೆ–ಸಮಸ್ಯೆ

ಬ್ರೆಕ್ಸಿಟ್ ಪರವಾಗಿ (exit) ಮತ ಚಲಾಯಿಸಿದವರ ಮೇಲೆ 'ವಲಸೆ'(immigration)ಸಮಸ್ಯೆ ಪ್ರಭಾವ ಬೀರಿದೆ ಎಂದು ಹೇಳಲಾಗುತ್ತಿದೆ(ಐರೋಪ್ಯ ಒಕ್ಕೂಟದ ಎಲ್ಲ ಸದಸ್ಯ ದೇಶಗಳೂ ಇನ್ನೊಂದು ಸದಸ್ಯ ದೇಶದ ವಲಸಿಗರನ್ನು ಒಪ್ಪಿಕೊಳ್ಳುವಂತೆ ಕಟ್ಟಪ್ಪಣೆ ಮಾಡಲಾಗಿದೆ). ಬಣ್ಣ ಬಣ್ಣದ ಮಾತುಗಳ ಮೂಲಕ, ವಲಸೆಯ ಸಮಸ್ಯೆಯು ಪೆಡಂಭೂತದಂತೆ ಬ್ರಿಟನ್‌ನನ್ನು ಕಾಡುತ್ತಿದೆ ಎಂಬುದಾಗಿ ಜನರನ್ನು ಪ್ರಚೋದಿಸಿ, ಅವರ ಜನಾಂಗೀಯ ಭಾವನೆಗಳನ್ನು ಕೆರಳಿಸಿ ಬ್ರೆಕ್ಸಿಟ್ ಪರವಾಗಿ ಮತ ಚಲಾಯಿಸುವಂತೆ ಮಾಡಿದ್ದಾರೆ ಎಂದು remain ಬಣ ಆರೋಪ ಮಾಡಿದೆ. ಈ ಆರೋಪ ಎಷ್ಟು ನಿಜ ಎಂಬುದು ಸ್ಪಷ್ಟವಿಲ್ಲ. ಆದರೆ, ಈ ಜನಾಂಗೀಯ ದ್ವೇಷದ ಬಣ್ಣ exit ಕ್ಯಾಂಪಿಗೆ ಅಂಟಿಕೊಳ್ಳಲು ಲೇಬರ್ ಪಕ್ಷದ ನಿಲುವು ಮುಖ್ಯವಾದ ಕಾರಣ. ಏಕೆಂದರೆ, ಲೇಬರ್ ಪಕ್ಷವು ಹಣಕಾಸು ಬಂಡವಾಳದ ನೀತಿಗಳಿಂದ ಉಂಟಾದ ನಿರುದ್ಯೋಗ, ಆತಂಕ ಮತ್ತು ಅಭದ್ರತೆಗಳಿಂದ ಕೋಪಗೊಂಡಿದ್ದ ಜನರ ಭಾವನೆಗಳನ್ನು ನಿರ್ಲಕ್ಷಿಸಿ ಅವರಿಗೆ ಒಕ್ಕೂಟದಲ್ಲಿ ಉಳಿಯುವಂತೆ (remain) ಮತ ಹಾಕಲು ಕರೆ ಕೊಟ್ಟಿತು. ಜನರ ಸಿಟ್ಟು ಜನಾಂಗೀಯ ದ್ವೇಷದತ್ತ ಹೊರಳುವ ಬದಲು ಅದನ್ನು ಹಣಕಾಸು ಬಂಡವಾಳದ ಆಧಿಪತ್ಯವು ಐರೋಪ್ಯ ಒಕ್ಕೂಟದ ಮೇಲೆ ನಡೆಸುತ್ತಿರುವ ದಬಾವಣೆಗಳ ವಿರುದ್ಧ ಪ್ರಜ್ಞಾಪೂರ್ವಕವಾಗಿ ತಿರುಗುವಂತೆ ಲೇಬರ್ ಪಕ್ಷವು ಜನರಿಗೆ ಮಾರ್ಗದರ್ಶನ ಮಾಡಬೇಕಿತ್ತು. ಎಡ ಪಕ್ಷಗಳಿಗೆ ನಿಜಕ್ಕೂ ಹಣಕಾಸು ಬಂಡವಾಳದ ಆಧಿಪತ್ಯದಲ್ಲಿರುವ ಜಾಗತೀಕರಣದ ಸಂಬಂಧ ಕಡಿದುಕೊಳ್ಳುವ ಮನಸ್ಸಿದ್ದಿದ್ದರೆ, ಅವರು ಮುಂಬರುವ ಘಟನಾವಳಿಗಳನ್ನು ಅಂದಾಜುಮಾಡಿ ಅದಕ್ಕೆ ತಕ್ಕಂತೆ ಒಂದು ಪರ್ಯಾಯ ಕಾರ್ಯಕ್ರಮವನ್ನು ಜನರ ಮುಂದಿಡಬಹುದಿತ್ತು. ಆದರೆ, ಅದಕ್ಕೆ ಬದಲಾಗಿ, ಜಾಗತೀಕರಣದ ಸಂಬಂಧ ಕಡಿದುಕೊಳ್ಳುವ ಒತ್ತಾಯ ಮಾಡದ ತಮ್ಮ ಹೇಡಿತನದಿಂದಾಗಿ ಅವರು ಪರಿಸ್ಥಿತಿಯನ್ನು ಉಗ್ರ–ಬಲಪಂಥೀಯ ಶಕ್ತಿಗಳು ಬಳಸಿಕೊಳ್ಳಲು ಬಿಟ್ಟುಕೊಟ್ಟರು.ಇದೊಂದು ಬದಲಾವಣೆ ಮಾಡಲಾಗದ ಘಟನೆಯಾಗಲಾರದು. ಎಡ ಪಕ್ಷಗಳು ಜಾಗತೀಕರಣದ ಸಂಬಂಧ ಕಡಿದುಕೊಳ್ಳುವ ಒತ್ತಾಯ ಮಾಡದೆ ಇರಲು, ಈ ಹಿಂದೆ ರಾಷ್ಟ್ರವಾದಿ ಭಾವನೆಗಳು ವಿನಾಶಕಾರಿಯಾಗಿ ಪರಿಣಮಿಸಿದ ಪರಿಸ್ಥಿತಿ ಮತ್ತೆ ಬರದಿರಲಿ ಎಂಬ ಉದ್ದೇಶಗಳಿಂದ ಕೂಡಿತ್ತೆಂಬುದರಲ್ಲಿ ಅನುಮಾನವಿಲ್ಲ. ಅದು ಶ್ಲಾಘನೀಯ ಉದ್ದೇಶವೇ. ಆದರೆ, ಒಂದು ವಿದ್ಯಮಾನವೇ ಆಗಿರುವ ಜಾಗತಿಕ ಹಣಕಾಸು ಬಂಡವಾಳದ ಸಂಬಂಧ ಕಡಿದುಕೊಳ್ಳದೆಯೂ ಅದನ್ನು ನಿಯಂತ್ರಿಸಬಹುದು ಎಂಬ ಅವರ ಎಣಿಕೆ ತಪ್ಪಾಗಿತ್ತು. ಪ್ರಜ್ಞಾಪೂರ್ವಕವಾದ ಒಂದು ಬಂಡಾಯದ ನಾಯಕತ್ವವನ್ನು ಯಾರು ವಹಿಸಬೇಕಾಗಿತ್ತೋ ಅವರು ಆ ಕೈಂಕರ್ಯದಲ್ಲಿ ಭಾಗವಹಿಸದಿರಲು ನಿರ್ಧರಿಸಿದುದರಿಂದ ಬ್ರೆಕ್ಸಿಟ್ ವೋಟು, ಹಣಕಾಸು ಬಂಡವಾಳದ ಆಧಿಪತ್ಯದ ವಿರುದ್ಧ ಒಂದು ಸ್ವಪ್ರತಿಷ್ಟೆ ಇಲ್ಲದ ಬಂಡಾಯದ ಪ್ರತೀಕವಾಗಿದೆ.

ಎಡಬಿಡಂಗಿಯಾದ ಲೇಬರ್ ಪಕ್ಷ

ಎಡ ಪಕ್ಷಗಳು ಮಾಡಿದ ತಪ್ಪುಗಳು ನಾನು ಸೂಚಿಸಿರುವುದಕ್ಕಿಂತಲೂ ಘೋರವಾಗಿವೆ. ನಾನು ಬ್ರಿಟನ್ ಮತದಾರರ ಬಗ್ಗೆ ಪ್ರಸ್ತಾಪ ಮಾಡುವಾಗ ಇಲ್ಲಿಯವರೆಗೆ 'ಜನತೆ' ಎಂಬ ಪದ ಬಳಸಿದ್ದೇನೆ. ಆದರೆ, ಒಕ್ಕೂಟ–ವಿರೋಧಿ ಮತಗಳ ಅಧಿಕ ಪಾಲು ಬಂದದ್ದು ಇಂಗ್ಲಿಷ್ ಶ್ರಮಿಕ ವರ್ಗದಿಂದ ಎಂಬುದು ಸ್ಪಷ್ಟವಾಗಿದೆ. ಒಂದು ವರದಿಯ ಪ್ರಕಾರ, ಲೇಬರ್ ಪಕ್ಷದ ಪರವಾಗಿ ವೋಟು ಹಾಕುವವರ ಪೈಕಿ ಶೇ.63ರಷ್ಟು ಮಂದಿ ಒಕ್ಕೂಟದಲ್ಲಿ ಉಳಿಯುವುದರ ವಿರುದ್ಧ (ಅಂದರೆ, ಬ್ರೆಕ್ಸಿಟ್) ಮತ ಚಲಾಯಿಸಿದ್ದಾರೆ. ಲೇಬರ್ ಪಕ್ಷದ ಟೋನಿ ಬ್ಲೇರ್ ಪ್ರಧಾನ ಮಂತ್ರಿಯಾಗಿ ಜನಪರವಲ್ಲದ ನೀತಿಗಳನ್ನು ಅನುಸರಿಸಿದ ಬಳಿಕವೂ, ಈ ಹೊತ್ತಿಗೂ, ಆ ಪಕ್ಷಕ್ಕೆ ಮತ ಹಾಕುವವರಲ್ಲಿ ಕಾರ್ಮಿಕ ವರ್ಗದವರೇ ಬಹು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅಂದರೆ, ಇಂಗ್ಲಿಷ್ ಶ್ರಮಿಕ ವರ್ಗವು ಅಗಾಧ ಪ್ರಮಾಣದಲ್ಲಿ ಐರೋಪ್ಯ ಒಕ್ಕೂಟವನ್ನು ತಿರಸ್ಕರಿಸಿದೆ. ಅಂತಹ ಮನೋಭಾವದ ಬೆಂಬಲಿಗರಿಗೆ ಒಕ್ಕೂಟದಲ್ಲಿ ಉಳಿಯುವ ಪರ ಮತ ಹಾಕುವಂತೆ ಲೇಬರ್ ಪಕ್ಷ ಸಲಹೆ ಕೊಟ್ಟದ್ದು ಒಂದು ನೋವಿನ ಸಂಗತಿ. ಒಂದು ವರ್ಗ ಮತ್ತು ಅದನ್ನು ಪ್ರತಿನಿಧಿಸುವವರ ನಡುವೆ ಇದಕ್ಕಿಂತಲೂ ವ್ಯತಿರಿಕ್ತವಾದ ಬೇರ್ಪಡಿಕೆ ಇರುವುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಹಣಕಾಸು ಬಂಡವಾಳದ ವಿರುದ್ಧವಾಗಿ ವರ್ಗವು ಬಂಡಾಯ ಎದ್ದಾಗ, ಆ ವರ್ಗವನ್ನು ಮುನ್ನೆಡಸ ಬೇಕಾಗಿದ್ದವರು ಹಣಕಾಸು ಬಂಡವಾಳದ ಹಿಂದೆ ಹೋದರು.

ಹಣಕಾಸು ಬಂಡವಾಳದ ವಿರುದ್ಧವಾದ ಬಂಡಾಯ ಎಂದು ನಾನು ಹೇಳುವಾಗ, ಅದರ ಅರ್ಥ ಜರ್ಮನ್ ಹಣಕಾಸು ಬಂಡವಾಳ ಮಾತ್ರವಲ್ಲ, ಅದಕ್ಕಿಂತಲೂ ಮಿಗಿಲಾಗಿ ಬ್ರಿಟಿಷ್ ಹಣಕಾಸು ಬಂಡವಾಳದ ವಿರುದ್ಧದ ಬಂಡಾಯ ಎಂದಾಗುತ್ತದೆ. ಈ ವಿಷಯವನ್ನು ಬೇರೆ ರೀತಿಯಲ್ಲಿ ಹೇಳಬೇಕೆಂದರೆ, ಬ್ರೆಕ್ಸಿಟ್ ವಿರೋಧಿಸಿದ ಶಕ್ತಿ ಯಾವುದೆಂದರೆ ಅದು ಜಾಗತೀಕರಣಗೊಂಡ ಹಣಕಾಸು ಬಂಡವಾಳ. ಅದರ ರಾಷ್ಟ್ರೀಯ ಮೂಲ ಯಾವುದೇ ಇದ್ದರೂ ಅದು ಜಾಗತೀಕರಣಗೊಂಡ ಹಣಕಾಸು ಬಂಡವಾಳವೇ.

ಬ್ರೆಕ್ಸಿಟ್ ವಿರೋಧಿಸಿದ ಲಂಡನ್ ನಗರ

ಲಂಡನ್ ನಗರ ಯಾವಾಗಲೂ ನಿಷ್ಠಾಪೂರ್ವಕವಾಗಿ ಯೂರೋಪ್ ಪರವಾಗಿಯೇ ಇತ್ತು. ಏಕೆಂದರೆ, ಯೂರೋಪ್ ಖಂಡದ ಹಣಕಾಸು ಕೇಂದ್ರವಾಗಿರುವ ತನ್ನ ಸ್ಥಾನದಲ್ಲಿ ಕೂರಬೇಕೆಂಬ ಫ್ರಾಂಕ್‌ಫರ್ಟ್‌ನ ಹವಣಿಕೆಯನ್ನು ಅದು ಭಗ್ನಗೊಳಿಸಬೇಕಿತ್ತು. ಬ್ರಿಟನ್ ಒಕ್ಕೂಟದಿಂದ ದೂರ ಸರಿದರೆ ಮುಂದೆ ಆಗುವುದು ಅದೇ. ಬ್ರಿಟನ್ ಯೂರೋಪ್ ಮಾರುಕಟ್ಟೆಯನ್ನು ಪ್ರವೇಶಿಸುವಲ್ಲಿ ಲಂಡನ್ ನಗರ ಒಂದು ಪ್ರೋತ್ಸಾಹಕ ಪಾತ್ರ ವಹಿಸಿತ್ತು. ಒಬ್ಬ ಪ್ರಧಾನ ಮಂತ್ರಿಯಾಗಿ ಯುರೋಪ್ ವಿರೋಧಿ ಭಾವನೆಗಳನ್ನು ವ್ಯಕ್ತಪಡಿಸಿದ ಮಾರ್ಗರೆಟ್ ಥ್ಯಾಚರ್ ಅವರನ್ನು ತೊಲಗಿಸುವಲ್ಲಿಯೂ ಲಂಡನ್ ನಗರ ಮುಖ್ಯ ಪಾತ್ರ ವಹಿಸಿತ್ತು. ಈ ಜನಮತಗಣನೆಯಲ್ಲಿಯೂ ಲಂಡನ್ ನಗರ ಬ್ರೆಕ್ಸಿಟ್ ವಿರೋಧಿಸಿ ಹುರುಪಿನ ಪ್ರಚಾರ ಮಾಡಿತ್ತು. ಸ್ಕಾಟ್‌ಲ್ಯಾಂಡ್ ಮತ್ತು ಉತ್ತರ ಐರ್ಲೆಂಡ್ ಪ್ರದೇಶಗಳಲ್ಲಿ ಇಂಗ್ಲಿಷ್–ವಿರೋಧಿ ರಾಷ್ಟ್ರೀಯತೆಯ ಭಾವನೆಗಳಿಂದಾಗಿ ಅಲ್ಲಿನ ಜನರು ಐರೋಪ್ಯ ಒಕ್ಕೂಟದ ಪರ ವಾಲಿದರು. ಈ ಪರಿಸ್ಥಿತಿಯನ್ನೂ ಎಡಪಂಥ ತಪ್ಪಾಗಿ ಗ್ರಹಿಸಿತು. ಇಲ್ಲವಾದರೆ, ಎಡಪಂಥ ಅವರ ಆತಂಕಗಳನ್ನು ಶಮನಗೊಳಿಸಬಹುದಿತ್ತು. ಲಂಡನ್ ಮಾಜಿ ಮೇಯರ್ ಬೋರಿಸ್ ಜಾನ್ಸನ್ ಬ್ರೆಕ್ಸಿಟ್ ಪರ ಬಿರುಸಿನ ಪ್ರಚಾರ ನಡೆಸಿದರೂ, ಅದನ್ನು ಧಿಕ್ಕರಿಸಿ, ಒಕ್ಕೂಟದಲ್ಲಿ ಉಳಿಯಲು ಬೆಂಬಲಿಸಿದ ಒಂದೇ ಪ್ರದೇಶವೆಂದರೆ ಲಂಡನ್ ನಗರ. ಅದು ಒಕ್ಕೂಟ ಪರ ನಿಲ್ಲಲು ಸಾಧ್ಯವಾದದ್ದು ಅಲ್ಲಿ ನೆಲೆಸಿರುವ ಗಣನೀಯ ಸಂಖ್ಯೆಯ ವಲಸಿಗರ ಬ್ರೆಕ್ಸಿಟ್ ವಿರೋಧಿ ನಿಲುವು ಮತ್ತು ಬ್ರಿಟಿಷ್ ಹಣಕಾಸು ಬಂಡವಾಳದ ಬೆಂಬಲದಿಂದಾಗಿ.

ಬ್ರೆಕ್ಸಿಟ್‌ನ ನಿರ್ಣಾಯಕ ಪರಿಣಾಮಗಳು

ಬ್ರಿಟನ್ ಜನತೆಗೆ ಮುಂಬರುವ ದಿನಗಳಲ್ಲಿ ಅಪಾರ ಸಂಕಷ್ಟಗಳು ಎದುರಾಗಲು ಅನೇಕ ಕಾರಣಗಳಿವೆ. ಮೊದಲನೆಯದು, ಜಾಗತಿಕರಣಗೊಂಡ ಹಣಕಾಸು ಬಂಡವಾಳದ ಆಧಿಪತ್ಯದಿಂದ ಸಂಬಂಧ ಕಡಿದುಕೊಳ್ಳುವ ಸಂಕ್ರಮಣ ಕಾಲದಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಅವುಗಳಲ್ಲಿ, ಬಂಡವಾಳದ ಹೊರ ಹರಿವು, ಕರೆನ್ಸಿ ಕುಸಿತ, ಹದಗೆಡುವ ವಿದೇಶಿ ವ್ಯಾಪಾರದ ಶಿಲ್ಕು ಪಾವತಿ ಸಮಸ್ಯೆ ಮತ್ತು ಹಣದುಬ್ಬರದ ವೇಗೋತ್ಕರ್ಷ ಮುಖ್ಯವಾಗಿವೆ. ಈ ಎಲ್ಲ ಸಮಸ್ಯೆಗಳು ಜಾಗತೀಕರಣದಿಂದ ಸಂಬಂಧ ಕಡಿದುಕೊಳ್ಳಲು ಹೊರಟವರಿಗೂ ನೋವುಂಟುಮಾಡುತ್ತವೆ. ಒಂದು ಮುಕ್ತ ಅರ್ಥವ್ಯವಸ್ಥೆ ಹೊಂದಿರುವ ಬ್ರಿಟನ್‌ನಂತಹ ದೇಶದಲ್ಲಿ ಆ ನೋವು ಇನ್ನೂ ಹೆಚ್ಚಿರುತ್ತದೆ.

ಎರಡನೆಯದು, ಬ್ರೆಕ್ಸಿಟ್ ಜನಮತಗಣನೆಗಿಂತ ಮುಂಚೆಯೇ ಬ್ರಿಟನ್ ಕೆಲವು ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿತ್ತು. ಅದರ ಚಾಲ್ತಿ ಖಾತೆಯ ಕೊರತೆ ಆ ದೇಶದ ಜಿಡಿಪಿಯ ಶೇ.7ರಷ್ಟಿತ್ತು. ಪರಿಸ್ಥಿತಿ ಚೆನ್ನಾಗಿದ್ದಾಗಲೇ ಅಷ್ಟು ದೊಡ್ಡ ಮಟ್ಟದ ಕೊರತೆಯನ್ನು ತಾಳಿಕೊಳ್ಳುವುದು ಕಷ್ಟ. ಇನ್ನು ಹಣಕಾಸು ಬಂಡವಾಳವನ್ನು ಎದುರು ಹಾಕಿಕೊಂಡಿರುವಾಗ ಆ ಕಷ್ಟ ದ್ವಿಗುಣಗೊಳ್ಳುತ್ತದೆ.

ಮೂರನೆಯದು, ಹಣಕಾಸು ಬಂಡವಾಳವು ಬ್ರೆಕ್ಸಿಟ್ ಪರವಾದ ತೀರ್ಪನ್ನು ನಿರೀಕ್ಷಿಸಿರಲಿಲ್ಲ. ಹಾಗಾಗಿ, ಅದು ಬ್ರಿಟಿಷ್ ಜನತೆಯ ಜೀವನವನ್ನು ಯಾತನಾಮಯವಾಗಿ ಮಾಡುವುದಕ್ಕೆ ಏನು ಮಾಡಲೂ ಹೇಸುವುದಿಲ್ಲ. ಒಂದು ಕಾಳಗದಲ್ಲಿ ಸೋತಿರುವ ಹಣಕಾಸು ಬಂಡವಾಳವು ಅದರ ಇಚ್ಛೆಯನ್ನು ಉಲ್ಲಂಘಿಸಿರುವ ಜನರನ್ನು ಕುತಂತ್ರಗಳ ಮೂಲಕವಾದರೂ ಸರಿಯೇ ಶರಣಾಗತರಾಗುವಂತೆ ಮಾಡಿ ಮಹಾಯುದ್ಧ ಗೆಲ್ಲಲು ಪ್ರಯತ್ನಿಸುತ್ತದೆ.

ನಾಲ್ಕನೆಯದು, ಕಡು ಕಷ್ಟಗಳು ಎದುರಾಗುವ ಸಾಧ್ಯತೆಯ ಸಂದರ್ಭದಲ್ಲಿರುವ ಜನತೆ ಎಡ

ಪುಟ 14 ಕ್ಕೆ

ತ್ರಿವೇಣಿ ಏರೋನಾಟಿಕ್ಸ್ ಆಡಳಿತ ಮಂಡಳಿ ವಿರುದ್ಧ ಕಾರ್ಮಿಕರ ಪ್ರತಿಭಟನೆ

ತುಮಕೂರಿನ ತ್ರಿವೇಣಿ ಏರೋನಾಟಿಕ್ಸ್ ಪ್ರೈ. ಲಿ. ಕಾರ್ಮಿಕರನ್ನು ಖಾಯಂ ಮಾಡುವ ಭರವಸೆಯನ್ನು ನೀಡಿ ಕೆಲಸಕ್ಕೆ ತೆಗೆದುಕೊಂಡು 2 ವರ್ಷಗಳ ಕಾಲ ದುಡಿಸಿಕೊಂಡು ಈಗ ಏಕಾ ಏಕಿ ಕೆಲಸದಿಂದ ತೆಗೆದಿರುವ ಕ್ರಮವನ್ನು ಖಂಡಿಸಿ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವಂತೆ ಆಗ್ರಹಿಸಿ ಆಡಳಿತ ಮಂಡಳಿಯ ಕ್ರಮವನ್ನು ಖಂಡಿಸಿ ಜುಲೈ 5ರಂದು ಕಾರ್ಮಿಕರು ಪ್ರತಿಭಟನೆ ನಡೆಸಿದರು.

ಕಾರ್ಖಾನೆಯಿಂದ ಜಿಲ್ಲಾಧಿಕಾರಿಗಳ ಕಛೇರಿವರೆಗೆ ಮೆರವಣಿಗೆಯಲ್ಲಿ ಬಂದ ಕಾರ್ಮಿಕರು ತುಮಕೂರು ನಗರದ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ತ್ರೀವೇಣಿ ಏರೋನಾಟಿಕ್ಸ್ ಪ್ರೈ.ಲಿ ಕಾರ್ಖಾನೆಯು ಕಳೆದ 7–8 ವರ್ಷಗಳಿಂದ ನಿರಂತರವಾಗಿ ನಡೆ–ಯುತ್ತಾ ಬಂದಿದೆ, ಏರೋನಾಟಿಕ್ಸ್ ಉದ್ಯಮದಲ್ಲಿ ಸಾಕಷ್ಟು ಉತ್ತಮ ಹೆಸರು ಮಾಡಿರುವ ತ್ರೀವೇಣಿ ಏರೋನಾಟಿಕ್ಸ್, ತುಮಕೂರು ಪಟ್ಟಣದಲ್ಲಿ ತನ್ನ ಉತ್ಪಾದನಾ ಘಟಕಗಳನ್ನು ಹೊಂದಿದೆ. ತುಮಕೂರು ಘಟಕದಲ್ಲಿ 160 ಜನರು ಕೆಲಸ ನಿರ್ವಹಿಸುತ್ತಿದ್ದಾರೆ. ಅನುಭವವಿರುವ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಖಾಯಂ ಮಾಡುತ್ತೇವೆ ಎಂದು ಹೇಳಿ ಕೆಲಸಕ್ಕೆ ತೆಗೆದುಕೊಂಡು ಈಗ ಏಕಾಏಕಿ ಕೆಲಸದಿಂದ ತೆಗದು ಹಾಕಲಾಗಿದೆ. ಕಾರ್ಮಿಕರಿಗೆ ಜಿಲ್ಲಾಡಳಿತ ಮತ್ತು ಕಾರ್ಮಿಕ ಇಲಾಖೆ ನ್ಯಾಯ ಒದಗಿಸಿಕೊಡಬೇಕೆಂದು ಒತ್ತಾಯಿಸಿದರು.



ಟ್ರೈನಿಗಳಿಗೆ ಸಂದರ್ಶನದ ವೇಳೆ 2, 3, 4 ವರ್ಷ ಅನುಭವ ಹೊಂದಿರುವ ನುರಿತ ಕಾರ್ಮಿಕರನ್ನು ಮತ್ತೆ ಟ್ರೈನಿಗಳಾಗಿ ನೇಮಿಸಿಕೊಳ್ಳಲಾಗಿತ್ತು. ತರಬೇತಿ ಹಾಗೂ ಪ್ರೊಬೇಷನರಿ ಅವಧಿಯಲ್ಲಿ ಸಹ ಟ್ರೈನಿಗಳಿಂದ ಉತ್ಪಾದನೆ ತೆಗಿಸಿಕೊಳ್ಳಲಾಗಿದೆ. ಆದರೂ ಜೂನ್ 30ರಂದು ಯಾವುದೇ ಮುನ್ಸೂಚನೆ ನೀಡದೆ ಕೆಲಸದಿಂದ ತೆಗೆದು ಹಾಕಲಾಗಿದೆ.

ಇದು ನ್ಯಾಯಸಮ್ಮತವಲ್ಲ ಎಂದಾಗ "ನಾಳೆಯಿಂದ ಯಾರು ಕೆಲಸಕ್ಕೆ ಬೇಡ ನಾವು ಒಂದು ತಿಂಗಳ ನಂತರ ಹೊಸದಾಗಿ ಟ್ರೈನಿಗಳನ್ನು ತೆಗೆದು ಕೊಳ್ಳುತ್ತೀವಿ ನೀವೆ ಹೊಸದಾಗಿ ಬನ್ನಿ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ" ಎಂದಿದ್ದಾರೆ. ದಿನ್ನು ಕಾರ್ಮಿಕರು ಪ್ರತಿಭಟಿಸುತ್ತಿದ್ದಾರೆ. ಟ್ರೈನಿಗಳ ಹೆಸರಿನಲ್ಲಿ ನೇಮಿಸಿಕೊಂಡು ಶೋಷಣೆ ಮುಂದುವರಿಸಲು ಅವಕಾಶ ನೀಡದೆ ಹೊರಗಿರುವ ಎಲ್ಲಾ ಕಾರ್ಮಿಕರನ್ನು ಸೇವೆಗಳಲ್ಲಿ ಖಾಯಂಗೊಳಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ.

ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ ಸೈಯದ್ ಮುಜೀಬ್, ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, ಕಟ್ಟಡ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಬಿ.ಉಮೇಶ್, ಕೆ.ಪಿ.ಆರ್.ಎಸ್‌ನ ಆರ್. ಎಸ್.ಚನ್ನಬಸಣ್ಣ, ಕೊಳಗೇರಿ ನಿವಾಸಿಗಳ ಸಂಘದ ಅಧ್ಯಕ್ಷ ಎ. ನರಸಿಂಹಮೂರ್ತಿ, ಮಾತನಾಡಿದರು. ಡಿ.ವೈ.ಎಫ್.ಐನ ಎಸ್. ರಾಘವೇಂದ್ರ, ಸಂಘದ ಅಧ್ಯಕ್ಷ ಸಂದೀಪ್.ಎಸ್. ಕಾರ್ಯದರ್ಶಿ ಸಿದ್ದಾರ್ಥ. ಕೆ.ಎನ್, ಸೋಮಶೇಖರ್, ಮಹೇಶ್, ದರ್ಶನ್, ಮಧು, ಜಯರಾಮ್, ಪುನಿತ್ ಮುಂತಾದವರು ನೇತೃತ್ವ ವಹಿಸಿದ್ದರು.

ಉ.ಕ.: ದುಡಿಯುವ ಮಹಿಳೆಯರ ಸಮಾವೇಶ

ದುಡಿಯುವ ಮಹಿಳೆಯರ ಸಮನ್ವಯ ಸಮಿತಿ (ಸಿಐಟಿಯು) ಉತ್ತರ ಕನ್ನಡ ಜಿಲ್ಲಾ 6ನೇ ಸಮಾವೇಶವು ಕುಮಟಾದಲ್ಲಿ ಜರುಗಿತು. ಸಿಐಟಿಯು ರಾಜ್ಯ ಕಾರ್ಯದರ್ಶಿ ಮಾಲಿನಿ ಮೇಸ್ತ ಉದ್ಘಾಟಿಸಿದರು. ಅತಿಥಿಗಳಾಗಿ ಕೆಪಿಆರ್‌ಎಸ್ ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಕಟ್ಟಡ ಕಾರ್ಮಿಕರ ಜಿಲ್ಲಾ ಅಧ್ಯಕ್ಷ ತಿಲಕ ಗೌಡ, ಮೀನಾ ಮಾಸ್ತಿ, ಹಮಾಲಿ ಕಾರ್ಮಿಕರ ಸಂಘದ ಗೀತಾ ಚಕ್ರಸಾಲಿ, ಗುತ್ತಿಗೆ ಪೌರ ಕಾರ್ಮಿಕರ ಕಾರ್ಯದರ್ಶಿ ನಾಗಪ್ಪ ನಾಯ್ಕ ಮಾತನಾಡಿದರು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಜಿಲ್ಲಾ ಸಂಚಾಲಕರಾದ ಯಮುನಾ ಗಾಂವ್ಕರ್ ಮಂಡಿಸಿದ ಕರಡು ವರದಿ ಆಧಾರದಲ್ಲಿ ವಿಭಿನ್ನ ವಿಭಾಗದ ಮಹಿಳಾ ಕಾರ್ಮಿಕರು ತಮ್ಮ ಅನುಭವ ಹಂಚಿಕೊಂಡರು. ಸಿಐಟಿಯು ಜಿಲ್ಲಾ ಖಜಾಂಚಿ ಸಿ.ಆರ್. ಶಾನಭಾಗ್ ಸಮಾರೋಪ ಭಾಷಣ ಮಾತನಾಡಿದರು. ಮಂಗಲಾ ಸ್ವಾಗತಿಸಿದರೆ ಗಂಗಾರವರು ವಂದನಾರ್ಪಣೆ ಮಾಡಿದರು. ಭಟ್ಕಳದ ಗೀತಾ ಅಧ್ಯಕ್ಷತೆ ವಹಿಸಿದ್ದರು. ನೂತನ ಸಂಚಾಲನ ಸಮಿತಿಗೆ ಗಂಗಾ ನಾಯ್ಕ ಸಂಚಾಲಕರಾಗಿ ಆಯ್ಕೆಯಾದರು.

ಎಸ್.ಎಫ್.ಐ. ಸಂಘಟನೆ ಗಣೇಶ, ವಕೀಲರಾದ ಮಮತಾ, ಬ್ಯಾಂಕ್ ನೌಕರ ಸಂಘದ ಮುಖಂಡರಾದ ಜ್ಯೋತಿ ಶುಭಕೋರಿದರು.



ಬ್ರಿಟಿಶ್ ಜನತೆಗೆ ಬಿಡುಗಡೆ.....

ಪುಟ 12 ರಿಂದ

ವರ್ಗದ ಪಕ್ಷಗಳು, ಕಾರ್ಪೊರೇಟ್ ಮಾಧ್ಯಮ ಮತ್ತು ಹಣಕಾಸು ಬಂಡವಾಳಶಾಹಿಗಳು ನಡೆಸಿದ ಪ್ರಬಲ ಪ್ರಚಾರವನ್ನು ಪ್ರತಿರೋಧಿಸಿ ಜನತೆ ತೆಗೆದುಕೊಂಡ ಪ್ರಜಾಸತ್ತಾತ್ಮಕ ತೀರ್ಮಾನವಿದು. ಬ್ರಿಟನ್ ಇಯುನಿಂದ ಹೊರಹೋದರೆ ಬ್ರಿಟನ್ ಹೇಗೆ ಮುಳುಗಿ ಹೋಗುತ್ತದೆ ಎಂದು ಭಯ ಹುಟ್ಟಿಸುವ ರೀತಿಯಲ್ಲಿ ಅವರು ಪ್ರಚಾರ ನಡೆಸಿದ್ದರು.

ಏನೇ ಇದ್ದರೂ, ಬ್ರಿಟನ್‌ನಲ್ಲಿನ ಈಗಿನ ಶಕ್ತಿಗಳ ಬಲಾಬಲವನ್ನು ಪರಿಗಣಿಸಿದರೆ ಬಲಪಂಥೀಯರೇ ಅಲ್ಪಾವಧಿಯಲ್ಲಿ ಲಾಭ ಪಡೆಯುತ್ತಾರೆ ಎನ್ನುವುದು ಸತ್ಯವೇ. ಕ್ಯಾಮರೂನ್ ಉತ್ತರಾಧಿಕಾರಿಯಾಗಲಿರುವ ಪ್ರಧಾನಿ ಹೆಚ್ಚು ಬಲಪಂಥೀಯವಾಗಿರುವ ಸರಕಾರದ ನೇತೃತ್ವ ವಹಿಸಲಿದ್ದಾರೆ. ಇನ್ನೊಂದೆಡೆ, ಲೇಬರ್ ಪಕ್ಷದ ಒಳಗಡೆ, ಲೇಬರ್ ಪಕ್ಷದ ನಾಯಕತ್ವ ಸ್ಥಾನದಿಂದ ಕೊರ್ಬಿನ್‌ರನ್ನು ತೆಗೆದುಹಾಕಲು ಗಂಭೀರ ಪ್ರಯತ್ನಗಳು ನಡೆಯುತ್ತಿವೆ. ಕಳೆದ ಮೂರು ದಶಕಗಳಲ್ಲಿ ಕ್ರಮೇಣವಾಗಿ ಬಲದತ್ತ ವಾಲಿದ ಲೇಬರ್ ಪಕ್ಷ, ಕಳೆದ ವರ್ಷ ಎಡ ಅಜೆಂಡಾದೊಂದಿಗೆ ಜೆರೆಮಿ ಕೊರ್ಬಿನ್‌ರನ್ನು ತನ್ನ ನಾಯಕನನ್ನಾಗಿ ಕಳೆದ ವರ್ಷ ಆಯ್ಕೆ ಮಾಡಿತ್ತು. ಲೇಬರ್ ಪಕ್ಷದ ಒಳಗಡೆಯೇ ಇರುವ ಬಲಪಂಥೀಯ ಶಕ್ತಿಗಳು ಕೊರ್ಬಿನ್‌ರನ್ನು ಪದಚ್ಯುತಗೊಳಿಸಲು ಮೊದಲಿನಿಂದಲೂ ಹೊಂಚು ಹಾಕುತ್ತಿದ್ದವು. ಇದು ಈಗ ನಾಯಕತ್ವಕ್ಕಾಗಿ ಪಕ್ಷದೊಳಗೆ ತೀವ್ರ ಆಂತರಿಕ ಕಚ್ಚಾಟಕ್ಕೆ ಕಾರಣವಾಗಲಿದೆ.

ರೈಲ್ವೆಯ ಮರು–ರಾಷ್ಟ್ರೀಕರಣ ಮತ್ತು ಆರ್ಥಿಕತೆಯ ಪ್ರಮುಖ ಕ್ಷೇತ್ರಗಳ ಮೇಲೆ ಸಾಮಾಜಿಕ ನಿಯಂತ್ರಣ ಸಾಧಿಸುವುದು ಇವೇ ಮೊದಲಾದ ಕಾರ್ಯಕ್ರಮಗಳುಳ್ಳ ಜೆರೆಮಿ ಕೊರ್ಬಿನ್ ಆರಂಭಿಸಿದ ಎಡ ಅಜೆಂಡಾವನ್ನು ಮುಂದಕ್ಕೊಯ್ಯುವುದು ಈ ಕ್ಷಣದ ಅಗತ್ಯವಾಗಿದೆ. ಈ ಅಜೆಂಡಾವು ಜನರಿಗೆ ಆದ್ಯತೆ ನೀಡುವ ನೀತಿಯನ್ನು ಮುನ್ನೆಲೆಗೆ ತರುತ್ತದೆ, ಹಣಕಾಸು ಬಂಡವಾಳದ ಹಿತವನ್ನಲ್ಲ.

ಇಂಥ ಎಡ ಕಾರ್ಯಕ್ರಮದ ಅಜೆಂಡಾವನ್ನು ಮುಂದಕ್ಕೆ ಕೊಂಡೊಯ್ಯುವುದರಿಂದ ಮತ್ತು ಅದರ ಸುತ್ತ ಜನರನ್ನು ಅಣಿನೆರೆಯಿಸುವುದರಿಂದ ಮಾತ್ರವೇ ತೀವ್ರ ಬಲಪಂಥೀಯರ ಜನಾಂಗವಾದ ಮತ್ತು ವಲಸಿಗ–ವಿರೋಧಿ ಪ್ರಚಾರವನ್ನು ಎದುರಿಸಬಹುದಾಗಿದೆ. ಯುರೋಪಿಯನ್ ಒಕ್ಕೂಟದ ಸಂಕೋಲೆಯನ್ನು ಈಗ ಕಡಿದು ಹಾಕಿರುವುದರಿಂದ ಪರ್ಯಾಯ ಅಜೆಂಡಾಕ್ಕಾಗಿನ ಹೋರಾಟವನ್ನು ಮುಂದಕ್ಕೊಯ್ಯಬಹುದಾಗಿದೆ ಎಂದು ಒತ್ತಿಹೇಳಬೇಕಾಗುತ್ತದೆ.

ಬ್ರೆಕ್ಸಿಟ್ ಮೂಲಕ ಬ್ರಿಟಿಷ್ ಜನರು ತಮ್ಮ ಹಕ್ಕುಗಳು ಮತ್ತು ಪ್ರಜಾಸತ್ತಾತ್ಮಕ ಆಯ್ಕೆಯನ್ನು ಮರಳಿ ಪಡೆಯುವತ್ತ ಹೆಜ್ಜೆಯಿಟ್ಟಿದ್ದಾರೆ. ಒಂದು ನ್ಯಾಯಸಮ್ಮತ ಹಾಗೂ ಸಮಾನತೆಯ ಸಮಾಜ ರಚನೆಗಾಗಿ ಅವರು ದೀರ್ಘ ಹಾದಿಯನ್ನು ಸವೆಸಬೇಕಾಗಿದೆ, ಮತ್ತು ಕಠಿಣ ಹೋರಾಟಗಳನ್ನು ಎದುರಿಸಬೇಕಾಗಿದೆ.

ಅನುವಾದ: ವಿಶ್ವ

ÉaeQmi



ಜಾಗತೀಕರಣದ ವಿರುದ್ಧ ಬಂಡಾಯ.....

ಪುಟ 13 ರಿಂದ

ಶಕ್ತಿಗಳ ನಾಯಕತ್ವ ಕಳೆದುಕೊಂಡ ಅನಾಥ ಭಾವದಲ್ಲಿದ್ದಾರೆ. ಹಣಕಾಸು ಬಂಡವಾಳದ ವಿರುದ್ಧ ಹೋರಾಟದ ನಾಯಕತ್ವ ವಹಿಸಲು, ಇಂಡಿಪೆಂಡೆಂಟ್ ಪಕ್ಷದ ನಿಗೆಲ್ ಫರಾಜ್ ಮತ್ತು ಟೋರಿ ಪಕ್ಷದ ಬೋರಿಸ್ ಜಾನ್ಸನ್ ಥರದವರು ಏನೇನೂ ಅಲ್ಲದ ಅಸಮರ್ಥರು. ಎಲ್ಲ ಫ್ಯಾಸಿಸ್ಟ್‌ರಂತೆ ಇವರೂ ಹಣಕಾಸು ಬಂಡವಾಳದಿಂದ ಓಲೈಕೆಯ ನಿರೀಕ್ಷೆಯಲ್ಲಿದ್ದಾರೆ. ಜನತೆಯ ಹಿತ ರಕ್ಷಣೆ ಮಾಡುವ ದೃಷ್ಟಿ ಇರುವುದು ಎಡ ಶಕ್ತಿಗಳಿಗೆ ಮಾತ್ರ. ಆದರೆ, ಅವರು ಜನರನ್ನು ತೊರೆಯುವ ಅಯ್ಕೆ ಮಾಡಿಕೊಂಡಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಬ್ರಿಟಿಷ್ ಜನತೆಯು ಒಂದು ಸಂಕಷ್ಟದ ಪರಿಸ್ಥಿತಿಯಲ್ಲಿ ಹಣಕಾಸು ಬಂಡವಾಳದ ಎದುರು ವರ್ಗ ಹೋರಾಟದಲ್ಲಿ ತೊಡಗಿರುವಾಗ ಅವರ ಸಾಂಪ್ರದಾಯಿಕ ನಾಯಕತ್ವವು ಅವರನ್ನು ತೊರೆದಿದೆ.

ಲೇಬರ್ ಪಕ್ಷವು ತನ್ನ ತಪ್ಪುಗಳನ್ನು ತಿದ್ದಿಕೊಳ್ಳದ ಹೊರತು ಮತ್ತು ತನ್ನ ತಳ ಮಟ್ಟದ ಬೆಂಬಲಿಗರ ಧ್ವನಿ ಆಲಿಸಿಕೊಳ್ಳುವುದನ್ನು ಮತ್ತು ಗೌರವಿಸುವುದನ್ನು ಕಲಿಯದ ಹೊರತು, ಹಣಕಾಸು ಬಂಡವಾಳದ ಎದುರು ಆರಂಭಿಸಿರುವ ಹೋರಾಟವನ್ನು ಜನರು ಮುಂದುವರೆಸುವುದು ಕಷ್ಟವಾಗುತ್ತದೆ. ಲೇಬರ್ ಪಕ್ಷವು ಜನಮತಗಣನೆಯ ತೀರ್ಪನ್ನು ಜಾರಿ ಮಾಡುವ ಪ್ರತಿಜ್ಞೆ ಮಾಡಬೇಕು. ಹೊಸ ಚುನಾವಣೆ ನಡೆಸುವಂತೆ ಕೇಳಬೇಕು ಮತ್ತು ವಿಶ್ವಾಸಾರ್ಹವಾದ ಹೊಸದೊಂದು ಕಾರ್ಯಕ್ರಮದೊಂದಿಗೆ ಜನರ ಹತ್ತಿರ ಹೋಗಬೇಕು. 'ಮಿತವ್ಯಯ' ನೀತಿಯನ್ನು ಕೊನೆಗೊಳಿಸುವ ಮತ್ತು ಸ್ಪೇನ್‌ನಲ್ಲಿ ಅಧಿಕಾರ ಪಡೆಯಲು ಹತ್ತಿರದಲ್ಲಿರುವ 'ಪೊಡೆಮಾಸ್' ನಂತಹ ಯೂರೋಪಿನ ಇತರ ಎಡ ಶಕ್ತಿಗಳ ಜೊತೆ ಸಖ್ಯ ಬೆಸೆಯುವ ಅಂಶಗಳು ಕಾರ್ಯಕ್ರಮದಲ್ಲಿ ಸೇರಿಕೊಳ್ಳಬೇಕು. ಮಿತವ್ಯಯ ನೀತಿಯನ್ನು ಕೈ ಬಿಟ್ಟು, ತುರ್ತಾಗಿ, ಚಾಲ್ತಿ ಖಾತೆಯ ಕೊರತೆಗೆ ಹಣ ಹೊಂದಿಸಿಕೊಳ್ಳಲು ಏರ್ಪಾಡು ಮಾಡಬೇಕು.

ಹೆಣಿಗೆಯ ಎಳೆಗಳು ಬಿಡಿಸಿಕೊಳ್ಳುತ್ತಿವೆ

ಬ್ರೆಕ್ಸಿಟ್ ಪರಿಣಾಮವಾಗಿ ಮುಂದೆ ಬ್ರಿಟನ್‌ನಲ್ಲಿ ಏನಾಗುತ್ತದೆ ಎಂಬುದಕ್ಕಿಂತಲೂ ಮುಖ್ಯವಾದ ಎರಡು ಪರಿಣಾಮಗಳು ಬಂಡವಾಳಶಾಹಿ ಜಗತ್ತನ್ನು ತಟ್ಟುತ್ತವೆ.

ಮೊದಲನೆಯದು, ಈಗಾಗಲೇ ಬಿಕ್ಕಟ್ಟಿನಿಂದ ನರಳುತ್ತಿರುವ ಜಾಗತಿಕ ಬಂಡವಾಳಶಾಹಿಯ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳ್ಳುತ್ತದೆ. ಆ ಬಿಕ್ಕಟ್ಟಿನ ವಿರುದ್ಧ ಜನಮತಗಣನೆಯ ತೀರ್ಪಿನ ರೂಪದಲ್ಲಿ ವ್ಯಕ್ತವಾದ ಬಂಡಾಯವು ಬಂಡವಾಳಿಗರ ಮನೋಸ್ಥೈರ್ಯವನ್ನು ಕುಗ್ಗಿಸುತ್ತದೆ ಮತ್ತು ಬಂಡವಾಳಶಾಹಿಯು ಬಿಕ್ಕಟ್ಟಿನಿಂದ ಚೇತರಿಸಿಕೊಳ್ಳುತ್ತಿದೆ ಎಂಬ ಬೊಗಳೆ ಮಾತುಗಳನ್ನು ಹುಸಿಗೊಳಿಸುತ್ತದೆ.

ಎರಡನೆಯದು, ಇದೇ ವಿಷಯವು ಬೇರೆ ದೇಶಗಳು ಬ್ರಿಟನ್ ಉದಾಹರಣೆಯನ್ನು ಅನುಸರಿಸುವಂತೆ ಪ್ರೋತ್ಸಾಹಿಸುತ್ತದೆ. ಆಗ, ಹಣಕಾಸು ಬಂಡವಾಳದ ಹಿಡಿತದಿಂದ ಕಳಚಿಕೊಳ್ಳುತ್ತಿರುವ ಬ್ರಿಟನ್ ಎದುರಿಸುವ ಸಂಕ್ರಮಣ ಕಾಲದ ಕಷ್ಟ ಕಾರ್ಪಣ್ಯಗಳು ಎಷ್ಟು ಬಿರುಸಾಗಿದ್ದರೂ ಅದು ಅವರಿಗೆ ಗೌಣವಾಗುತ್ತವೆ. ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡು ಅಲ್ಲೇ ಒದ್ದಾಡುತ್ತಾ ಉಳಿಯುವ ಪರಿಸ್ಥಿತಿ ಇನ್ನು ಮುಂದೆ ಶ್ರಮಿಕರಿಗೆ ಒಪ್ಪಿಗೆಯಾಗದು. ಕಣಜದ ಗೂಡಿಗೆ ಒಮ್ಮೆ ಕಲ್ಲು ಬೀಸಿದನಂತರ ಹಿಂದಿನ ಸ್ಥಿತಿಗೆ ಮರಳುವುದು ಅಸಾಧ್ಯ. ಇಷ್ಟು ದಿನವೂ ಒಂದು ಹೆಣಿಗೆಯ ರೂಪದಲ್ಲಿ ಇಡೀ ಜಗತ್ತನ್ನೇ ಆವರಿಸಿದ್ದ ಜಾಗತೀಕರಣದ ಎಳೆಗಳನ್ನು ಬಿಡಿಸುತ್ತಿರುವ ವಿದ್ಯಮಾನವನ್ನು ನಾವೀಗ ಕಣ್ಣಾರೆ ಕಾಣುತ್ತಿದ್ದೇವೆ.

(ಭಾವಾನುವಾದ: ಕೆ.ಎಂ ನಾಗರಾಜ್)

ಕೊವ್ವಡದಲ್ಲಿ ಅಣು ಸ್ಥಾವರಕ್ಕೆ ವಿರೋಧ– ಜುಲೈ 17ರಂದು ರಾಷ್ಟ್ರೀಯ ಮಟ್ಟದ ಸಭೆ

ಇತ್ತೀಚೆಗೆ ಪ್ರಧಾನ ಮಂತ್ರಿಗಳ ಅಮೆರಿಕಾ ಭೇಟಿಯ ವೇಳೆಯಲ್ಲಿ ಅಮೆರಿಕನ್ ಆಳರಸರನ್ನು ಮೆಚ್ಚಿಸಲು ಅಲ್ಲಿಯ ಆರ್ಡರ್ ಇಲ್ಲದೆ ಕೂತಿರುವ ವೆಸ್ಟಿಂಗ್‌ಹೌಸ್ ಕಂಪನಿಗೆ ಆರು ಪರಮಾಣು ರಿಯಾಕ್ಟರುಗಳನ್ನು ನಿರ್ಮಿಸಲು 2.8ಲಕ್ಷ ಕೋಟಿ ರೂ.ಗಳ ಆರ್ಡರ್ ಕೊಡುವ ಭರವಸೆ ನೀಡಲಾಯಿತು. ಈ ಸ್ಥಾವರ ಗುಜರಾತಿನಲ್ಲಿ ಬರಬೇಕಾಗಿತ್ತು. ಅದನ್ನು ನಂತರ ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಕೊವ್ವಡಕ್ಕೆ ವರ್ಗಾಯಿಸಲಾಗಿದೆ.

ಇದನ್ನು ವಿರೋಧಿಸಿ ಅಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಕಳೆದ ವಾರ ಒಂದು ಸರ್ವಜನಿಕ ಸಭೆಯನ್ನು ನಡೆಸಲಾಯಿತು. ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನರಸಿಂಗರಾವ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಪರಮಾಣು ವಿದ್ಯುತ್ ನಿಗಮ (ಎನ್‌ಪಿಸಿಐಎಲ್) ಇದಕ್ಕೆ ಅಣು ವಿದ್ಯತ್ ನಿಯಂತ್ರಣ ಮಂಡಳಿಗೆ ಅರ್ಜಿಯನ್ನೂ ಹಾಕಿಲ್ಲ ಎಂಬ ಸಂಗತಿ ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ತಿಳಿದು ಬಂದಿದ್ದು, ಸಿಪಿಐ(ಎಂ) ಈ ಪ್ರಶ್ನೆಯನ್ನೂ ಎತ್ತಿತ್ತು.

ಗುಜರಾತನಿಂದ ಇಲ್ಲಿಗೆ ವರ್ಗಾಯಿಸಲ್ಪಟ್ಟಿರುವ ಈ ಸ್ಥಾವರ ಸಾವಿರಾರು ಮಂದಿಯನ್ನು ನಿರ್ವಸಿತರನ್ನಾಗಿ ಮಾಡುತ್ತದಲ್ಲದೆ ಪರಿಸರಕ್ಕೆ ಹಾನಿಯುಂಟು ಮಾಡುತ್ತದೆ ಎಂಬುದೇ ಈ ಪ್ರತಿಭಟನೆಗೆ ಮುಖ್ಯ ಕಾರಣ.

ಜಗತ್ತು ಪರಮಾಣು ವಿದ್ಯುತ್ತನ್ನು ಬಿಟ್ಟು ಬೇರೆ ದಾರಿ ಹುಡುಕುತ್ತಿರುವಾಗ ಇಲ್ಲಿ ಈ ಪರಮಾಣು ಸ್ಥಾವರಕ್ಕೆ ಸಿದ್ಧತೆ ನಡೆಸಿರುವುದು ಒಂದು ಪ್ರತಿಗಾಮಿ ಕ್ರಮ, ಇದು ರಾಜ್ಯದ ವಿದ್ಯುತ್ ಅಗತ್ಯಗಳನ್ನೂ ಈಡೇರಿಸುವುದಿಲ್ಲ, ಭದ್ರತೆಯ ಆತಂಕಗಳನ್ನೂ ನಿವಾರಿಸುವದಿಲ್ಲ, ಇದು ಭಾರೀ ವೆಚ್ಚದ ಯೋಜನೆಯಾಗಿದ್ದು ರಾಜ್ಯದ ವಿದ್ಯುತ್ ಅಗತ್ಯಗಳನ್ನು ಪೂರೈಸಲು ಬೇರೆ ದಾರಿಗಳಿವೆ, ಸೌರ ವಿದ್ಯುತ್ ಉತ್ಪಾದನೆಗೆ ಬಹಳಷ್ಟು ಅವಕಾಶಗಳಿವೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಬಿ.ವಿ.ರಾಘವುಲು ಜುಲೈ 17ರಂದು ಇದರ ವಿರುದ್ಧ ವಿಶಾಖಪಟ್ಟಣದಲ್ಲಿ ಒಂದು ರಾಷ್ಟ್ರೀಯ ಸಭೆಯನ್ನು ಸಿಪಿಐ(ಎಂ) ಏರ್ಪಡಿಸುತ್ತಿದೆ ಎಂದಿದ್ದಾರೆ. ಇದರಲ್ಲಿ ಸಿಪಿಐ(ಎಂ) ಮುಖಂಡರಾದ ಪ್ರಕಾಶ ಕಾರಟ್, ಅಣು ವಿದ್ಯುತ್ ನಿಯಂತ್ರಣ ಮಂಡಳಿಯ ಮಾಜಿ ಅಧ್ಯಕ್ಷ ಗೋಪಾಲಕೃಷ್ಣನ್ ಮತ್ತು ಮಾಜಿ ಕೇಂದ್ರ ವಿದ್ಯುತ್ ಕಾರ್ಯದರ್ಶಿ ಇಎಎಸ್ ಶರ್ಮ ಭಾಗವಹಿಸುವ ನಿರೀಕ್ಷೆ ಇದೆ.

ಈ ಹಿಂದೆ 2011ರಲ್ಲಿ ಕೊವ್ವಡಕ್ಕೆ ಭೇಟಿ ನೀಡಿದ್ದ ಈಗಿನ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಜನತೆಯ ವಿರೋಧಕ್ಕೆ ಸೌಹಾರ್ದವನ್ನು ವ್ಯಕ್ತಪಡಿಸುತ್ತ ಇದಕ್ಕೆ ಅವಕಾಶ ಕೊಡುವದಿಲ್ಲ ಎಂದು ಸಾರಿದ್ದರು. ಆದರೆ ಈಗ ಅವರ ನಿಲುವು ತದ್ವಿರುದ್ಧವಾಗಿದೆ.





ಎಸ್ಮಾಕ್ಕೆ ಜಗ್ಗದೆ ಹರ್ಯಾಣ ವಿದ್ಯುತ್ ನೌಕರರ ಯಶಸ್ವಿ ಮುಷ್ಕರ

ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸುವಲ್ಲಿ ಹರ್ಯಾಣ ಬಿಜೆಪಿಯ ಮಾದರಿ ರಾಜ್ಯವಾಗಿ ಮೂಡಿಬರುತ್ತಿದೆ. ಆದರೆ ಜೂನ್ 29 ಮತ್ತು 30ರಂದು ವಿದ್ಯುತ್ ಸಬ್‌ಡಿವಿಶನ್‌ಗಳ ಖಾಸಗೀಕರಣದ ವಿರುದ್ಧ ಅಲ್ಲಿನ ವಿದ್ಯುತ್‌ಚ್ಛಕ್ತಿ ನೌಕರರ ಯಶಸ್ವಿ ಮುಷ್ಕರ ಅದಕ್ಕೆ ಈಗ ತಡೆಯೊಡ್ಡಿದೆ.

ಈ ಮುಷ್ಕರವನ್ನು ಮುರಿಯಲು ರಾಜ್ಯ ಸರಕಾರ ಎಸ್ಮಾವನ್ನೂ ಬಳಸಿತು. ಇತರ ಹಲವು ಅಸ್ತ್ರಗಳನ್ನು ಪ್ರಯೋಗಿಸಿತು. ಆದರೂ 80ಶೇ. ನೌಕರರು ಇದರಲ್ಲಿ ಭಾಗವಹಿಸಿ ರಾಜ್ಯ ಸರಕಾರ ಮಾತುಕತೆಗೆ ಕರೆಯುವಂತೆ ಮಾಡಿದ್ದಾರೆ. ಇದಕ್ಕೆ ಅವರನ್ನು ಅಭಿನಂದಿಸಿರುವ ಭಾರತ ವಿದ್ಯುತ್ ನೌಕರರ ಒಕ್ಕೂಟ(ಇಇಎಫ್ಐ) ಇದಕ್ಕೆ ಬೆಂಬಲ ನೀಡಿದ, ಕಾರ್ಮಿಕ ಹಕ್ಕುಗಳನ್ನು ಎತ್ತಿ ಹಿಡಿಯಲು ನೆರವಾಗಿರುವ ಹರ್ಯಾಣದ ಜನತೆ ಹಾಗೂ ಕಾರ್ಮಿಕ ವರ್ಗಕ್ಕೆ ಕೃತಜ್ಞತೆ ಸಲ್ಲಿಸಿದೆ.

ಝಾರ್ಖಂಡ್: ಸಿಪಿಐ(ಎಂ) ಮುಖಂಡರ ವಿರುದ್ಧ ರಾಜಕೀಯ ಪಿತೂರಿ

ಜುಲೈ 5 ರಂದು ರಾಂಚಿಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಹಾಗು ಹಿಂದಿನ ರಾಜ್ಯ ಕಾರ್ಯದರ್ಶಿ ಜೆ ಎಸ್ ಮಜುಂದಾರ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗು ಹಿಂದಿನ ರಾಂಚಿ ಜಿಲ್ಲಾ ಕಾಯ್ದರ್ಶಿ ಸುಫಲ್ ಮಹತೊ ಮತ್ತು ಇತರ 18 ಸಿಪಿಐ(ಎಂ) ಕಾರ್ಯಕರ್ತರಿಗೆ ಒಂದು ವರ್ಷದ ಜೈಲು ಶಿಕ್ಷೆ ವಿಧಿಸಿದೆ. ಝಾರ್ಖಂಡ್ ಮುಕ್ತಿ ಮೋರ್ಚಾದ ಹಾಲಿ ಶಾಸಕ ಅಮಿತ್ ಮಹತೊ ಅವರಿಗೂ ಶಿಕ್ಷೆ ವಿಧಿಸಲಾಗಿದೆ.

ಮಾರ್ಚ್1, 2005ರಂದು ಮಾಜಿ ಝಾರ್ಖಂಡ್ ಉಪಮುಖ್ಯಮಂತ್ರಿ ಸುದೇಶ ಮಹತೊ ನೇತೃತ್ವದ ಎಜೆಎಸ್‌ಯು ಕಿಡಿಗೇಡಿಗಳು ರಾಂಚಿ ಜಿಲ್ಲೆಯ ಮುರು ಎಂಬಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಮಾಡಿದ್ದ ದಾಳಿಯನ್ನು ಪ್ರತಿಭಟಿಸಿ ಪ್ರತಿಭಟನಾ ಕಾರ್ಯಕ್ರಮವನ್ನು ನಡೆಸಲಾಗಿತ್ತು. ಪೋಲೀಸರು ಎಜೆಎಸ್‌ಯು ಕಿಡಿಗೇಡಿಗಳ ಮೇಲೆ ಕ್ರಮ ಕೈಗೊಳ್ಳದೆ ಆ ಪ್ರತಿಭಟನೆಯನ್ನು ಸಂಘಟಿಸಿದ್ದ ಮುಖಂಡರ ಮೇಲೆಯೇ ಮೊಕದ್ದಮೆಗಳನ್ನು ಹಾಕಿದರು. ಬಿಜೆಪಿ–ಎಜೆಎಸ್‌ಯು ನಿರ್ದೇಶನದಂತೆ ಈ ಸುಳ್ಳು ಕೇಸ್ ಹಾಕಲಾಗಿತ್ತು, ಇದೊಂದು ರಾಜಕೀಯ ದುರುದ್ದೇಶದ ಪಿತೂರಿ ಎಂದು ಇದನ್ನು ಖಂಡಿಸಿರುವ ಸಿಪಿಐ(ಎಂ) ಝಾರ್ಖಂಡ್ ರಾಜ್ಯ ಸಮಿತಿ ಇದರ ವಿರುದ್ಧ ಹೈಕೋರ್ಟಿಗೆ ಅಪೀಲು ಸಲ್ಲಿಸಲಾಗುವುದು ಹಾಗೂ ಈ ಪಿತೂರಿಯನ್ನು ರಾಜಕೀಯವಾಗಿ ಎದುರಿಸಲಾಗುವುದು ಎಂದು ಹೇಳಿದೆ.



ಪ್ರಶಸ್ತಿ ಧನವನ್ನು ಪಶ್ಚಿಮ ಬಂಗಾಲ ಪರಿಹಾರ ನಿಧಿಗೆ ನೀಡಿದ ಯೆಚೂರಿ

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಅವರಿಗೆ ಕೇರಳದ ಎನ್.ರಾಮಚಂದ್ರನ್ ಫೌಂಡೇಶನ್ ತನ್ನ 2016 ರ ಶ್ರೇಷ್ಟ ಸಾರ್ವಜನಿಕ ಸೇವೆಯ ಪುರಸ್ಕಾರವನ್ನು ನೀಡಿ ಗೌರವಿಸಿದೆ. ಜೂನ್ 29ರಂದು ಕೇರಳದ ರಾಜ್ಯಪಾಲರು ಅಲ್ಲಿ ಮುಖ್ಯಮಂತ್ರಿಗಳು ಮತ್ತು ಪ್ರತಿಪಕ್ಷ ನಾಯಕರ ಸಮ್ಮುಖದಲ್ಲಿ ಈ ಪುರಸ್ಕಾರವನ್ನು ಯೆಚೂರಿಯವರಿಗೆ ನೀಡಿದರು.

ಎನ್. ರಾಮಚಂದ್ರನ್ 65 ವರ್ಷಗಳಿಗೂ ಹೆಚ್ಚು ಕಾಲ ಜನಗಳ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸಿದ ವರದಿಗಳಿಗೆ ಪ್ರಖ್ಯಾತರಾಗಿದ್ದ ಪತ್ರಕರ್ತರು. ಈ ಸಂದರ್ಭದಲ್ಲಿ ಯೆಚೂರಿ "ರಾಷ್ಟ್ರೀಯವಾದದ ಹೊಸ ಕಲ್ಪನೆಗಳು ಮತ್ತು ಮಾಧ್ಯಮ' ಎಂಬ ವಿಷಯದ ಮೇಲೆ ಉಪನ್ಯಾಸ ನೀಡಿದರು.

ಈ ಪುರಸ್ಕಾರದಲ್ಲಿ ಒಂದು ಪ್ರಶಸ್ತಿ ಪತ್ರ, ಸ್ಮರಣಿಕೆ ಮತ್ತು 50,000 ರೂ.ನಗದು ಇದ್ದು, 50,000 ರೂ.ಗಳನ್ನು ಯೆಚೂರಿಯವರು ಪಶ್ಚಿಮ ಬಂಗಾಲ ರಾಜ್ಯ ಪರಿಹಾರ ನಿಧಿಗೆ ನೀಡಿದ್ದಾರೆ. ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ದಾಳಿಗಳಿಗೆ ತುತ್ತಾದ ಸಂಗಾತಿಗಳ, ಅವರ ಕುಟುಂಬಗಳ ಮರುವಸತಿಗೆ ಈ ಪರಿಹಾರ ನಿಧಿಯನ್ನು ಸಂಗ್ರಹಿಸಲಾಗುತ್ತಿದೆ.

ಬೆಂಗಳೂರಿನಲ್ಲಿ ಅಖಿಲ ಭಾರತ ಕಿಸಾನ್ ಮಂಡಳ ಸಭೆ

ಪುಟ 2 ರಿಂದ

ಕಾರ್ಪೊರೇಟ್ ಮತ್ತು ರಿಯಲ್ ಎಸ್ಟೇಟ್ ಕಂಪನಿಗಳು ಸುಲಭವಾಗಿ ಭೂಮಿಯನ್ನು ಲಾಭಕೋರತನಕ್ಕೆ ದುರ್ಬಳಕೆ ಮಾಡಿಕೊಳ್ಳಲು ಯತ್ನಿಸಿತ್ತು. ಕೈಗಾರಿಕಾ ಕಾರಿಡಾರ್‌ಗಳು ಮತ್ತು ಸ್ಮಾರ್ಟ್ ಸಿಟಿ ಹೆಸರಿನಲ್ಲಿ ಲಕ್ಷಾಂತರ ಎಕರೆ ಕೃಷಿ ಭೂಮಿಯನ್ನು ರೈತರಿಂದ ಖಾಸಗಿಯವರಿಗೆ ಪರಭಾರೆ ಮಾಡುವಂಥಹ ಕ್ರಮಗಳನ್ನು ಕೈಗೊಂಡಿದೆ ಎಂದರು.

ರೈತಾಪಿ ಅಥವಾ ಕೃಷಿ ಕೂಲಿ ಕಾರ್ಮಿಕರಿಗೆ ಯಾವುದೇ ಸಾಮಾಜಿಕ ಭದ್ರತೆ ಸೌಲಭ್ಯಗಳಿಲ್ಲ. ಬೆಳೆ ನಷ್ಟಕ್ಕಾಗಿ ಸಮಗ್ರ ರೈತ ವಿಮೆ ಜಾರಿಗೆ ತರುವ ಬದಲಿಗೆ ಕಾರ್ಪೊರೇಟ್ ಕಂಪನಿಗಳು ಕೃಷಿ ವಿಮೆ ಮಾಡಿಸಲು ರಹದಾರಿ ನೀಡಲಾಗಿದೆ. ಚಿಲ್ಲರೆ ರಂಗ, ಕೃಷಿ ಸಂಸ್ಕರಣೆ, ತೋಟಗಾರಿಕೆ, ಇತ್ಯಾದಿಗಳಲ್ಲಿ ವಿದೇಶಿ ನೇರ ಬಂಡವಾಳ ಆಹ್ವಾನಿಸಲು ರಹದಾರಿ ನೀಡಿರುವುದರಿಂದ ಲಕ್ಷಾಂತರ ಜನತೆ ನಿರುದ್ಯೋಗಿಗಳಾಗಿದ್ದಾರೆ. ಇಂತಹ ನೀತಿಗಳಿಂದ ಎಲ್ಲ ವರ್ಗದ ರೈತರ ಆದಾಯವು ಕಡಿಮೆಯಾಗುತ್ತಿದೆ ಎಂದು ಹನ್ನನ್ ಮುಲ್ಲ ಆತಂಕ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ, ಅಖಿಲ ಭಾರತ ಕಿಸಾನ್ ಮಂಡಳಿ ಸಭೆಯು ಈ ಮೇಲೆ ತಿಳಿಸಿರುವ ಚಳುವಳಿಗಳನ್ನು ನಡೆಸಲು ನಿರ್ಧರಿಸಿದೆ ಎಂದು ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ರಾಜ್ಯಾಧ್ಯಕ್ಷ ಮರುತಿ ಮಾನ್ಪಡೆ, ಎಐಕೆಎಸ್ ನ ರಾಷ್ಟ್ರೀಯ ಜಂಟಿ ಕಾರ್ಯದರ್ಶಿಗಳಾದ ಎನ್.ಕೆ ಶುಕ್ಲಾ, ವಿಜು ಕೃಷ್ಣನ್, ರಾಷ್ಟ್ರೀಯ ಮುಖಂಡರಾದ ಪಿ. ಕೃಷ್ಣಪ್ರಸಾದ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಅಖಿಲ ಭಾರತ ಕಿಸಾನ್ ಸಭಾದ, ಎಐಕೆಸಿ ಸಭೆಯು ಜೂಲೈ 01 ರಿಂದ 03, 2016 ರವರೆಗೆ ಅತ್ಯಂತ ಯಶಸ್ವಿಯಾಗಿ ನೆರವೇರಿತು. ಮಳೆಯ ನಡುವೆಯು, ಬಿತ್ತನೆ ಕೆಲಸ ಆರಂಭಗೊಂಡಿದ್ದರೂ ಸುಮಾರು 5000 ಕ್ಕೂ ಹೆಚ್ಚು ರೈತರು, ಕೂಲಿಕಾರರು ಪಾಲ್ಗೊಳ್ಳುವ ಮೂಲಕ ಜೂಲೈ–01 ರ ಬಹಿರಂಗ ಸಬಯನ್ನು ಯಶಸ್ವಿಗೊಳಿಸಿದರು.

ಇದರ ಯಶಸ್ವಿಗಾಗಿ ಕಳೆದ ಎರಡು ತಿಂಗಳಿಂದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸಿದ್ಧತೆ ನಡೆಸಲು ತೊಡಗಿತ್ತು. ಬೆಂಗಳೂರಿನಲ್ಲಿ ಮುಖ್ಯವಾಗಿ ಬೆಂಗಳೂರು ನಗರ, ಹಾಗೂ ಗ್ರಾಮೀಣ ಮತ್ತು ರಾಮನಗರ ಜಿಲ್ಲೆಗಳ ರೈತ ಸಂಘದ ಕಾರ್ಯಕರ್ತರು, ಸಿಐಟಿಯುನ ವಿವಿಧ ಅಂಗ ಸಂಘಗಳ ಕಾರ್ಯಕರ್ತರು, ನಾಯಕರು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆ, ಭಾರತ ವಿಧ್ಯಾರ್ಥಿ ಫೆಡರೇಷನ್, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಮುಂತಾದ ಸಂಘಗಳ ನಾಯಕರು ಒಳಗೊಂಡಂತೆ ಈ ಪ್ರದೇಶಕ್ಕೆ ಸೀಮಿತವಾದ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿತ್ತು. ಅದೆ ರೀತಿ, ಪ್ರಚಾರ, ಸಾರಿಗೆ, ಸ್ವಯಂ ಸೇವಕರ, ವಸತಿ ನಿರ್ವಹಣೆಗಳಿಗೆ ಉಪಸಮಿತಿಗಳನ್ನು ಮಾಡಲಾಗಿತ್ತು.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಮತ್ತು ಬೆಂಗಳೂರಿನಲ್ಲಿ ಎರಡು ವಿಚಾರ ಸಂಕಿರಣಗಳನ್ನು ಸಂಘಟಿಸಲಾಗಿತ್ತು.



JANASHAKTHI KANNADA VARA PATRIKE JULY 17, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026
RNI No. KARKAN /2006/17926 Posted on every Satuarday
Licensed to Post without prepayment License No. WPP-283

ಬೆಂಗಳೂರು: 115 ಕಾರ್ಮಿಕರನ್ನು ಬೀದಿಗೆಸೆದ ದುಷ್ಕೃತ್ಯದ ವಿರುದ್ಧ ಪ್ರತಿಭಟನೆ



ಬೆಂಗಳೂರಿನ ಪೀಣ್ಯ ಪ್ರದೇಶದಲ್ಲಿರುವ ಸ್ಪಾಂಜನ್‌ಲಿಂಕ್ಸ್ ಕಾರ್ಖಾನೆಯ ಕಾರ್ಮಿಕರು ಹಲವರು ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಕೈ ಕಳೆದು ಕೊಂಡಿದ್ದಾರೆ. ಹಲವು ಕಾರ್ಮಿಕರ ಕೈ ಬೆರಳುಗಳು ಮುರಿದುಹೋಗಿವೆ. ಇಂತಹ ಕಾರ್ಮಿಕರಿಗೆ ಪರಿಹಾರ ನೀಡುವ ಬದಲು ಇದ್ದಕ್ಕಿದ್ದ ಹಾಗೇ ಕಾರ್ಖಾನೆಗೆ ಬೀಗ ಹಾಕಿದೆ. ಇದರ ವಿರುದ್ಧ ಅಲ್ಲಿನ ಕಾರ್ಮಿಕರ ಜತೆಗೆ ಟಯೋಟಾ ಸಂಸ್ಥೆ ಅಡಿಯ ಅಂಗಸಂಸ್ಥೆಯ ಕಾರ್ಮಿಕರು ಹಾಗೂ ತುಮಕೂರು ಕೈಗಾರಿಕಾ ಪ್ರದೇಶದ ವಿನಾಯಕ ಸಿ.ಎನ್.ಸಿ. ಸೆಂಟರ್ ಪ್ರೈವೇಟ್ ಲಿಮಿಟೆಡ್‌ನ ಕಾರ್ಮಿಕರು ಜುಲೈ 4 ಮತ್ತು 5ರಂದು ಬನ್ನೇರುಘಟ್ಟ ರಸ್ತೆಯಲ್ಲಿರುವ ಕಾರ್ಮಿಕ ಆಯುಕ್ತರ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿದರು.

ಬಿಡದಿ, ಪೀಣ್ಯ ಮತ್ತು ತುಮಕೂರಿನಲ್ಲಿನ ಕೈಗಾರಿಕಾ ಪ್ರದೇಶದ ಕಾರ್ಖಾನೆಗಳು ಕಾನೂನುಗಳನ್ನು ಪಾಲಿಸುತ್ತಿಲ್ಲ, ಸಂಘಟನೆಯ ಹಕ್ಕುಗಳನ್ನು ನಿರಾಕರಿಸುವ ಕಾರ್ಮಿಕ ವಿರೋಧಿ ನೀತಿಯನ್ನು ಅನುಸರಿಸುತ್ತಿವೆ. ಕಾರ್ಮಿಕರನ್ನು ಬೀದಿಗೆ ತಳ್ಳುತ್ತಿವೆ. ಖಾಯಂ ಕಾರ್ಮಿಕರನ್ನು ಕಡಿಮೆ ಮಾಡಿ ದೊಡ್ಡ ಪ್ರಮಾಣದಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಮಿಕರನ್ನು ದುಡಿಸಿಕೊಳ್ಳಲಾಗುತ್ತಿದೆ. ಅಲ್ಲಿಯ ಕಾರ್ಮಿಕರ ಮುಂದೆ ಇನ್ನೂ ಹಲವು ಸಮಸ್ಯೆಗಳಿವೆ. ಅವನ್ನು ಪರಿಹರಿಸಬೇಕೆಂದು ಆಗ್ರಹಿಸಿ ಈ ಪ್ರತಿಭಟನೆ ನಡೆದಿದೆ.

ಬಿಡದಿ ಕೈಗಾರಿಕಾ ಪ್ರದೇಶದಲ್ಲಿ 250ಕ್ಕೂ ಹೆಚ್ಚು ಕಾರ್ಖಾನೆಗಳು ಇದ್ದು, ಇದರಲ್ಲಿ ಲಕ್ಷಕ್ಕೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದಾರೆ. ಈ ಎಲ್ಲಾ ಸಂಸ್ಥೆಗಳಲ್ಲಿ ಕೇವಲ ಶೇಕಡ 25–30 ರಷ್ಟು ಮಾತ್ರ ಖಾಯಂ ನೌಕರರಿದ್ದಾರೆ, ಉಳಿದಂತೆ ಗುತ್ತಿಗೆ ಆಧಾರದಲ್ಲಿ ಅತೀವ ಶೋಷಣೆಯೊಂದಿಗೆ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿದ್ದಾರೆ. ಇವರಿಗೆ ಕನಿಷ್ಠ ಕೂಲಿ, ಉದ್ಯೋಗದ ಭದ್ರತೆ ಹಾಗು ಕಾನೂನುಬದ್ದ ಸೌಲಭ್ಯಗಳನ್ನು ನೀಡುತ್ತಿಲ್ಲ. ಟಯೋಟಾ (ಟಿ.ಕೆ.ಎಂ.) ದ 9 ಅಂಗ ಸಂಸ್ಥೆಗಳು ಇವೆ. ಇವುಗಳಲ್ಲಿ ದುಡಿಯುವ ಸಾವಿರಾರು ಜನ ಕಾರ್ಮಿಕರು ಕಿರುಕುಳ ಅನುಭವಿಸುತ್ತಿದ್ದಾರೆ. ಇದರಿಂದಾಗಿ ಈ ಕಾರ್ಮಿಕರು ಪ್ರತಿಭಟನೆಗೆ ಇಳಿಯಬೇಕಾಗಿ ಬಂದಿದೆ.

ಪೀಣ್ಯ ಪ್ರದೇಶದಲ್ಲಿರುವ ಸ್ಪಾಂಜನ್‌ಲಿಂಕ್ಸ್ ಕಾರ್ಖಾನೆಯು 32 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ. ಈಗ 115 ಕಾರ್ಮಿಕರು ದುಡಿಯುತ್ತಿರುವ ಈ ಸಂಸ್ಥೆಯಲ್ಲಿ 20ರಿಂದ 32 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವರು ಇದ್ದಾರೆ. ಕಾರ್ಮಿಕರನ್ನು ಹೊರ ಹಾಕುವ ವ್ಯವಸ್ಥಿತವಾದ ಸಂಚು ನಡೆದಿದೆ ಎಂದು ಕಾರ್ಮಿಕರು ಆಪಾದಿಸುತ್ತಿದ್ದಾರೆ. ಉತ್ಪಾದನಾ ಚಟುವಟಿಕೆಯನ್ನು ಸ್ಪ್ಯಾಂಜೇನ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ (ಎಸ್.ಇ.ಪಿ.ಎಲ್.) ಎಂಬ ತನ್ನದೇ ಇನ್ನೊಂದು ಘಟಕಕ್ಕೆ ಸ್ಥಳಾಂತರ ಮಾಡಿ, ಜೂನ್ 27ರಿಂದ ಅಕ್ರಮವಾಗಿ ಉದ್ದಿಮೆ ಹಸ್ತಾಂತರದ ಹೆಸರಿನಲ್ಲಿ ಕಾರ್ಖಾನೆಯನ್ನು ಮುಚ್ಚಲಾಗಿದೆ.

ಕೆಲಸ ಕಳೆದುಕೊಂಡ 115 ಜನ ಕಾರ್ಮಿಕರು 2016ರ ಜೂನ್ 27ರಿಂದ ಬೀದಿಗೆ ಬಿದ್ದಿದ್ದಾರೆ. ಸ್ಪ್ಯಾಂಜೇನ್ ಇಂಜಿನಿಯರಿಂಗ್ ಕಾರ್ಖಾನೆಯಲ್ಲಿ ಕೇವಲ 25 ಜನ ಕಾರ್ಮಿಕರಿದ್ದು ಸುಮಾರು 200 ಜನ ಗುತ್ತಿಗೆ ಕಾರ್ಮಿಕರಿಂದ ಕೆಲಸ ನಿರ್ವಹಿಸಲಾಗುತ್ತಿದೆ. ಕಾರ್ಮಿಕರು ಸಂಘಟಿ–ತರಾದಾಗ 70ಕ್ಕೂ ಹೆಚ್ಚು ಕಾರ್ಮಿಕರಿಗೆ ಕೆಲಸ ನಿರಾಕರಣೆ ಮಾಡಲಾಗಿತ್ತು.

ಕಾರ್ಮಿಕ ಆಯುಕ್ತರ ಕಛೇರಿ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ವಿವಿಧ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಸುಮಾರು 500ಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದ್ದರು. ಈಗ ಕಾರ್ಮಿಕ ಇಲಾಖೆಯು ಸ್ಪ್ಯಾಂಜೇನ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್‌ನ ಕಾಂಟ್ರಾಕ್ಟ್ ಗುತ್ತಿಗೆಯನ್ನು ರದ್ದು ಮಾಡಿದೆ ಎಂದು ತಿಳಿದು ಬಂದಿದೆ.

ಎಂ.ಎನ್.ಸಿ. ಗಳ ಮೇಕ್ ಇನ್ ಇಂಡಿಯಾ

ಟೋಯೋಟಾ ಗುಂಪಿಗೆ ಸೇರಿದ ಸ್ಪಾಂಜನ್‌ಲಿಂಕ್ಸ್ ಕಾರ್ಖಾನೆಯಲ್ಲಿ ಕೈ ಹಾಗೂ ಕೈ ಬೆರಳುಗಳು ಕಳೆದು ಕೊಂಡಿರುವ ಕಾರ್ಮಿಕರು.








ಚಿತ್ರ ನೋಟ

ಹೆಚ್.ಆರ್. ನವೀನ್‌ಕುಮಾರ್





JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**